ಮಹಾತ್ಮರ ಮಹೋದ್ಗಾರ

ಅನುವಾದಕರು:
ಶ್ರೀ. ಶಂ. ಬಾ. ವಿದ್ಯಾಕರ
[illegible]
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ

—— ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ ——

Editor:
H. R. Purohit

—(ಸಂಪುಟ ೧೯)—

ಹುಬ್ಬಳ್ಳಿ, ಸೋಮವಾರ ತಾರೀಖು [illegible]

ವರ್ಹಾಡವನ್ನು ಹೈದರಾಬಾದಕ್ಕೆ ಸೇರಿಸಲು ನಿಜಾಮರ ಭಗೀರಥ ಪ್ರಯತ್ನ: ಈ ಬಗ್ಗೆ ಪತ್ರಿಕಾ ಪ್ರಚಾರ—ಪ್ರಚಂಡ ಘಟನಾತ್ಮಕ ಪ್ರಯತ್ನ ಮಾಡಲಾಗುವದೆಂಬ ಹೈದರಾಬಾದ ಸರಕಾರದ ಪ್ರಕಟನೆ--ವರ್ಹಾಡದ ಸರ್ವ ಪ್ರಜೆಗಳ ವಿರೋಧ

ನಿಜಾಮರು ವರ್ಹಾಡವನ್ನು ಎಂದೂ ಗೆದ್ದಿಲ್ಲ. ತಮ್ಮ ಕ್ಷಾತ್ರಬಲದಿಂದ ಯಾವ ಕಾಲದಲ್ಲೂ ವರ್ಹಾಡದ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಿಲ್ಲ. ಬ್ರಿಟಿಶರಿಂದ ಉಚಿತವಾಗಿ ಒಂದಾನೊಂದು ಕಾಲದಲ್ಲಿ ಅದನ್ನು ಪಡೆದು ೫೦ ವರ್ಷಗಳ ವರೆಗೆ ಆಳಿದರು. ಆದರೆ ನ್ಯಾಯ್ಯವಾಗಿ ಅಧಿಕಾರಿಗಳಾಗಿದ್ದುದರ ಪರಿಣಾಮದಿಂದ ಆ ಹಕ್ಕನ್ನು ಕಳೆದುಕೊಂಡರು. ಇಂದು ವರ್ಹಾಡವನ್ನು ಪಡೆಯಲು ಹೊಂಚುಹಾಕುವರು. ಇದು ಯಾವ ಕಾರಣದಿಂದಲೂ ನ್ಯಾಯ್ಯವಲ್ಲವೆಂದು ವರ್ಹಾಡಸ್ಥರ ಮತ.

ಜೂನ ೧೬ ರಿಂದ ೧೮ ರ ವರೆಗೆ ಜರುಗಿದ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸಿನ ಸಭೆಯಲ್ಲಿ ಹೈದರಾಬಾದು ಹಿಂದೀ ಒಕ್ಕೂಟವನ್ನು ಸೇರದಿದ್ದರೆ ಪ್ರಜೆಗಳ ಪ್ರತಿಭಟನೆ ನಿಶ್ಚಿತವೆಂದು ಸಾರಲಾದುದು ಎಲ್ಲರಿಗೂ ತಿಳಿದ ಸಂಗತಿ. ಬ್ರಿಟಿಶ ಸರಕಾರದ ಜೂನ ೩ ರ ಘೋಷಣೆಯ ನಂತರ ನಿಜಾಮ ಸಾಹೇಬರು ೧೯೪೮ ರ ಜೂನಿನ ಬಳಿಕ ಹೈದರಾಬಾದು ಸ್ವತಂತ್ರವಾಗುವದೆಂದು ಹೇಳುತ್ತಿರುವದಲ್ಲದೆ ಹತ್ತಿರದ ವರ್ಹಾಡವನ್ನು ಪುನಃ ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲು ನಾನಾ ದಂಡಗಳಿಂದರ ಸಿದ್ಧತೆಯನ್ನೂ ಮಾಡುತ್ತಿರುವದೆಂದು ಸುದ್ದಿ ಹಬ್ಬಿದೆ. ನಿಜಾಮರ ಖಂಡನೀಯವಾದ ಈ ಆಕ್ರಮಣಶೀಲತೆಯ ಸಂಚು ಹೊಂಚುಗಳಿಗೆ ಪ್ರತಿಭಟನೆಯ ರೂಪವಾಗಿ ತಾ॥ ೨೦ ಏಪ್ರಿಲ್ ೧೯೪೭ರಲ್ಲಿ ಸೇರಿದ ವರ್ಹಾಡದ ಸರ್ವಪಕ್ಷೀಯ ಸಮ್ಮೇಳನದಲ್ಲಿ ಐತಿಹಾಸಿಕ ಮತ್ತು ರಾಜಕೀಯ ಕಾರಣಗಳ ಕೂಲಂಕಷ ವಿಮರ್ಶೆ ಮಾಡಿ ನಿಜಾಮ ಸಾಹೇಬರಿಗೆ ವರ್ಹಾಡದ ಮೇಲೆ ಯಾವ ವಿಧದ ಹಕ್ಕೂ ಇಲ್ಲವೆಂದು ತೀರ್ಮಾನಿಸಿ ಅದರಂತೆ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ನಿಜಾಮ ಸಾಹೇಬರು ಮೂಲತಃ ಯಾರು? ಅವರಿಗೆ ಹೈದರಾಬಾದ ವರ್ಹಾಡಗಳ ಮೇಲೆ ಹೇಗೆ, ಯಾವಾಗ, ಎಂತಹ ಅಧಿಕಾರ ಪ್ರಾಪ್ತವಾಯಿತು? ನಿಜಾಮ ಮನೆತನ ಹೇಗೆ ರಾಜ್ಯಭಾರ ನಿರ್ವಹಿಸುತ್ತ ಬಂದಿದೆ? ಸದ್ಯಃ ಅದರ ಹಕ್ಕು ಬಾಧ್ಯತೆಗಳಾವುವು? ಎಂಬುದನ್ನು ತಿಳಿದುಕೊಳ್ಳಬೇಕಾದುದು ಅಗತ್ಯವಾಗಿದೆ.

ನಿಜಾಮರ ಮನೆತನ

ಹೈದರಾಬಾದದ ನಿಜಾಮರ ಮನೆತನದ ಮೊದಲನೆಯ ನಿಜಾಮರು ಮೊಗಲ ಚಕ್ರವರ್ತಿಯಿಂದ ಆ ಚಕ್ರಾಧಿಪತ್ಯಕ್ಕೆ ಸೇರಿದ ದಕ್ಷಿಣದ ಪ್ರಾಂತಗಳನ್ನು ಆಳಲು ನಿಯಮಿಸಲ್ಪಟ್ಟ ಸುಬೇದಾರರಾಗಿದ್ದರು. ಮೊಗಲ ಸಾಮ್ರಾಜ್ಯ ಖಿಲವಾದ ಕಾಲದಲ್ಲಿ ಅವರು ತಮ್ಮ ಆಡಳಿತವನ್ನು ಸ್ವತಂತ್ರವಾಗಿ ಸಾಗಿಸತೊಡಗಿದರು. ಆ ಕಾಲದಲ್ಲಿ ಪ್ರಬಲವಾಗುತ್ತಿದ್ದ ಈಸ್ಟ್ ಇಂಡಿಯಾ ಕಂಪನಿಯೊಡನೆ ೧೭೬೬ರಲ್ಲಿ ಮೊದಲನೆಯ ಒಪ್ಪಂದವನ್ನು ಮಾಡಿಕೊಂಡು ರಾಜ್ಯದ ಮೇಲಿನ ತಮ್ಮ ಸ್ವಾಮ್ಯವನ್ನು ಸ್ಥಿರೀಕರಿಸಿಕೊಂಡರು. ಅನಂತರ ಕೂಡ ರಾಜ್ಯಕ್ಕೆ ಸೇರಿದ ಬೇರೆ ಬೇರೆ ಭಾಗಗಳ ಆಡಳಿತದಲ್ಲಿ, ಟಪ್ಪಾಲು ಮತ್ತು ರೈಲು ರಸ್ತೆಗಳ ವಿಷಯವಾಗಿ ಹಾಗೂ ವಾಣಿಜ್ಯ ಮತ್ತು ಶಾಸನ ಪ್ರಯೋಗಗಳಲ್ಲಿ ವಿವಿಧ ಒಪ್ಪಂದಗಳನ್ನು ಬ್ರಿಟಿಶರೂ ನಿಜಾಮರೂ ಮಾಡಿಕೊಳ್ಳುತ್ತ ಬಂದರು. ಅವುಗಳಲ್ಲಿ ಕೆಲವು ಬಹು ಮುಖ್ಯವಾಗಿದ್ದು ನಿಜಾಮರ ಅಧಿಕಾರಪರಿಧಿಯನ್ನು ಚೆನ್ನಾಗಿ ಪ್ರಮಾಣೀಕರಿಸುವಂಥವಾಗಿವೆ.

ವರ್ಹಾಡದ ಇತಿಹಾಸ

೧೮೦೩ರ ದೇವಗಾಂವ ಒಪ್ಪಂದದನ್ವಯ ನಾಗಪುರದ ಭೋಸಲೆಗೆ ಸೇರಿದ್ದ ವರ್ಹಾಡವು ಈಸ್ಟ್ ಇಂಡಿಯಾ ಕಂಪನಿಯ ವಶಕ್ಕೆ ಬಂದಿತು. ಈಗ ಹೇಗೋ ಆ ಕಾಲದಲ್ಲೂ ನಿಜಾಮ ಮನೆತನದವರು. ಬ್ರಿಟಿಶರ ಮಿತ್ರರಾಗಿಯೇ ಇದ್ದು ದೇಶೀಯ ರಾಜರು ಬ್ರಿಟಿಶರ ವಿರುದ್ಧ ಹೂಡಿದ ಯುದ್ಧಗಳಲ್ಲೆಲ್ಲ ಹೆಚ್ಚಾಗಿ ಬ್ರಿಟಿಶರಿಗೇ ಸಹಾಯ ಮಾಡುತ್ತ, ಕ್ರಮೇಣ ಪ್ರಬಲರಾಗುತ್ತಿದ್ದ ಅವರ ಕೃಪೆಗೆ ಪಾತ್ರರಾಗುತ್ತ ಬಂದರು. ಹೀಗಿರುವಲ್ಲಿ ೧೮೦೪ರಲ್ಲಿ ದಕ್ಷಿಣದ ಸುಭೇದಾರರೆನಿಸಿದ್ದ ನಿಜಾಮರಿಗೆ ಈಸ್ಟ್ ಇಂಡಿಯಾ ಕಂಪನಿಯು ವರ್ಹಾಡವನ್ನು ದಾನವಾಗಿ ಕೊಟ್ಟಿತು.

ನಿಜಾಮರ ರಾಜ್ಯಭಾರ

ದಾನಪಡೆದ ಎಮ್ಮೆಯನ್ನು ಹಿಂಡುವಂತೆ ಕೈಗೆಬಂದ ವರ್ಹಾಡದಲ್ಲಿ ನಿಜಾಮ ಸಾಹೇಬರು ಆಡಳಿತವನ್ನು ಸಾಗಿಸಿದರು. ೧೮೦೪ ರಿಂದ ೧೮೫೩ರ ವರೆಗಿನ ಅವರ ಆಳಿಕೆಯನ್ನು "ಅತ್ತಿಲೆಯ ೮೫ ಹಿಂದುವ ಕ್ರಮ" ವೆಂದು ಸರ್ ಅಲ್‌ಫ್ರೆಡ್ ಲ್ಯಾಲ್ಲರು ವರ್ಹಾಡದ ಗಾಝೆಟಿಯರಿನಲ್ಲಿ ವರ್ಣಿಸಿದ್ದಾರೆ. ಜನರನ್ನು ನಾನಾವಿಧದ ಪೀಡೆಗೆ ಗುರಿಪಡಿಸುತ್ತಿದ್ದುದಲ್ಲದೆ ಕಂದಾಯವನ್ನು ಅತ್ಯಂತ ಕ್ರೂರವೂ ಅನ್ಯಾಯವೂ ಆದ ಕ್ರಮಗಳಿಂದ ವಸೂಲು ಮಾಡಲಾಗುತ್ತಿತ್ತು. ವರ್ಷಕ್ಕೆ ಇಂತಿಷ್ಟು ಕೊಡಬೇಕೆಂಬ ಕರಾರಿನ ಮೇಲೆ ಬಡ್ಡಿಗೆ ಸಾಲ ಕೊಡುವ ಸಂಪನ್ನರಿಗೆ ವರ್ಹಾಡವನ್ನು ಗುತ್ತಿಗೆಗೆ ಕೊಡಲಾಗುತ್ತಿತ್ತು. ಆ ಸಾಹುಕಾರರು "ಹವಲ್ ಕರೇಸೋ ಕಾಯದಾ" ಎಂದು ಅಲ್ಲಿ ಸ್ವಚ್ಛಂದವಾಗಿ ಸುಲಿಗೆ ಮಾಡುತ್ತಿದ್ದರು. ಪ್ರಾಂತದಲ್ಲಿ ಕಳ್ಳಕಾಕರ ಭೀತಿಯನ್ನಂತೂ ಹೇಳತೀರದು. ಹತ್ತಿರದ ರೋಹಿಲ್ಲರು ಗುಂಪುಗುಂಪಾಗಿ ಬಂದು ಕಳವು ದರೋಡೆಗಳಿಂದ ಪ್ರಜೆಗಳ ಆಸ್ತಿಪಾಸ್ತಿ ಒಡವೆ ವಸ್ತುಗಳನ್ನು ಲೂಟಿಮಾಡಿಕೊಂಡೊಯ್ಯುತ್ತಿದ್ದರು. ಅದೊಂದು ಸಂಪೂರ್ಣ ಅರಾಜಕ ಪ್ರಪಂಚವಾಗಿತ್ತು!

ಬ್ರಿಟಿಶರ ಪ್ರವೇಶ

ಮೇಲೆ ಹೇಳಿದಂತೆ ನಿಜಾಮರ ಸ್ವೈರ ಕಾರಭಾರದಲ್ಲಿ ವರ್ಹಾಡದ ಪ್ರಜೆಗಳು ನಾನಾ ವಿಧದ ಕಷ್ಟನಷ್ಟಗಳಿಗೊಳಗಾದುದನ್ನು ಕಂಡು ಬ್ರಿಟಿಶ ಸರಕಾರವು ಅದರ ಆಡಳಿತವನ್ನು ಮುಕ್ತಾಯಗೊಳಿಸಲು ನಿಶ್ಚಯಿಸಿತು. ಆ ಸಮಯದಲ್ಲಿ ಹೈದರಾಬಾದದಲ್ಲಿಟ್ಟಿದ್ದ ಬ್ರಿಟಿಶ ಸೈನ್ಯದ ಪೋಷಣಕ್ಕಾಗಿ ನಿಜಾಮರು ಕೊಡಬೇಕಾಗಿದ್ದ ಹಣ ಬಾಕಿ ಬಹಳ ಬೆಳೆದುಹೋಗಿತ್ತು. ಅದುದರಿಂದ ೧೮೫೩ರಲ್ಲಿ ಸೈನ್ಯದ ವೆಚ್ಚಕ್ಕಾಗಿಯೂ ೧೮೦೦ ರ ಒಪ್ಪಂದದ ೧೧ ನೆಯ ಕಲಮಿನ ಕರಾರನ್ನು ಪೂರೈಸುವುದರ ಸಲುವಾಗಿಯೂ ವರ್ಹಾಡ ಪ್ರಾಂತವನ್ನು ನಿಜಾಮರು ಸಂಪೂರ್ಣವಾಗಿ ಬ್ರಿಟಿಶರಿಗೆ ಬಿಟ್ಟುಕೊಟ್ಟರು. ಅದರಿಂದ ನಾಮಮಾತ್ರ ಸ್ವಾಮ್ಯವಲ್ಲದೆ ಆಡಳಿತದ ಎಲ್ಲ ಅಧಿಕಾರವೂ ಬ್ರಿಟಿಶರ ಕೈಗೆ ಹೋದಂತಾಯಿತು. ೧೮೫೩ ರಿಂದ ೧೯೦೩ ರ ವರೆಗೆ ಹೈದರಾಬಾದ ರೆಸಿಡೆಂಟರೇ ವರ್ಹಾಡವನ್ನು ಬೇರೆಯಾಗಿ ಆಳುತ್ತಿದ್ದರು. ಅನಂತರ ವೆಚ್ಚ ಕಡಿಮೆ ಮಾಡುವ ದೃಷ್ಟಿಯಿಂದ ಮಧ್ಯಪ್ರಾಂತದ ಚೀಫ ಕಮೀಶನರ ಆಡಳಿತಕ್ಕೆ ವರ್ಗಾಯಿಸಲ್ಪಟ್ಟಿತು. ಸೂಕ್ಷ್ಮವಾಗಿ ಕಾಣುವದೆಂಬಂತೆ ಹೋದರೆ ವರ್ಹಾಡದ ಜನರು ಬ್ರಿಟಿಶ ಪ್ರಜೆಗಳೇ ಆಗಿದ್ದರೂ ವಾಸ್ತವಿಕವಾಗಿ ಆಡಳಿತದ ಮತ್ತು ಆರ್ಥಿಕ ದೃಷ್ಟಿಗಳಿಂದ ಮಧ್ಯಪ್ರಾಂತದ ಜೊತೆಜೊತೆಗೇ ಸಾಗುತ್ತಿದ್ದ ವರ್ಹಾಡಸ್ಥರು ಜೀವನದ ಸರ್ವ ವ್ಯವಹಾರಗಳಲ್ಲಿ ಬ್ರಿಟಿಶ ಪ್ರಜೆಗಳಂತೆಯೇ ಬಾಂಬರಿಯುಕ್ತರಾಗಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ವರ್ಹಾಡದ ಆಡಳಿತದ ಸಂಪೂರ್ಣಾಧಿಕಾರವು ಶಾಶ್ವತವಾಗಿ ಬ್ರಿಟಿಶರ ಕೈವಶವಾದಂತೆಯೂ ಮತ್ತಿತರ ಹಕ್ಕುಗಳೇನಾದರೂ ಇದ್ದರೆ ಅವು ಮಾತ್ರ ನಿಜಾಮರ ಪಾಲಿಗುಳಿದಂತೆಯೂ ಆಯಿತು.

ಆಡಳಿತದ ಅಧಿಕಾರ ಪುನಃ ಪಡೆವ ಪ್ರಯತ್ನ

ಅಂದಿನಿಂದ ಅನೇಕ ಸಲ ವರ್ಹಾಡದ ಆಡಳಿತದ ಅಧಿಕಾರವನ್ನು ಪುನಃ ಪಡೆಯಬೇಕೆಂದು ನಿಜಾಮರು ಬ್ರಿಟಿಶ ಸರಕಾರದೊಡನೆ ವೈಸರಾಯರುಗಳ ಮೂಲಕ ಎಷ್ಟೋ ಸಲ ವ್ಯವಹರಿಸಿದರು; ಆದರೆ ಕಡೆಗೂ ಕೃತಕೃತ್ಯರಾಗಲಿಲ್ಲ. ೧೮೭೭ ರಲ್ಲಿ ಸರ್ ಸಾಲಾರಜಂಗರು ಮೊದಲು ಪ್ರಯತ್ನವನ್ನು ಪ್ರಾರಂಭಿಸಿದರು. ಅದಕ್ಕೆ ಭಾರತ ಮಂತ್ರಿಗಳಿಂದ ನಿರಾಶಾದಾಯಕ ಉತ್ತರ ಬಂದಿತು. ಕರಾರಿನಲ್ಲಿ ಬ್ರಿಟಿಶರ ಆಡಳಿತದಲ್ಲಿ ಎಷ್ಟು ಕಾಲ ವರ್ಹಾಡವಿರಬೇಕೆಂಬುದನ್ನು ಕಾಣಿಸದಿದ್ದುದರಿಂದ ಅವರ ಆಡಳಿತವನ್ನು ನಿಜಾಮರು ಹೇಳಿದ ಕೂಡಲೆ ನಿಲ್ಲಿಸಲು ಬರುವಂತಿಲ್ಲವೆಂದು ಸ್ಪಷ್ಟಪಡಿಸಲಾಯಿತು. ೧೯೨೬ ರಲ್ಲಿ ಲಾರ್ಡ ರೀಡಿಂಗರು ಮೇಲೆ ಹೇಳಿದ್ದು ಸಾರ್ವಭೌಮ ಸರಕಾರದ ಕೊನೆಯ ತೀರ್ಪೆಂದೂ ಆ ಪ್ರಶ್ನೆಯನ್ನು ಪುನಃ ಎತ್ತಬಾರದೆಂದೂ ನಿಜಾಮರಿಗೆ ಖಂಡಿತೋಕ್ತಿಯಿಂದ ತಿಳಿಸಿದರು.

ಇಷ್ಟಾದರೂ ೧೯೩೫ ರಲ್ಲಿ ಪುನಃ ನಿಜಾಮರು ಒಂದು ದೊಡ್ಡ ಪತ್ರದ ಮೂಲಕ ಬ್ರಿಟಿಶ ಸರಕಾರಕ್ಕೆ ದೂರುಕೊಟ್ಟರು. ತಾವೊಬ್ಬ ಬ್ರಿಟಿಶರ ಮಿತ್ರರೆಂದೂ ತಮ್ಮೊಡನೆ ವ್ಯವಹಾರದಲ್ಲಿ ಈ ರೀತಿ ಕಠಿನವಾಗಿ ನಡೆದುಕೊಳ್ಳಬಾರದೆಂದೂ ವರ್ಹಾಡದ ಪ್ರಶ್ನೆಯನ್ನು ಪುನಃ ವಿಚಾರಕ್ಕೆ ತೆಗೆದುಕೊಳ್ಳಬೇಕೆಂದೂ ಬರೆದರು. ಅದಕ್ಕೆ ಪ್ರತಿಯಾಗಿ ಆಗಿಂದಾಗ ರೀಡಿಂಗ ಸಾಹೇಬರ ಕಟ್ಟುತ್ತರ ಬಂದಿತು. ಅದರಲ್ಲಿ ಅವರು— ಸಂಸ್ಥಾನಗಳಲ್ಲಿ ಪರಸ್ಪರ ಕಲಹವೆದ್ದಾಗ ಇಲ್ಲವೆ ಯಾವುದಾದರೊಂದು ಸಂಸ್ಥಾನಕ್ಕೂ ಬ್ರಿಟಿಶ ಸರಕಾರಕ್ಕೂ ಭಿನ್ನಾಭಿಪ್ರಾಯ ಉಂಟಾದಾಗ ಅದನ್ನು ವಿಚಾರಿಸಿ ತೀರ್ಪು ಕೊಡುವ ಹಕ್ಕು ಪರಿಪ್ರಾಧಿಕಾರವುಳ್ಳ ಸಾರ್ವಭೌಮ ಬ್ರಿಟಿಶ ಸರಕಾರಕ್ಕೇ ಸೇರಿದ್ದು ಎಂದು ಕಂಠೋಕ್ತವಾಗಿ ಸಾರಿದರು. ಮತ್ತೆ ನಿಜಾಮ ಸಾಹೇಬರು ತಲೆಯ ಮೇಲೆ ಕೈಯಿಟ್ಟು ಕುಳಿತುಕೊಳ್ಳುವಂತಾಯಿತು. ಅನಂತರ ಸರ್ ಸ್ಯಾಮ್ಯುವೆಲ್ ಹೋರರು ಮತ್ತು ಲಾರ್ಡ ಲಿನ್‌ಲಿತ್‌ಗೋರವರೂ ಕೂಡ ಆದಾಗಿ ವರ್ಹಾಡದಮೇಲೆ ನಿಜಾಮರಿಗೆ ಯಾವ ಹಕ್ಕಿದ್ದರೂ ಆಡಳಿತದ ಹಕ್ಕಿಲ್ಲವೆಂದರು. ಹೀಗೆ ಮೇಲಿಂದ ಮೇಲೆ ಬ್ರಿಟಿಶರು ಕೊಟ್ಟ ತೀರ್ಪಿನ ಮೇರೆಗೆ ನಿಜಾಮರಿಗೆ ವರ್ಹಾಡದ ಆಡಳಿತ ವಿಷಯದಲ್ಲಿ ಅಧಿಕಾರವಿಲ್ಲವೆಂಬುದು ಸಿದ್ಧವಾಗಿದೆ.


ನಿಜಾಮರ ವಾದ

೧೯೪೮ರ ಜೂನಿನಲ್ಲಿ ಬ್ರಿಟಿಶ ಸರಕಾರವು ಭಾರತದ ಎಲ್ಲ ಭಾಗಗಳ ಮೇಲಿನ ಎಲ್ಲ ಅಧಿಕಾರವನ್ನೂ ಬಿಟ್ಟುಕೊಡುವುದೆಂದು ಪ್ರಸಿದ್ಧವಾಗಿರುವುದರಿಂದ ಮೊದಲು ತಮಗೆ ಸೇರಿದ್ದ ಇದ್ದ ಹಕ್ಕು ಪುನಃ ಅನುಕೂಲವಾಗಿ ತಮಗೇ ಸಿಗತಕ್ಕದ್ದೆಂದು ನಿಜಾಮ ಸಾಹೇಬರ ವಾದ. ಈ ಸಂದರ್ಭದಲ್ಲಿ ಪರಿಪ್ರಾಧಿಕಾರವೆಂದರೇನೆಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. "ಎಲ್ಲ ಒಪ್ಪಂದ, ಕರಾರುಗಳನ್ನೂ ಮೀರಿದಂತ ಬ್ರಿಟಿಶರ ಸಮ್ರಾಟರ ಉನ್ನತಾಧಿಕಾರವೇ ಪರಿಪ್ರಾಧಿಕಾರವೆನ್ನಿಸುತ್ತದೆ" ಎಂದು ನಿಜಾಮರಿಗೆ ಲಾರ್ಡ ರೀಡಿಂಗರು ಬರೆದ ಪತ್ರದಲ್ಲಿ ಕಾಣಿಸಿದೆ. ಅದುದರಿಂದ ಬ್ರಿಟಿಶರ ಪರಿಪ್ರಾಧಿಕಾರ ಮುಗಿದ ಕೂಡಲೆ ಅವರು ಇತರರೊಡನೆ ಮಾಡಿಕೊಂಡ ಒಪ್ಪಂದಗಳೆಲ್ಲ ನಾಶವಾಗುವವೆಂದು ಹೇಳುವುದು ಅಸಮಂಜಸ. ಹಾಗೆ ಆಗಬೇಕೆಂದರೆ ಹಿಂದುಸ್ತಾನದ ಎಲ್ಲ ಭಾಗಗಳನ್ನೂ ಒಬ್ಬನಲ್ಲ ಒಬ್ಬ ರಾಜನಿಂದೇ ಬ್ರಿಟಿಶರು ಪಡೆದಿರುವದರಿಂದ ಈಗ ಇಡಿಯ ಹಿಂದುಸ್ತಾನವನ್ನು ಒಬ್ಬ ಅಥವಾ ಅನೇಕ ರಾಜರಿಗೆ ಬಿಟ್ಟುಕೊಟ್ಟು ಹೋಗಬೇಕಾದ ವಿಚಿತ್ರವೂ ಹಾಸ್ಯಾಸ್ಪದವೂ ಆದ ತೀರ್ಮಾನಕ್ಕೆ ಬರಬೇಕಾಗುತ್ತದೆ! ಕರಾರುಗಳಂತೆ ಪರಿಗಣಿಸಿಕೊಳ್ಳುವುದಾದರೆ ೧೯೦೨ ನೆಯ ಡಿಸೆಂಬರ ೧೯ರಲ್ಲಿ ಬ್ರಿಟಿಶ ಸರಕಾರಕ್ಕೂ ನಿಜಾಮರಿಗೂ ಆದ ಒಪ್ಪಂದದಂತೆ ಶಾಶ್ವತವಾಗಿ ವರ್ಹಾಡವನ್ನು ಬ್ರಿಟಿಶರ ಆಡಳಿತಕ್ಕೆ ಬಿಟ್ಟುಕೊಟ್ಟದ್ದರಿಂದ ಪುನಃ ಯಾವ ಕಾಲಕ್ಕೂ ನಿಜಾಮರಿಗೆ ವರ್ಹಾಡದ ಆಡಳಿತ ಹಕ್ಕು ಪ್ರಾಪ್ತವಾಗದುದನ್ನು ಮನ್ನಿಸಬೇಕು.

ವರ್ಹಾಡದ ಮುನ್ನಡೆ

ವರ್ಹಾಡವನ್ನು ಮೊದಲು ಬ್ರಿಟಿಶರು ತಮ್ಮ ಸ್ವಂತ ಆಡಳಿತದೊಳಗೆ ತೆಗೆದುಕೊಳ್ಳಲು ಗೌರವವಾಗದು, ಅಥವಾ ಮತ್ತಾವ ಸ್ವಾರ್ಥವೂ ಕಾರಣವಲ್ಲವೆಂದೂ ವರ್ಹಾಡದ ೩೦ ಲಕ್ಷ (ಈಗ ೪೦ ಲಕ್ಷಕ್ಕೆ (ರಿದೆ) ಪ್ರಜೆಗಳ ಹಿತ ಚಿಂತನೆಗಳ ಸಂರಕ್ಷಣೆಯೇ ಕಾರಣವೆಂದೂ ೧೯೭೬ ರಲ್ಲಿ ಲಾರ್ಡ ಸ್ಯಾಲಿಸ್‌ಬರಿಯವರು ಸ್ಪಷ್ಟಪಡಿಸಿದ್ದರು. ೧೮೦೪ ರಿಂದ ೧೮೫೩ ರ ವರೆಗೆ ವರ್ಹಾಡವು ನಿಜಾಮರ ಕೈಯಲ್ಲಿದ್ದಾಗ ಅವರು ದರ್ಬಾರು ನಡೆಸಿದ ಬಗೆ ಮತ್ತು ಆ ಕಾರಣದಿಂದಲೇ ಅವರ ಅಧಿಕಾರವನ್ನು ಬ್ರಿಟಿಶ ಸರಕಾರ ಕಸಿದುಕೊಂಡ ವಿಷಯ—ಇವನ್ನು ಈ ಮೊದಲೇ ತಿಳಿಸಿದ್ದಾಗಿದೆ. ಬ್ರಿಟಿಶರ ಆಡಳಿತಕ್ಕೆ ಒಳಗಾಗಿ ಇಂದಿನ ವರೆಗೆ ಸುಮಾರು ೯೦ ವರ್ಷಗಳಲ್ಲಿ ವರ್ಹಾಡವು ಹೈದರಾಬಾದಿಗಿಂತ ಎಷ್ಟೋ ಪಟ್ಟು ಮುಂದುವರಿದಿದೆ. ಇಂದಿನ ಹೈದ್ರಾಬಾದ ಆಡಳಿತ ನೀತಿ ವ್ಯವಸ್ಥೆಗಳೆಲ್ಲ ಮಧ್ಯಯುಗದವುಗಳಾಗಿರುವುದರಿಂದ ಅಧಿಕಾರವಿಲ್ಲವೆಂಬುದು ಎಲ್ಲರೂ ತಿಳಿದ ವಿಷಯ. ಅಲ್ಲದೆ ಮತ್ತೊಂದು ಮುಖ್ಯ ಸಂಗತಿಯನ್ನು ಇಲ್ಲಿ ಗಮನಿಸಬೇಕು: ಬ್ರಿಟಿಶರು ಯಾವ ವಾದದಿಂದ [illegible] ಹಕ್ಕುಗಳಲ್ಲಿ [illegible] [illegible] ಒಪ್ಪಂದ [illegible] [illegible] ಜಗತ್ತಿನ [illegible] [illegible] [illegible]

— ದಿ. ಕೇ. ಘಟ್ಟಿ



ಗಾಂಧೀಜಿಯವರ ರಾಜಕೀಯ ಪತ್ರಗಳು

ಸಂಗ್ರಾಹಕರು ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು. ಪ್ರಕಾಶಕರು ಶ್ರೀ ಎಸ್ ಎಸ್ ಬೆಂಗೇರಿ, ವಿಜಯ ಮುದ್ರಾಲಯ, ಧಾರವಾಡ. ಪುಟಗಳು ೧೬೮, ಬೆಲೆ ೨ ರೂಪಾಯಿಗಳು.

ಈ ಪುಸ್ತಕ ಬುರ್ಲಿ ಬಿಂದು ಮಾಧವರ ಸಂಪಾದಕತ್ವದಲ್ಲಿ ಹೊರಡುವ ಮಿಂಚಿನಬಳ್ಳಿ ಗ್ರಂಥ ಮಾಲೆಯ ೯ನೆಯ ವರ್ಷದ ೩ನೆಯ ಕುಡಿ. ಇದರಲ್ಲಿ 'ಪಿಮುಗರಿಗೆ' 'ಅಸಹಕಾರ' 'ರಾಜಸನೋಲ್ಲಂಘನ' 'ಪ್ರಾಯೋಪವೇಶ' 'ನರೇಂದ್ರರಿಗೆ' 'ವಾಕ್‌ಸ್ವಾತಂತ್ರ್ಯದ ಸತ್ಯಾಗ್ರಹ,' 'ಚಲೇಜಾವ್ ಚಳುವಳಿ' 'ಮಹೋಪವಾಸ' 'ಮಹಾಕ್ರಾಂತಿಯ ನಂತರ' ಮತ್ತು 'ಪರಿಶಿಷ್ಟ' ಎಂಬ ಹತ್ತು ಅಧ್ಯಾಯಗಳಿವೆ 'ಗಾಂಧೀಜಿಯವರ ಜೀವನವು ಪ್ರಪಂಚದ ಜೀವನದ ವಿವಿಧ ಕ್ಷೇತ್ರಗಳಲ್ಲಿ ಬೆಳಕನ್ನು ಕೊಡುತ್ತಲಿದೆ ಎಂಬ 'ಮೊದಲ ಮಾತಿ'ಗೆ ಸಂಗ್ರಹದಲ್ಲಿರುವ ಪತ್ರ ಸಾಹಿತ್ಯ ಸಾಕ್ಷಿಯಾಗಿದೆ. ಇದರ ಮೇಲೆ ಶ್ರೀ ಸಿದ್ಧವ್ವನಹಳ್ಳಿಯವರ ಸರಳ ಶೈಲಿಯ ಮಾಧುರ್ಯ ಬೇರೆ! ಆತ್ಮೋನ್ನತಿಯನ್ನು ಬಯಸುವ ದೇಶಪ್ರೇಮಿಗಳು ಇದನ್ನು ಅಗತ್ಯವಾಗಿ ಓದಬೇಕು. ಕನ್ನಡ ಸಾಹಿತ್ಯಕ್ಕೆ ಇಂತಹ ಉತ್ತಮ ಕಾಣಿಕೆ ಸಲ್ಲಿಸಿದ ಶ್ರೀ ಶರ್ಮರು ಅಭಿನಂದನಾರ್ಹರು.

ಸಂಧಿಕಾಲ

ಬರೆದವರು ಶ್ರೀ ಕುಳಕುಂದ ಶಿವರಾಯರು; ಪ್ರಕಾಶಕರು ಶ್ರೀ ಕುಳಕುಂದ ಶಿವರಾಯರು, ಜನತಾ ಸಾಹಿತ್ಯ, ಮರಾಠಾಗಲ್ಲಿ, ಹುಬ್ಬಳ್ಳಿ. ಪುಟ ಸಂಖ್ಯೆ ೮೯, ಬೆಲೆ ಹಾಕಿಲ್ಲ.

'ಸಂಧಿಕಾಲ'ದಲ್ಲಿ ಸಂಧಿಕಾಲ, ನೀನೂ ನೀನೂ, ಅಂಧಕಾರದಲ್ಲಿ, ಮುಗಿಯದ ಯುದ್ಧ, ಜೀವನ ಸತ್ಯಕಥೆ, ಬೆಳಕು ಹರಿಯಿತು ಎಂಬ ೬ ಕಥೆಗಳಿವೆ. ಒಂದೊಂದೂ ಒಂದೊಂದು ಬಗೆಯಿಂದ ಚೆನ್ನಾಗಿವೆಯೆಂದೇ ಹೇಳಬಹುದು. ಇದರಲ್ಲಿ ಕಮ್ಯೂನಿಝಂದ ಪ್ರಚಾರ ವಿದ್ದುದನ್ನು ಲೆಕ್ಕಿಸದೆ ಈ ತರುಣ ಕಥೆಗಳು ಕಥೆಗಳೆಂದೇ ಓದಿದರೆ ಯಾರ ಹೃದಯವನ್ನೂ ಕರಗಿಸದಿರವು.

ಪೂರ್ಣಚಂದ್ರ

ಬರೆದವರು ಶ್ರೀ ಅರ್ಚಕ ವೆಂಕಟೇಶರು; ಪ್ರಕಾಶಕರು ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ ಬೆಂಗಳೂರು, ನಗರ. ಪುಟಗಳು ೬೮, ಬೆಲೆ ಸಾದಾಪ್ರತಿಗೆ ೧ ರೂ., ಕ್ಯಾಲಿಕೋ ಪ್ರತಿಗೆ ೨ ರೂ.

'ಪೂರ್ಣಚಂದ್ರ' ದಲ್ಲಿ ೩೮ ಕವನಗಳಿವೆ. 'ಹಾರೈಕೆ' ಯಲ್ಲಿ ಶ್ರೀ ಜಿ. ಪಿ. ರಾಜರತ್ನರು ಕವಿಯ ಬಗ್ಗೆ ಸರಿಯಾದ ಅಭಿಪ್ರಾಯ ಕೊಟ್ಟಿದ್ದಾರೆಂದು ಪುಸ್ತಕ ಓದಿದ ಯಾರಿಗಾದರೂ ಎನ್ನಿಸದಿರದು. ಕವಿಯ ಕಾವ್ಯ ಶಕ್ತಿಯ ಮುಂದಿನ ಬೆಳೆಯ ಗುಣ ಇಂದಿನ ಈ ಮೊಳಕೆಯಲ್ಲಿ ಸ್ಪಷ್ಟವಾಗಿ ಮೂಡಿದೆ 'ಅಪಾರ ಲೀಲೆ' 'ಬಡತನ ಸಿರಿತನ', 'ಬಾಳು ಪಾಳು ಧರ್ಮಶಾಲೆ, 'ಎದುರಿಸಲೊ' ಮೊದಲಾದ ಕವನಗಳು ಚೆನ್ನಾಗಿವೆ. ಇವುಗಳಲ್ಲಿ ಕವಿಯ ಸ್ವಾನುಭವವು ನೇರವಾದ ಸರಳ ಮಾತಿನಲ್ಲಿ ವರ್ಣಿತವಾಗಿದೆ. ಹೊಸ ಕಾಲದ ಹೊಸಗತಿಯಿಂದ ಸಾಗುವ ಈ ಕವಿತೆಗಳು ಛಂದಸ್ಸು, ವ್ಯಾಕರಣ, ಭಾವ, ಬಂಧಗಳಲ್ಲಿ ಯಾವ ಅತಿರೇಕಕ್ಕೂ ಹೋಗದೆ ಯಥಾಕ್ರಮದಲ್ಲಿರುವುದು ಒಳ್ಳೆಯ ಲಕ್ಷಣ. ಕನ್ನಡನಾಡು ಈ ಕವಿಗಳಿಂದ ಹೆಚ್ಚಿನದನ್ನು ಬಯಸಬಹುದಾಗಿದೆ.

ಅಗ್ನಿಕನ್ಯೆ

ಬರೆದವರು ಶ್ರೀ ಅ. ನ. ಕೃಷ್ಣರಾಯರು; ಪ್ರಕಾಶಕರು ವಿಶ್ವವಾಣಿ ಪ್ರಕಟನ ಮಂದಿರ, 'ಅನ್ನಪೂರ್ಣ' ವಿಶ್ವೇಶ್ವರಪುರಂ, ಬೆಂಗಳೂರು ನಗರ.

ಈ ಸಂಗ್ರಹದಲ್ಲಿ ೮ಸವತ್ತಾದ ಕಥೆಗಳಿವೆ. ಇರುವ ೯ ರಲ್ಲಿ ೮ ಕಥೆಗಳು ಚೆನ್ನಾಗಿವೆಯೆಂದು ಹೇಳಬಹುದು. ಅಸ್ಪಷ್ಟಾರ್ಥಕ್ಕೆ ಇಲ್ಲವೆ ಅಪಾರ್ಥಕ್ಕೆ ಎಡೆಗೊಡುವ 'ಮಧುರ ಸ್ವಪ್ನ'ವನ್ನು ಇಲ್ಲಿ ಸೇರಿಸದಿರಬಹುದಾಗಿತ್ತು. 'ಅನ್ನದ ಕೂಗಿ'ನ ಸೋಮಸುಂದರ, 'ಪ್ರತಿರೂಪ'ದ ವೈದ್ಯ, 'ದೊಡ್ಡ ಮನುಷ್ಯ'ದ ಅತ್ರಿ. 'ಮ್ಯಾಕ್ರಾಂತಿ'ಯ ಉಸ್ಮಾನ್ ಖಾನ್ 'ಪೂರ್ವ-ಪಶ್ಚಿಮ'ದ ಫ್ಲೀರಾ ಚಂದ್ರರು, 'ಗಿರಿಜವ್ವನ ರೊಟ್ಟಿ'ಯ ಗಿರಿಜವ್ವ, 'ಅಗ್ನಿಕನ್ಯೆ'ಯ ದೇವಾ-ಈ ಪಾತ್ರಗಳ ಉದಾತ್ತತೆಗೆ ಯಾರ ಮನವೂ ಸೋಲದಿರದು. ವಸ್ತು ಪಾತ್ರ ರಚನೆಗಳಲ್ಲಿರುವ ನಾವೀನ್ಯ, ಮಾಧುರ್ಯ, ವಾಸ್ತವಿಕತೆಗಳು

ಸಹೃದಯರನ್ನು ಮುಗ್ಧಗೊಳಿಸುವುವು. ಜೊತೆಗೆ ಸಂದರ್ಭ ಸಹಜವಾದ ಚಿಚಿತ್ರ ಕಥಾವಸ್ತುಗಳಲ್ಲಿದ್ದು ಓದುಗರ ಸಹಾನುಭೂತಿಯನ್ನು ಸುಲಭವಾಗಿ ಪಡೆಯಲನುಕೂಲ ಮಾಡಿಕೊಟ್ಟಿವೆ. ಈ ಉತ್ತಮ ಕಥಾಸಂಗ್ರಹವನ್ನು ಕನ್ನಡಕ್ಕಿತ್ತ ಗ್ರಂಥಕರ್ತರು ಅಭಿನಂದನಾರ್ಹರು ಪುಸ್ತಕವನ್ನು ಕನ್ನಡ ಬಲ್ಲವರೆಲ್ಲ ಸ್ವಾಗತಿಸುವರೆಂದು ಆಶಿಸಬಹುದು.

ಆಗಸ್ಟ ವೀರರು

ಬರೆದವರು ಶ್ರೀ ನಾಡಿಗ ಕೃಷ್ಣಮೂರ್ತಿಗಳು; ಪ್ರಕಾಶಕರು ಶ್ರೀ ಭಾಲಚಂದ್ರ ಘಾಟೇಕರರು, ಸಮಾಜ ಪುಸ್ತಕಾಲಯ ಧಾರವಾಡ. ಪುಟಗಳು ೫೦, ಬೆಲೆ ೮ ಆಣೆಗಳು.

ಇದರಲ್ಲಿ ಆಗಸ್ಟ್ ಚಳವಳಿಯಲ್ಲಿ ಆತ್ಮಾರ್ಪಣ ಮಾಡಿದ ಕರ್ನಾಟಕದ ದೇಶಭಕ್ತರಾದ ಮಹದೇವಪ್ಪ, ಶಂಕರಪ್ಪ, ಗುರಪ್ಪ, ಮಲ್ಲಪ್ಪ ಮೊದಲಾದವರ ಜೀವನ ಚರಿತ್ರವನ್ನು ಸಂಕ್ಷೇಪವಾಗಿ ಆದರೆ ಉದಾತ್ತವಾಗಿ ಬರೆಯಲಾಗಿದೆ. ಅಮರರಾದ ದೇಶಭಕ್ತರ ತ್ಯಾಗದ ಸ್ಮಾರಕದಂತಿರುವ ಈ ಪುಸ್ತಕವನ್ನು ಕನ್ನಡಿಗರೆಲ್ಲ ಓದುವುದು ಅತ್ಯಗತ್ಯವಾಗಿದೆ. ಅವರ ದೇಶಪ್ರೇಮ, ಸ್ವಾರ್ಥತ್ಯಾಗ, ಆತ್ಮಬಲಿ— ಇವು ಅನುಕರಣೀಯವಾಗಿವೆ.

ಪಲಾಯನ

ಬರೆದವರು ಶ್ರೀ ವಿ. ಜಿ. ಭಟ್ಟರು; ಪ್ರಕಾಶಿಸಿದವರು ಶ್ರೀ ಮ. ಗ. ಶೆಟ್ಟರು, ಬಂಕಿಕೊಡ್ಲ. ಪುಟಗಳು ೧೦೦, ಬೆಲೆ ೧—೪—೦

ಉತ್ತರ ಕನ್ನಡ ಜಿಲ್ಲೆಯ ತರುಣ ಕವಿಗಳಾದ ಶ್ರೀ ವಿ.ಜಿ. ಭಟ್ಟರ ಈ ಕವನ ಸಂಗ್ರಹದಲ್ಲಿ ಸುಮಾರು ೭೮ ಸಣ್ಣ ಸಣ್ಣ ಕವಿತೆಗಳಿವೆ. 'ಪ್ರಭಾತ ವರ್ಣನೆ' ಮೊದಲಾದ ಕವಿತೆಗಳಲ್ಲಿ ಈ ಚುರುಕಾದ ಕವಿಯ ಪ್ರಧಾನವಾದ ಹಾಸ್ಯಪ್ರವೃತ್ತಿ ಎದ್ದು ಕಾಣುತ್ತದೆ; ತುಂಟತನ ಕಣ್ಣು ಹೊಡೆಯುತ್ತದೆ. ಮಗು, ಮತ್ತು ಮಗುವಿನ ಭಾವನೆಗಳನ್ನು ವರ್ಣಿಸುವ ಕವನಗಳು ಬಹಳ ಸೊಗಸಾಗಿವೆ; ಮುದ್ದಾಗಿ, ಸಹಜವಾಗಿ, ಕುಡಿನಗೆ ಮಿಂಚಿಸುವಂಥವಿವೆ. ಆದರೆ ಶಕ್ತನಿದ್ದರೂ ಒಂದು ವಿಧದ ದುರಭ್ಯಾಸದಿಂದಲೋ ಎಂಬಂತೆ ಈ ಕವಿ ಪಾದಾಂತ್ಯದಲ್ಲಿ ಶಬ್ದಭಂಗಗಳನ್ನು ಬಹಳಸಲ ಮಾಡಿರುವುದು, ಛಂದೋವಿಕಾರಗಳನ್ನುಳ್ಳ ಮೊಟಕು ಸಾಲುಗಳನ್ನು ಬರೆದು ಪದ್ಯವನ್ನು ಅನಿರೀಕ್ಷಿತವಾಗಿ "ಬ್ರೆಕ್" ಹಾಕುತ್ತ ನಡೆಯಿಸಲಾದ ಮೋಟಾರಿನಂತೆ ಸಾಗಿಸುವುದು, ಗದ್ಯ ಸಾಮಿಪ್ಯದ ಅತಿ ಸರಳತೆ ತಂದಿರುವುದು —— ಇವು ದೋಷಗಳು. ಶೃಂಗಾರ, ಹಾಸ್ಯಗಳೇ ಕವಿತೆಗಳಲ್ಲಿ ಬಹಳ ಸಲ ಬರುವ ಭಾವಗಳು— ಅವು ಚೆನ್ನಾಗಿ ಚಿತ್ರಿತವಾಗಿವೆ. ಆದುದರಿಂದ ಈ ತರುಣ ಕವಿಗೆ ಸ್ವಾಗತ; ಒಳ್ಳೆಯ ಭವಿಷ್ಯವಿರಲೆಂಬ ಹಾರೈಕೆ.

ಶ್ರೀ (ಹೊಸ ಮಾಸಪತ್ರಿಕೆ)

ಸಂಪಾದಕರು ಪಂಡಿತ ಕೇಶವ ಶರ್ಮಾ ಗಲಗಲಿ ಮತ್ತು ಶ್ರೀ ಜಿ. ಸಿ. ಇನಾಮದಾರ, ಬಿ. ಎ. ಬಿ. ಟಿ. ಪ್ರಕಾಶಕರು ಶ್ರೀ ಎ. ಕೆ. ಶಹಪೂರರು, ಶ್ರೀ ಕಾರ್ಯಾಲಯ, ಪೋಲೀಸಗಲ್ಲಿ, ಧಾರವಾಡ.

ಪತ್ರಿಕೆ ಮುದ್ದಾಗಿದೆ– ಭಾಷೆ, ರೂಪ ಎಲ್ಲ ದೃಷ್ಟಿಯಿಂದ ಸಂಪಾದಕರು 'ಹಂಬಲ', 'ನಿಲುಮೆ' ಮತ್ತು 'ಧನುಷ್ಟಂಕಾರ'ಗಳಲ್ಲಿ ಹೇಳಿರುವಂತೆ ಜೀವನಕ್ಕೆ ತಕ್ಕ ಸ್ಥಾಯಿ ಸಾಹಿತ್ಯವನ್ನು ಒದಗಿಸಲು ಎದ್ದುನಿಂತ ಶ್ರೀಗೆ ಸುಸ್ವಾಗತ ಬಯಸುತ್ತೇವೆ. ಈ ಯತ್ನಕ್ಕೆ ರಸಿಕರ ಬೆಂಬಲ ಸಿಗಲು ತಡವಾಗಲಾರದೆಂದು ನಂಬುತ್ತೇವೆ.

ನುಡಿ (ಹೊಸ ವಾರಪತ್ರಿಕೆ)

ಪ್ರಕಾಶಕರು ಮತ್ತು ಸಂಪಾದಕರು ಶ್ರೀ ರಾ. ಶ್ರೀ. ಕಸ್ತೂರಿಕೋಟಿ, ನುಡಿ ಕೂಟ, ೪೬ ಚರ್ಚಗೇಟ್ ರಸ್ತೆ, ಕೋಟೆ, ಮುಂಬಯಿ.

ಮುಂಬಯಿಯಲ್ಲಿರುವ ಕನ್ನಡ ತರುಣರ ಈ ಹೊಸ ಉಪಕ್ರಮ ಸ್ತುತ್ಯವಾದುದು. ಮುಂಬಯಿಗೊಂದು ಕನ್ನಡ ವಾರಪತ್ರಿಕೆ ಅತ್ಯಗತ್ಯವಾಗಿತ್ತು. ಆ ಕೊರತೆಯನ್ನು ನೀಗಿಸಲು ಹೊರಟ ಶ್ರೀ ಕಸ್ತೂರಿಯವರು ಅಭಿನಂದನಾರ್ಹರು. ಕನ್ನಡ ವಾಚಕ ಲೇಖಕರು ಈ ಪತ್ರಿಕೆ ಅಗಲೇ ನೆರವಿತ್ತಂತೆ ಮುಂದೆಯೂ ನೆರವಿತ್ತು ಪ್ರೋತ್ಸಾಹಿಸುವರೆಂದು ಹಾರೈಕೆ.

School broadcasts(ಇಂಗ್ಲೀಷ)

ಅಖಿಲ ಭಾರತ ಆಕಾಶವಾಣಿಯ ನಿರ್ದೇಶಕರು ಹೊರಡಿಸಿದುದು. ಪುಟ ಸಂಖ್ಯೆ ೭೮, ಚಂದಾ ಹಾಕಿಲ್ಲ.

ಮುಂಬಯಿಯ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗಾಗಿ ನಡೆವ ಆಕಾಶವಾಣಿ ಕಾರ್ಯಕ್ರಮಗಳು ಮೇಲಿನ ಪತ್ರಿಕೆಯಲ್ಲಿವೆ. ಜೂನಿನಿಂದ ಅಕ್ಟೋಬರ ೪೭ರ ವರೆಗಿನ ಐತಿಹಾಸಿಕ, ವೈಜ್ಞಾನಿಕ, ಭೌಗೋಲಿಕ, ಸಾಹಿತ್ಯಪರ, ಪ್ರಾಣಿಶಾಸ್ತ್ರ ಮತ್ತು ಆರೋಗ್ಯಶಾಸ್ತ್ರಗಳಿಗೆ ಸಂಬಂಧಿಸಿದ ಭಾಷಣಗಳ ರೂಪರೇಷೆ ಮತ್ತು ವೇಳಾಪತ್ರಿಕೆಗಳನ್ನೊಳಗೊಂಡ ಈ ಸಂಚಿಕೆ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದುದು. ನಯವಾದ ದಪ್ಪ ಕಾಗದದಲ್ಲಿ ಮುದ್ರಿತವಾದ ಈ ಪತ್ರಿಕೆ ಹಿಡಿದೊಯ್ಯಲು ಬಹಳ ಅನುಕೂಲವಾಗಿದೆ.

ಕಳ್ಳ ಪ್ಯಾಟಿ ಕುಬೇರ

ಲೇ:— ಶ್ರೀ ವೆಂಕಣ್ಣಾಚಾರ್ಯ ಪಪ್ಪು ಬಿ. ಎ. ಎಲ್ ಎಲ್ ಬಿ. ವಕೀಲ, ಹುಬ್ಬಳ್ಳಿ

(ವಿಶ್ವಮೇಧದ ಆರು ವರ್ಷ ರಾಜಸದೃಶವಾದ ಜೀವನದಲ್ಲಿ ದಾಳಿ ಹಾಳಾಗಿ ಆತ್ಮಹತ್ಯ ಮಾಡಿಕೊಂಡ "ಕಳ್ಳಪ್ಯಾಟಿ ಕುಬೇರ"ನ ಸಮಾಧಿ ಕಲ್ಲಿನ ಮೇಲೆ ಕೊರೆದ ಚಿತ್ರವಿದು.)

ಕೊಪ್ಪೇರಿಯಲ್ಲಿ ಎರಡು ಯುದ್ಧಗಳ ಮಧ್ಯೆ ಹುಟ್ಟಿದನು ಸುಪ್ರಸಿದ್ಧ ಕುಬೇರನು– ಹೇಳಿ ಮಾಡಿಸಿದ ಕುರೂಪಿಯು. ಒಡಮೂಡಿದ ವಿಗ್ರಹದಂತಹ ಮೋರೆ, ಅಲ್ಲೊಂದು ಇಲ್ಲೊಂದು ಕಣ್ಣು, ಇಜ್ಜೋಡು ಕಿವಿ, ಉಬ್ಬಿದ ಗಲ್ಲಗಳ ನಡುವೆ ಮೂಗೇ ಗೈರ ಹಾಜರ! ಈ ಮುಖ ಮುದ್ರೆಗೆ ಒಪ್ಪುವಂತಹ ಉಳಿದ ದೇಹ.

ಕಳ್ಳಪ್ಯಾಟಿ ಕುಬೇರನು ಕರಾಳ ಕಾಳಗ ಕಾಲದ ಕೂಸು. ಯದಾಯದಾಹಿ... ಯಾವ ಯಾವ ಕಾಲಕ್ಕೆ ಯುದ್ಧ ಸುರುವಾಗುತ್ತದೊ ಆ ಆ ಕಾಲಕ್ಕೆ ಅವತರಿಸುವ ಕುಬೇರ. ಅವನಿಗೆ ಜಾತಿ ಪಂಥಗಳಿಲ್ಲ. ವಿಶ್ವಮೇಧ ಧರ್ಮದ ಅನುಯಾಯಿ ಎಂದರೂ ಸಲ್ಲುವದು.

ವಾರಕ್ವಾಲಿಟಿ ಜನರಿಂದ ತುಂಬಿ ತುಳುಕುವ ಈ ದೇಶದಲ್ಲಿ ಕುಬೇರ ಮಾತ್ರ ಮೂರು ನೂರು ಪೌಂಡಿನ ಜಡದೇಹಧಾರಿ. ಮಾನವಜೀವನದ ಉತ್ಕ್ರಾಂತಿಯಲ್ಲಿ ಕುಬೇರನೊಂದು ಚಮತ್ಕೃತಿಯೇ ಸರಿ. ಡಾರವಿನ್ ಪ್ರಭೃತಿಯ ಪ್ರಕಾರ ಮಂಗನಿಂದ ಮನುಷ್ಯನಾಗಲಿಕ್ಕೆ ಎಷ್ಟೋ ವರ್ಷಗಳು ಬೇಕು; ಆದರೆ ಯುದ್ಧದ ಕೇವಲ ಆರೇ ವರ್ಷಗಳಲ್ಲಿ ಕುಬೇರನು ರೊಕ್ಕದ ಮದದಿಂದ ಸೊಕ್ಕಿ ಮಾನವನಿಂದ ಗಜಾಕಾರದ ಮನುಷ್ಯನಾಗಿ ಮಾರ್ಪಟ್ಟನು.

ಯುದ್ಧ ಸುರುವಾದ ಕೂಡಲೇ ಪೇಟೆಯೆಲ್ಲ ಶ್ಯಾಮುಬಝಾರ ಉರ್ಫ ಮಾಯಾಬಝಾರವಾಯಿತು. ನೋಟಿನ ಸುಂಟಳಿಯಿಂದ ಕಳ್ಳಪೇಟೆಯಲ್ಲಿ ನಾಯಿಛತ್ರಿಗಳಂತೆ ಕಳ್ಳ ವ್ಯಾಪಾರಿಗಳು ಉದ್ಭವಿಸಿದರು. ಯುದ್ಧ ಪೂರ್ವದಲ್ಲಿ ಸಾದಾ ಪರ್ಕಳನಿದ್ದವನು ಯುದ್ಧ ಸಮಯದಲ್ಲಿ ಕಳ್ಳ ಪೇಟೆ ರಾಜನಾಗಿ ಪರಿವರ್ತಿಸಿದ್ದಾನೆ.

ಲಾಭಬಡಕ ವ್ಯಾಪಾರಸ್ಥ ಮತ್ತು ಲಂಚಬಾಕ ಅಧಿಕಾರಿ ದ್ವಂದ್ವದಿಂದ ಜನಿಸಿದ ಕಳ್ಳ ಪೇಟೆ ಕರಾಳ ನೆರಳಿನಲ್ಲಿ ವಿರಾಟ ವ್ಯಾಪಾರವು ಊರ್ಜಿತಕ್ಕೆ ಬಂದಿತು.

ಕುಬೇರನು ಕಳ್ಳ ಪೇಟೆಯ ಕೃಷ್ಣಕಾರಸ್ಥಾನವನ್ನು ಶಾಸ್ತ್ರರೀತ್ಯಾ ಅಭ್ಯಸಿಸಿದವನು. ವಿರಾಟ ವ್ಯಾಪಾರದ ಗುಟ್ಟನ್ನು ಬಲ್ಲವನು.

ಗಿರಾಕಿಗಳನ್ನೂ ಅಧಿಕಾರಿಗಳನ್ನೂ ಮುತ್ಸದ್ದಿತನದಿಂದ ತಂತ್ರಿಸಿ ಕುಬೇರನಾದನು.

ಕತ್ತೆಗೂ ಕಿಮ್ಮತ್ತಿನ ಕಾಲವದು. ಚೋಳಿ ಹುಣ್ಣಿವೆಯಲ್ಲಷ್ಟೇ ಸ್ಪೃಶ್ಯವಾದ ಕತ್ತೆಯ ಅಸ್ಪೃಶ್ಯತಾ ನಿವಾರಣೆಯಾಗಿ ಕುಬೇರನ ಕಳ್ಳ ವ್ಯಾಪಾರಕ್ಕೆ ಆಣಿಯಾಗಿದೆ. ಕಾಳುಗಳನ್ನು ಹೇರಿಕೊಂಡು ಹೊಲಬಿದ್ದು ಅರ್ಧರಾರಿಗುಂಟ ಓಡುವ ಕುಬೇರನ ಕತ್ತೆಯ ಕಾಲನ್ನು ನೋಡಲಿಕ್ಕೆ ಎರಡು ಕಣ್ಣುಗಳು ಸಾಲವು. ರೊಕ್ಕವಿದ್ದವರಾದರೂ ಆ ಕಾಳುಗಳನ್ನು ತಿಂದು ಬದುಕಲೆಂದು ನೋಡುಗರು ಸುಮ್ಮನೇ ಕೂಡ್ರುತ್ತಿದ್ದರು. ಪೋಲಿಸ ನಾಯಿಗಳನ್ನು ಕುಬೇರನು ತನ್ನ ಲಾಭದ ರೊಟ್ಟಿಯಲ್ಲಿ ಒಂದು ತುಣುಕು ಮುರಿದೊಗೆದು ದೂರೀಕರಿಸುತ್ತಿದ್ದನು. ಲಾಭದ ಜೇಬಿಗೆ ಕತ್ತರಿ ಹಚ್ಚುವ ಇನಕಂ ಟ್ಯಾಕ್ಸ ಖಾತೆಯನ್ನು ಸ್ನೇಹನಾತೆಯಿಂದ ನೋಡಿ ಸರಕಾರಕ್ಕೂ ದರಕಾರ ಮಾಡದೆ ಹಣ ಹೆಚ್ಚಿಸಿಕೊಂಡಿದ್ದನು.

ಹೋದ ಯುದ್ಧದ ಕಳ್ಳ ವ್ಯಾಪಾರಿಗಳು ಯುದ್ಧೋತ್ತರ ಆರ್ಥಿಕ ಪತನದಲ್ಲಿ ಬೇರು ಸಹಿತ ಕುಸಿದು ಬಿದ್ದಂತೆ, ದಿವಾಳಿ ಬಿರುಗಾಳಿ ಬಿಟ್ಟ ಕೂಡಲೇ ವಿಶ್ವಮೇಧದ ಕುಬೇರನು ನಾದಾರಿ ನ್ಯಾಯಾಲಯದಲ್ಲಿ ಕುಪ್ಪರಿಸಿದನು. ತಪ್ಪರಿಣಾಮವಾಗಿ ತಾನೇ ಕೊಟ್ಟುಕೊಂಡ ಮರಣ ದಂಡನೆಯ ತೀರ್ಪಿನ ಅನ್ವಯ ಗಲ್ಲಿಗೇರಿದನು ಅರ್ಥಾತ್ ಆತ್ಮಹತ್ಯೆ ಮಾಡಿಕೊಂಡನು.

ಕುಬೇರನ ನಡುಗಾಲ ಸಿರಿವಂತಿಕೆಯಿಂದ ಸಮಾಜಕ್ಕೆ ಏನೂ ಲಾಭವಾಗಲಿಲ್ಲ. ಅವನಿಂದ ಸುಲಿಯಲ್ಪಟ್ಟ ಸಮಾಜಕ್ಕೆ ಅವನ ಆತ್ಮಹತ್ಯೆಯೊಂದು ಮಹಾದ ಮಾತು.

ಮುಂಬರುವ ಯುದ್ಧಗಳ ಕುಬೇರರಿಗೆ ಈ ಸಮಾಧಿ ಕಲ್ಲು ಬೆದರುಗಲ್ಲಾಗಲಿ!!!

ಸಾದರ ಸ್ವೀಕಾರ

೧ ಮುರುಕು ಮಂಟಪ

ಲೇಖಕರು:— ಎಸ್. ಅನಂತನಾರಾಯಣ
ಪ್ರಕಾಶಕರು— ಚುಳಕಿ ಗೋವಿಂದರಾವ
"ಲಲಿತ ಸಾಹಿತ್ಯ ಮಾಲೆ" ಧಾರವಾಡ
ಪುಟಗಳು ೧೪೦ ಬೆಲೆ ೦—೧೨—೦

೨ ಹಾಲಾಹಲ

ಲೇಖಕರು:— ಹಿರೇಮಲ್ಲೂರ ಈಶ್ವರನ್.
ಪ್ರಕಾಶಕರು— ಕಲ್ಪನಾ ಪ್ರಕಾಶನ ಮಂದಿರ ಹಿರೇಮಲ್ಲೂರ.
ಪುಟಗಳು ೧೫೦ ಬೆಲೆ ೧—೧೨—೦

೩ ಕ್ರಾಂತಿ ಕಾರ್ಯ

ಲೇಖಕರು— ಕೆ. ಕೆ. ಗಲಗಲಿ.
ಪ್ರಕಾಶಕರು– ಕೆ. ಜಿ. ಜೋಯಿಶಿ ಬೆಳಗಾವಿ
ಮಾರಾಟಗಾರರು— ಕೆ. ಕೆ. ಗಲಗಲಿ ಸವದತ್ತಿ ಜಿ. ಬೆಳಗಾವಿ.
ಪುಟಗಳು ೪೬ ಬೆಲೆ ೦—೧೦—೦

ಚಂದಾದಾರರಿಗೆ ಸೂಚನೆ

ಮೂರು ತಿಂಗಳಿಗೆ ಅಥವಾ ಕಡಿಮೆ ಮುದ್ದತಿಗೆ ವಿ. ಪಿ. ಕಳಿಸುವದಿಲ್ಲ. ಮುಂಗಡ ಹಣ ಕಳಿಸಬೇಕು. ಅಂಚೆಯ ಅವ್ಯವಸ್ಥೆಯಿಂದ ಪತ್ರಿಕೆ ತಲ್ಪದಿದ್ದರೆ ನಾವು ಹೊಣೆಯಲ್ಲ. ಅವಧಿ ಮುಗಿಯುವದೆಂಬದನ್ನು ನೀವೇ ನೆನಪಿಟ್ಟು ಹಣ ಕಳಿಸಬೇಕು. ಯೋಗ್ಯ ವೇಳೆಗೆ ಹಣ ಬರದಿದ್ದರೆ ಏನನ್ನು ತಿಳಿಸದೆ ಪತ್ರಿಕೆ ನಿಲ್ಲಿಸಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಸಂಪಾದಕೀಯ ಟೀಕೆಟಿಪ್ಪಣಿಗಳು

ಬಂಗಾಲ--ಪಂಜಾಬಗಳ ವಿಭಜನೆ

ಬ್ರಿಟಿಶ ಸರಕಾರದ ಜೂನ ೩ ನೇ ತಾರೀಖಿನ ಘೋಷಣೆಯನ್ವಯ ಬಂಗಾಲ, ಪಂಜಾಬ ಶಾಸನ ಸಭೆಗಳ ಪೂರ್ವ ಪಶ್ಚಿಮ ವಿಭಾಗಗಳ ಸದಸ್ಯರ ಸಭೆ ಸೇರಿ ಅವೆರಡೂ ಪ್ರಾಂತಗಳನ್ನು ಇಬ್ಭಾಗಿಸಬೇಕೆಂದು ನಿರ್ಣಯಿಸಲಾಯಿತು. ಇವೆರಡೂ ಪ್ರಾಂತಗಳನ್ನು ಒಡೆಯಬಾರದೆಂಬ ಪ್ರಯತ್ನ ಕೊನೆವರೆಗೆ ಮಾಡಲಾಯಿತು. ಆದರೆ ಇಡೀ ದೇಶವನ್ನೆ ಒಡೆದು ಧಾರ್ಮಿಕ ತಳಹದಿಯ ಮೇಲೆ ಅದನ್ನು ಪಾಕಿಸ್ತಾನ ಮತ್ತು ಹಿಂದುಸ್ತಾನವೆಂದು ಎರಡು ಹೋಳುಗಳನ್ನಾಗಿ ಮಾಡಬೇಕೆಂದು ಲೀಗಿನವರು ದುರಾಗ್ರಹ ತಾಳಿದ್ದರಿಂದ ಇವೆರಡೂ ಪ್ರಾಂತಗಳನ್ನು ಒಡೆಯುವ ನಿರ್ಣಯ ಕೈಕೊಳ್ಳದೆ ಗತ್ಯಂತರವಿರಲಿಲ್ಲ. ಸದ್ಯದ ಘಟನಾ ಸಮಿತಿಯಲ್ಲಿಯೆ ಸೇರುವುದಾದರೆ ಪಂಜಾಬವನ್ನು ವಿಭಜಿಸಬಾರದೆಂದು ಅಲ್ಲಿನ ಕಾಂಗ್ರೆಸ ಮತ್ತು ಸೀಖ ಸದಸ್ಯರು ಬಯಸಿದರು. ಆದರೆ ಮುಸ್ಲಿಂಲೀಗಿನವರು ಪಂಜಾಬದಲ್ಲಿ ಪಾಕಿಸ್ತಾನವನ್ನು ಪ್ರಸ್ಥಾಪಿಸಿ ಅದರ ಅಖಂಡತ್ವವನ್ನು ಕಾಯ್ದುಕೊಳ್ಳಬಯಸಿದ್ದರಿಂದ ಅನಿವಾರ್ಯವಾಗಿ ಹಿಂದೂ ಶೀಖರು ದೇಶ ವಿಭಜನೆಗೆ ಮತ ಕೊಟ್ಟರು. ಈ ರೀತಿ ಶಾಸನ ಸಭಾ ಸದಸ್ಯರ ನಿರ್ಣಯವಾದ್ದರಿಂದ ವಿಭಜನೆಯ ಮುಂದಿನ ಕ್ರಮಗಳೆಲ್ಲ ಪ್ರಾರಂಭವಾಗಿವೆ. ಘಟನಾ ಸಮಿತಿಗೆ ಇವೆರಡೂ ಪ್ರಾಂತಗಳಿಂದ ಪ್ರತ್ಯೇಕ ಚುನಾವಣೆ ನಡೆಯಲಿದೆ. ಅಲ್ಲದೆ ಹಿಂದುಸ್ತಾನ ಪಾಕಿಸ್ತಾನಗಳಲ್ಲಿಯ ಆಸ್ತಿ ಸಾಲ ಮೊದಲಾದವುಗಳನ್ನು ಹಂಚುವುದಕ್ಕಾಗಿ ತಜ್ಞ ಸಮಿತಿಗಳು ಒಂದೇ ಸವನೆ ಕೆಲಸ ನಡೆಸಿವೆ. ಅಗಸ್ಟ ೧೫ ರಹೊತ್ತಿಗೆ ಬ್ರಿಟಿಶರು ಅಧಿಕಾರ ದಾನ ಮಾಡುವ ಸಮಯಕ್ಕೆ ಇವೆಲ್ಲ ವಿಷಯಗಳ ನಿಷ್ಕರ್ಷೆಯಾಗಬಹುದು. ಹಿಂದುಸ್ತಾನದ ಅಖಂಡತ್ವವನ್ನು ನಾಶಪಡಿಸಬಾರದೆಂದು ದೇಶಪ್ರೇಮಿಗಳೆಷ್ಟೊಂದು ಪ್ರಯತ್ನಿಸಿದರೂ ಶಕ್ಯವಾಗದೆ ಹೋಯಿತು? ದೇಶದ ದುರ್ದೈವ!

ಅಲ್ಪಸಂಖ್ಯಾಕರ ರಕ್ಷಣೆ

ಈ ರೀತಿಯಾಗಿ ದೇಶದಲ್ಲಿ ಪಾಕಿಸ್ತಾನ ಮತ್ತು ಹಿಂದುಸ್ತಾನವೆಂಬ ತುಂಡುಗಳಾಗಬೇಕೆಂದು ನಿರ್ಣಯವಾದ ಕೂಡಲೆ ಎಲ್ಲವೂ ಸುಗಮವಾಯಿತೆಂದು ಹೇಳುವಂತಿಲ್ಲ. ಇನ್ನುಮುಂದೆ ಈ ಎರಡೂ ಭಾಗಗಳಲ್ಲಿಯ ಬಹುಸಂಖ್ಯ ಜನರ ಮೇಲೆ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಯ ಹೊಣೆ ಹೆಚ್ಚಿಗೆ ಬಿದ್ದಂತಾಗಿದೆ. ತಮ್ಮ ಪಾಶವೀಬಹುಮತದ ಬೆಂಬಲದಿಂದ ನಿರಂಕುಶ ಕಾರಭಾರವನ್ನು ನಡೆಸಿ ಸ್ವಧರ್ಮೇತರರನ್ನು ಹತ್ತಿಕ್ಕಲು ಹವಣಿಸಿದ್ದಾದರೆ ಮತ್ತೆ ತಿಕ್ಕಾಟ ಪ್ರಾರಂಭವಾಗುವಲ್ಲಿ ಸಂದೇಹವಿಲ್ಲ. ಆಯಾ ವಿಭಾಗಗಳಲ್ಲಿನ ಪರಧರ್ಮೀಯರು ಸುಖ ಶಾಂತಿ ಸಮಾಧಾನಗಳಿಂದ ಇದ್ದುಕೊಂಡು ಅವರ ನಾಗರಿಕ ಹಕ್ಕುಬಾಧ್ಯತೆಗಳೆಲ್ಲ ರಕ್ಷಿಸಲ್ಪಡುವಂತೆ ನೋಡಿಕೊಳ್ಳುವುದು ಕರ್ತವ್ಯವಾಗಿದೆ. ಮುಸ್ಲಿಂ ಲೀಗಿನ ಆಡಳಿತದಲ್ಲಿರುವ ಭಾಗಗಳಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಅನುಭವವು ಬಹಳ ವಿಷಾದಕರವಾಗಿದೆಂದು ಗೊತ್ತಾಗುವದು. ಬಂಗಾಲ, ಸಿಂಧ ಮತ್ತು ಪಂಜಾಬಗಳಲ್ಲಿ ಮುಸಲ್ಮಾನೇತರರ ಹಕ್ಕುಬಾಧ್ಯತೆಗಳನ್ನ ಲಕ್ಷಿಸಿದ ಉದಾಹರಣೆ ಬೇಕಾದಷ್ಟಿವೆ. ನಡುಗಾಲ ಸರಕಾರದಲ್ಲಿ ಮುಸ್ಲಿಂ ಲೀಗ ಸದಸ್ಯರ ಕಡೆಗಿರುವ ಶಾಖೆಗಳಲ್ಲಿ ನಡೆಸಿದ ನಿರಂಕುಶಾಡಳಿತದ ಅನುಭವವೂ ಶೋಚನೀಯವಾಗಿದೆ. ದಿಲ್ಲಿಯ ಟೆಲಿಫೋನ ಕಚೇರಿಯಲ್ಲಿ ಲಾಹೋರ—ದಿಲ್ಲಿ-ದಿಲ್ಲಿ ಕಲಕತ್ತೆಗಳಲ್ಲಿಯ ಪ್ರಮುಖರೊಡನೆ ಕಾಂಗ್ರೆಸ್-ಶೀಖ ಪ್ರಮುಖರು ದಿಲ್ಲಿಯಿಂದ ಫೋನಿನಲ್ಲಿ ಮಾತಾಡಲಿಕ್ಕೆ ಬೇಗ ಅವಕಾಶ ಸಿಕ್ಕುತಿರಲಿಲ್ಲೆಂದೂ ತಡ ಮಾಡಿ ಸಿಕ್ಕಬಳಿಕವೂ ಆ ಮಾತುಕತೆಯನ್ನೆಲ್ಲ ಗುಪ್ತವಾಗಿ ಕೇಳಿಕೊಳ್ಳಲಾಗುತಿತ್ತೆಂದೂ ಸುದ್ದಿ ಪ್ರಸಿದ್ಧವಾಗಿದೆ. ಇದು ನಿಜವಿದ್ದರೆ ಕ್ಷೋಭೆಯನ್ನು ಹುಟ್ಟಿಸುವಂತಹ ಸಂಗತಿಯೆಂದು ಹೇಳಬೇಕಾಗುವದು. ಲೀಗಿನ ಸ್ವಚ್ಛಂದ ಆಡಳಿತೆಯು ಪಾಕಿಸ್ತಾನದಲ್ಲಿ ಇದೇ ಬಗೆಯದಾಗಿದ್ದರೆ ಪಾಕಿಸ್ತಾನದಲ್ಲಿ ಎಲ್ಲರ ಹಕ್ಕುಬಾಧ್ಯತೆಗಳು ರಕ್ಷಿಸಲ್ಪಡುವವೆಂದು ಹೇಳುವದು ಬರಿ ಬಾಯಿಮಾತೇ ಎಂದು ಹೇಳಬೇಕಾಗುವದು. ಸಿಂಧ ಬಂಗಾಲಗಳಲ್ಲಿಯೂ ಇದೇ ಬಗೆಯ ಕಟು ಅನುಭವವಿದೆ. ಈ ವರೆಗೆ ಯಾವದೇ ಕಾರಣದಿಂದ ಲೀಗಿನವರು ಈ ಬಗೆಯ ನಿರಂಕುಶ ವೃತ್ತಿಯನ್ನು ತಾಳಿದ್ದರೂ ಸ್ವತಂತ್ರ ಪಾಕಿಸ್ತಾನ ಸಿಕ್ಕ ಬಳಿಕಾದರೂ ಅವರು ಅನ್ಯಾಯದ ಆಡಳಿತ ಧೋರಣವನ್ನು ಬಿಟ್ಟುಗೊಟ್ಟು ನ್ಯಾಯ ಮತ್ತು ಸಮಂಜಸ ಧೋರಣವನ್ನು ವಹಿಸಿ ಸ್ವಧರ್ಮೇತರರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವರೆಂದು ನಂಬಲಾಗಿದೆ. ಹಿಂದು ಬಹುಸಂಖ್ಯ ಪ್ರದೇಶದಲ್ಲಿಯೂ ಹಿಂದ್ವೇತರರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವದು ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಶಾಂತಿಯ ಅವಶ್ಯಕತೆ

ಹಿಂದುಸ್ತಾನ ಪಾಕಿಸ್ತಾನವೆಂದು ಎರಡು ಭಾಗಗಳು ಹಿಂದುಸ್ತಾನದಲ್ಲಿ ಆಗುವದು ನಿಶ್ಚಯವಾದಂತಾಯಿತೀಗ. ಈ ಬಗೆಯ ನಿರ್ಣಯಕ್ಕೆ ಬರುವುದಕ್ಕೆಂದೂ ಇಲ್ಲವೆ ಬೇರೆ ಕಾರಣಕ್ಕಾಗಿಯೊ ಈ ವರೆಗೆ ನಡೆದಿದ್ದ ಕೊಲೆ ಸುಲಿಗೆ ಕೊಳ್ಳೆ ಮೊದಲಾದವುಗಳೆಲ್ಲ ಇನ್ನು ಮುಂದೆಯಾದರೂ ನಿಲ್ಲಲಿಕ್ಕೆ ಬೇಕು. ಪಾಕಿಸ್ತಾನದ ನಿರ್ಣಯ ಕೈಕೊಳ್ಳುವ ಮೊದಲನೇ ದಿನ ಲಾಹೋರಿನಲ್ಲಿ ನಡೆದ ಹತ್ಯಾಕಾಂಡವನ್ನು ನೆನೆಸಿದರೆ ಯಾರ ಎದೆಯಾದರೂ ಒಡೆದು ಹೋಳಾಗದಿರದು!! ಮಹಾತ್ಮಾ ಗಾಂಧಿ ಮತ್ತು ಬ್ಯಾ. ಜಿನ್ನಾ ಸಾಹೇಬರು ಸಂಯುಕ್ತ ಪ್ರಕಟನೆಯನ್ನು ಹೊರಡಿಸಿ ಶಾಂತಿ ಪ್ರಸ್ಥಾಪಿಸಲು ಬಿನ್ನವಿಸಿಕೊಂಡರೂ ಈ ವರೆಗೆ ಅದು ಸಾಧ್ಯವಾಗದಿದ್ದುದು ತುಂಬ ಶೋಚನೀಯವಾಗಿದೆ. ಲಾಹೋರಿನಲ್ಲಿ ಪಾಕಿಸ್ತಾನದ ನಿರ್ಣಯ ಸ್ವೀಕಾರದ ನಂತರ ಆಯಾ ಪಕ್ಷ ಪ್ರಮುಖರು ಶಾಂತಿ ಸ್ಥಾಪನೆಯ ಬಿನ್ನಹ ಮಾಡಿಕೊಳ್ಳುವ ಪ್ರಕಟನೆಯನ್ನು ಹೊರಡಿಸಿರುವರಲ್ಲದೆ ಸ್ವತಃ ಅಶಾಂತ ಭಾಗದಲ್ಲಿ ಸಂಚರಿಸಿ ಶಾಂತಿಪ್ರಸ್ಥಾಪಿಸಬೇಕೆಂದು ನಿರ್ಧರಿಸಿದ್ದು ತುಂಬ ಪ್ರಶಂಸನೀಯ ಸಂಗತಿಯಾಗಿದೆ. ಪಂಜಾಬದಲ್ಲಿಯ ಧುರೀಣರ ಪ್ರಯತ್ನದಿಂದ ಪಂಜಾಬದ ಎರಡೂ ಭಾಗಗಳಲ್ಲಿ ಬೇಗನೆ ಶಾಂತಿ ಪ್ರಸ್ಥಾಪಿತವಾಗಲಿ. ಉಳಿದ ಕಡೆಗಳಲ್ಲಿಯ ಆಯಾ ಪಕ್ಷ ಪ್ರಮುಖರು ಇದೇಬಗೆಯ ನಿರ್ಧಾರ ಕೈಕೊಂಡು ಶಾಂತಿಪ್ರಸ್ಥಾಪಿಸುವಲ್ಲಿ ಯಶಸ್ವಿಯಾಗುವರೆಂದು ನಂಬುತ್ತೇವೆ.

ಪೋರ್ತುಗೀಜ ಪ್ರದೇಶಗಳು

ಹಿಂದುಸ್ತಾನದ ಸಾರ್ವಭೌಮರೆಂದು ಆಡಳಿತವನ್ನು ಸಾಗಿಸುತಿದ್ದ ಬ್ರಿಟಿಶ್‌ರೆ ಇಲ್ಲಿಂದ ಕಾಲ್ತೆಗೆಯುವಾಗ ಇಲ್ಲಿದ್ದ ಫ್ರೆಂಚ ಪೋರ್ತುಗೀಜ ಮೊದಲಾದ ಚಿಕ್ಕಪುಟ್ಟ ಪರದೇಶಸ್ಥರು ಅಧಿಕಾರ ತ್ಯಾಗ ಮಾಡುವದು ಕ್ರಮಪ್ರಾಪ್ತವಾಗಿದೆಂದು ಬೇರೆ ಹೇಳಬೇಕಿಲ್ಲ. ಹಿಂದುಸ್ತಾನದಲ್ಲಿ ಸ್ವಾತಂತ್ರ್ಯೇಚ್ಛೆ ಇಷ್ಟೊಂದು ಪ್ರಬಲವಾಗಿರುವಾಗಲೂ ಅವರು ಮೊದಲಿನಂತೆ ತಮ್ಮ ಆಡಳಿತವನ್ನು ಸಾಗಿಸಬಯಸುವದು ಶಕ್ಯವಾಗಲಾರದು. ಅಂತೆಯೆ ಮುಂಬಯಿಯಲ್ಲಿ ಗೋವೆಯ ರಾಜಕೀಯ ಪರಿಷತ್ತು ಎರಡು ದಿನ ಸಭೆ ಸೇರಿ ಪೋರ್ತುಗೀಜರು ಪ್ರಜೆಗಳ ಪ್ರತಿನಿಧಿಗಳಿಗೆ ರಾಜ್ಯಸೂತ್ರ ಒಪ್ಪಿಸಿಕೊಟ್ಟು ಹೊರಟುಹೋಗಬೇಕು, ಗೋವಾಂತಕ ಜನರು ತಮ್ಮ ರಾಜ್ಯಘಟನೆಯನ್ನು ತಾವು ರಚಿಸಿಕೊಳ್ಳುವರು, ಇದು ಅವರ ಜನ್ಮಸಿದ್ಧವಾದ ಹಕ್ಕು ಎಂದು ಮುಂತಾಗಿ ನಿರ್ಣಯ ಕೈಕೊಳ್ಳಲಾಯಿತು ಈ ನಿರ್ಣಯವನ್ನು ಕಾರ್ಯಕಾರಿ ಮಾಡುವುದಕ್ಕಾಗಿ ಐದು ಜನರ ಸಮಿತಿಯೊಂದನ್ನು ನಿಯಮಿಸಬೇಕೆಂಬ ಗೊತ್ತುವಳಿಯೂ ಸ್ವೀಕೃತವಾಯಿತು. ಗೋವೆಯಲ್ಲಿ ಕಾಲುಚಾಚಲು ಬ್ರಿಟಿಶ್‌ರು ಮತ್ತು ನಿಜಾಮರು ನಡೆಸಿದ ಕುಟಿಲ ಕಾರಸ್ಥಾನಗಳನ್ನೂ ಪರಿಷತ್ತೊಂದು ನಿರ್ಣಯದಿಂದ ಪ್ರತಿಭಟಿಸಲಾಗಿದೆ. ಗೋವೆಯ ಪ್ರಜೆಗಳ ಈ ಬೇಡಿಕೆ ಅತ್ಯಂತ ನ್ಯಾಯ್ಯವೆಂದು ಯಾರಾದರೂ ಹೇಳಬಹುದಾಗಿದೆ. ಪ್ರಜೆಗಳ ನ್ಯಾಯ್ಯವಾದ ಈ ಬೇಡಿಕೆಯನ್ನು ಅಲ್ಲಗಳೆದು ಪೋರ್ತುಗೀಜ ಸರಕಾರದವರು ದಬ್ಬಾಳಿಕೆಯ ಅಬ್ಬರವನ್ನೆ ನಡೆಸಿರುವರು. ಪೋರ್ತುಗೀಜ ಪರರಾಷ್ಟ್ರ ಮಂತ್ರಿಗಳು ಮೊನ್ನೆ ಮೊನ್ನೆ ಲಿಸ್ಬನ್‌ದಲ್ಲಿ ಮಾತಾಡುತ್ತ ಸಾವಿರಗಟ್ಲೆ ಪೋರ್ತುಗೀಜರ-ಬಿಳಿಯ ಮತ್ತು ಕಪ್ಪು-ರಕ್ತ ಭೂಮಿಯಲ್ಲಿ ಬೀಳದೆ ಹಿಂದುಸ್ತಾನದಲ್ಲಿಯ ಪೋರ್ತುಗೀಜ ಪ್ರದೇಶವನ್ನು ಬಿಟ್ಟುಗೊಡಲಾಗದೆಂದು ಅಧ್ಯಕ್ಷತೆಯಿಂದ ನುಡಿದಿರುವರು. ಸಲಝಾರ ಸರಕಾರದವರು ಈ ಬಗೆಯ ದಬ್ಬಾಳಿಕೆಯ ಧೋರಣವನ್ನು ವಹಿಸಿದ್ದಾದರೆ ಪೋರ್ತುಗೀಜ ಹಿಂದುಸ್ತಾನದಲ್ಲಿ ತಿಕ್ಕಾಟ ಪ್ರಾರಂಭವಾಗುವದು ಖಂಡಿತ. ಈ ಬಗೆಯ ತಿಕ್ಕಾಟಕ್ಕೆ ಅವಕಾಶ ಕೊಡದೆ ಪೋರ್ತುಗೀಜ ಸರಕಾರದವರು ಹಿಂದುಸ್ತಾನದಲ್ಲಿಯ ತಮ್ಮ ಪ್ರದೇಶಗಳನ್ನು ಅಲ್ಲಿನ ಜನರಿಗೆ ಒಪ್ಪಿಸಿಕೊಡುವದು ವಿಹಿತವಾಗಿದೆ. ಏನಾದರೂ ಕೆಲವು ಸೌಕರ್ಯಗಳನ್ನು ಹಿಂದುಸ್ತಾನದಲ್ಲಿ ಪಡೆಯಬಯಸಿದರೆ ಪೋರ್ತುಗೀಜರು ಕೂಡಲೆ ಇಲ್ಲಿಯ ತಮ್ಮ ಒಡೆತನವನ್ನು ಬಿಟ್ಟುಗೊಡಬೇಕು; ಇಲ್ಲವಾದರೆ ಪ್ರಜೆಗಳೆ ಅವರನ್ನು ಓಡಿಸಬೇಕಾಗುವದು.

ಸೂಕ್ತ ಸಲಹೆ

ಬ್ರಿಟಿಶ್‌ರು ಅಧಿಕಾರ ತ್ಯಾಗ್ಯಮಾಡಿ ಅಗಸ್ಟ ೧೫ ಕ್ಕೆ ಹೊರಟು ಹೋದರೂ ನಿಜವಾದ ಸ್ವಾತಂತ್ರ್ಯ ಇನ್ನೂ ಹಿಂದುಸ್ತಾನಕ್ಕೆ ಸಿಕ್ಕಂತಾಗಲಿಲ್ಲ. ಬ್ರಿಟಿಶ್‌ರು ತಾವು ಹೊರಟುಹೋಗುವಾಗ ಹಿಂದುಸ್ತಾನವನ್ನು ಎರಡು ತುಂಡು ಮಾಡಿ ಅದರಿಂದುದ್ಭವಿಸುವ ಅನೇಕ ತೊಡಕಿನ ಪ್ರಶ್ನೆಗಳನ್ನು ಬಿಡಿಸಲು ಭಾರತೀಯರಲ್ಲಿಯೆ ತಿಕ್ಕಾಟಕ್ಕೆ ಅವಕಾಶ ಮಾಡಿಕೊಟ್ಟು ಹೋಗಲಿರುವರು. ಈಯೆಲ್ಲ ಪ್ರಶ್ನೆಗಳನ್ನು ಸಮಾಧಾನಕರವಾಗಿ ಬಿಡಿಸಿಕೊಳ್ಳಬೇಕಾದರೆ ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿಯ ಧುರೀಣರು ಕಲೆತು ಬಿಡಿಸಿಕೊಳ್ಳಬೇಕಾಗುವದೆಂಬುದು ನಿಶ್ಚಿತ. ಹಿಂದುಸ್ತಾನವನ್ನಿಂತು ವಿಭಾಗಿಸಿ ಬ್ರಿಟಿಶರು ಹೋಗುತಿರುವುದರಿಂದ ಈ ಎರಡೂ ಭಾಗಗಳು ಒಂದುಗೂಡುವ ವರೆಗೆ ನಮಗೆ ನಿಜ ಸ್ವಾತಂತ್ರ್ಯ ಸಿಕ್ಕಂತಾಗಲಿಲ್ಲೆಂದು ಮುಂತಾಗಿ ಕಾಂಗ್ರೆಸಿನ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಕಲಕತ್ತೆಯ ಹಿಂದೀ ಸಂಘದ ಕೌನ್ಸಿಲ್ಲಿನವರು ಕೊಟ್ಟ ಮಾನಪತ್ರಕ್ಕೆ ಉತ್ತರ ಕೊಡುವಾಗ ಹೇಳಿದ್ದು ಯಥಾರ್ಥವಾಗಿದೆ. ಈ ಬಗೆಯ ಹೊಣೆಯನ್ನು ಹೊತ್ತುಕೊಳ್ಳಲು ಸುಶೀಲರೂ ಕಲ್ಪಕಶಕ್ತಿಯುಳ್ಳವರೂ ಉಚ್ಚ ಧ್ಯೇಯವಾದಿಗಳೂ ಅತ್ಯಂತ ತ್ಯಾಗಿಗಳೇ ನಿಜ ಸ್ವಾತಂತ್ರ್ಯ ಸಂಪಾದಿಸಲು ಸಮರ್ಥರಾಗುವರು ಇಂಥವರ ಅವಶ್ಯಕತೆಯೀಗ ಇದೆಂದು ಅವರು ಹೇಳಿರುವರು. ಇವನ್ನು ತಿಳಿದು ಸಮರ್ಥರಾದವರು ಮುಂದೆ ಬರಬೇಕೆಂದು ಆಚಾರ್ಯರು ಬಿನ್ನವಿಸಿಕೊಂಡಿರುವರು. ಈ ಮೊದಲು ಕಾಂಗ್ರೆಸ್ಸಿಗರು ಅನೇಕ ಸಲ ಅಭಿಪ್ರಾಯಪಟ್ಟಂತೆ ಹಿಂದುಸ್ತಾನವೀಗ ತುಂಡಾಗಿದ್ದರೂ ಮುಂದೆ ಒಂದುಗೂಡುವ ಆಶೆಯಿಂದ ಈ ವಿಚ್ಛೇದನಕ್ಕೆ ಒಪ್ಪಿಗೆ ಕೊಡಲಾಗಿದೆ. ಇದನ್ನೆಲ್ಲ ತಿಳಿದುಕೊಂಡು ಕಾಂಗ್ರೆಸ್ಸಿಗರು ಮತ್ತು ಇತರ ಪಕ್ಷದವರು ಕಾರ್ಯಮಾಡಹತ್ತಿದರೆ, ಲೀಗಿನವರಿಗೂ ಆ ಬಗೆಯ ಸುಬುದ್ಧಿ ಉಂಟಾದರೆ ಇಂದು ಒಡೆದುಹೋದ ಹಿಂದುಸ್ತಾನ ಒಂದುಗೂಡುವಲ್ಲಿ ಸಂದೇಹವಿಲ್ಲ,

ಬ್ರಹ್ಮದೇಶದ ಭವಿತವ್ಯ

ಬ್ರಹ್ಮದೇಶದಲ್ಲಿಯೂ ಘಟನಾಸಮಿತಿಯೀಗ ಕೂಡಿ ಘಟನೆಯನ್ನು ಸಿದ್ಧಪಡಿಸುವ ಕಾರ್ಯ ನಡೆದಿದೆ. ಬ್ರಿಟಿಶ್‌ರು ಅಗಸ್ಟ ೧೫ ಕ್ಕೆ ಭಾರತಕ್ಕೆ ಅಧಿಕಾರ ದಾನ ಮಾಡಿ ಹೊರಟುಹೋಗುವವರಿದ್ದುದರಿಂದ ಬ್ರಹ್ಮದೇಶಕ್ಕಾದರೂ ಅಷ್ಟರಲ್ಲಿಯೇ ವಸಾಹತು ಸ್ವರಾಜ್ಯಕೊಡುವ ಘೋಷಣೆಯನ್ನ ಬ್ರಿಟಿಶ ಸರಕಾರದವರು ಮಾಡಬೇಕೆಂದು ಬ್ರಹ್ಮದೇಶದ ಮುಖಂಡರು ಅಪೇಕ್ಷಿಸುತ್ತಾರೆ. ಬ್ರಹ್ಮದೇಶದ ಗವರ್ನರರ ಸದ್ಯದ ಕಾರ್ಯಕಾರೀ ಮಂಡಳಕ್ಕೆ ವಸಾಹತ ರಾಜ್ಯದ ನಡುಗಾಲ ಸರಕಾರದ ಸ್ಥಾನಮಾನಗಳನ್ನು ಬ್ರಿಟಿಶ್‌ರಿಂದ ಪಡೆದುಕೊಳ್ಳಬೇಕೆಂದು ಬ್ರಹ್ಮೀ ರಾಜಕೀಯ ಮುಖಂಡರು ಬಹಿರಂಗವಾಗಿ ಪ್ರಯತ್ನಿಸುತಿದ್ದಾರೆಂದು ವಿಶ್ವಸನೀಯವಾಗಿ ತಿಳಿಯುತ್ತದೆಂಬ ಸುದ್ದಿ ಪ್ರಸಿದ್ಧವಾಗಿದೆ. ಬ್ರಹ್ಮದೇಶದ ಜನರು ಈ ಬಗೆಯಾಗಿ ಅಪೇಕ್ಷಿಸುವದೇನು ತಪ್ಪಲ್ಲ, ಅನ್ಯಾಯದ್ದಲ್ಲ. ಮೊನ್ನಿನ ಯುದ್ಧದಲ್ಲಿ ಬ್ರಹ್ಮದೇಶ ವಿಪರೀತವಾಗಿ ಹಾನಿಗೊಂಡಿದೆ. ಆ ಹಾನಿಯನ್ನು ತುಂಬಿಕೊಡಬೇಕಾದರೆ ಬ್ರಿಟಿಶ್ ಸರಕಾರದವರು ಅವರಿಗೆ ವಸಾಹತ ಸ್ವರಾಜ್ಯವನ್ನು ಕೊಡುವದು ಅವಶ್ಯವಾಗಿದೆ. ಬ್ರಹ್ಮದೇಶದ ಘಟನಾ ಸಮಿತಿಯು ಈಗಾಗಲೆ ಸಂಪೂರ್ಣ ಸ್ವಾತಂತ್ರ್ಯದ ಪ್ರಜಾರಾಜ್ಯದ ಘೋಷಣೆಯನ್ನು ಮಾಡಿಬಿಟ್ಟಿದೆ. ಆ ಘೋಷಣೆಗೆ ಯಾವ ರೀತಿಯಿಂದಲೂ ಬಾಧಕವಾಗದ ಬಗೆಯಲ್ಲಿ ಈ ಕಾರ್ಯವನ್ನು ಮಾಡಲಾಗುತ್ತದೆಂದೂ ಬೇರೆ ಹೇಳಬೇಕಿಲ್ಲ ಭಾರತಕ್ಕೆ ಅಧಿಕಾರದಾನ ಮಾಡುವ ಕಾಲಕ್ಕೇ ಬ್ರಹ್ಮದೇಶಕ್ಕೂ ಅಧಿಕಾರದಾನ ಮಾಡಬೇಕೆಂದು ಬ್ರಿಟಿಶರನ್ನು ಕೇಳಲಾಗುವುದೆಂದೂ ತಿಳಿಯುತ್ತದೆ. ಬ್ರಹ್ಮದೇಶದವರ ಈ ಬೇಡಿಕೆ ನ್ಯಾಯ್ಯವಾಗಿದ್ದು ಬ್ರಿಟಿಶ್‌ರು ಅದಕ್ಕೊಪ್ಪಿ ಜನತೆಯನ್ನು ಸಮಾಧಾನ ಪಡಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಬ್ರಹ್ಮದೇಶದ ವಲಸೆ ಕಾಯದೆ

ಬ್ರಹ್ಮದೇಶ ಮತ್ತು ಹಿಂದುಸ್ತಾನ ೧೯೩೭ ರ ವರೆಗೆ ಕೂಡಿಯೆ ಇದ್ದುವು. ಸ್ವಾಭಾವಿಕವಾಗಿ ಅವೆರಡೂ ರಾಷ್ಟ್ರಗಳಲ್ಲಿ ಏಕ ಭಾವನೆ ಇದ್ದಿತು. ಲಕ್ಷಾವಧಿ ಭಾರತೀಯರು ಬ್ರಹ್ಮದೇಶಕ್ಕೆ ಹೋಗಿ ಮನೆಮಾರು ಮಾಡಿಕೊಂಡಿದ್ದರು. ಬ್ರಹ್ಮದೇಶ ಹಿಂದುಸ್ತಾನದಿಂದ ಬೇರ್ಪಡಿಸಲ್ಪಟ್ಟ ನಂತರವೂ ಭಾರತೀಯ-ಬ್ರಹ್ಮೀ ಎಂಬ ಭೇದ ಭಾವ ಹೆಚ್ಚಿಗಿರಲಿಲ್ಲ. ಆದರೆ ಇತ್ತೀಚೆ ಅದು ಹೆಚ್ಚುತಿರುವದು ಕಂಡು ಬಂದಿದೆ. ಬ್ರಹ್ಮದೇಶ ಸರಕಾರದವರು ಬ್ರಿಟಿಶರ ಧೋರಣೆಗೆ ಬಲಿಬಿದ್ದು ಭಾರತೀಯರನ್ನು ಬ್ರಹ್ಮದೇಶದಿಂದ ಹೊರಗಟ್ಟುವ ವಲಸೆ ಕಾಯದೆಯನ್ನು ಇದೀಗ ಪಾಸು ಮಾಡಿಕೊಂಡು ಅತ್ಯಂತ ನಿಷೇಧಾರ್ಹ ಕೃತ್ಯವೆಸಗಿದ್ದಾರೆ. ಅದರಲ್ಲಿಯೂ ಬ್ರಿಟಿಶರ ಮೇಲೆ ಯಾವದೇ ಬಗೆಯ ನಿರ್ಬಂಧ ಹೇರದೆ ಕೇವಲ ಭಾರತೀಯರಮೇಲೆಯೆ ನಿರ್ಬಂಧ ಹೇರಿ ಅವರು ಬ್ರಹ್ಮದೇಶದಲ್ಲಿ ಪುನಃಪ್ರವೇಶಕ್ಕೆ ಅಡ್ಡಿಯನ್ನುಂಟುಮಾಡಿದ್ದು ಅನ್ಯಾಯದ ಅತಿರೇಕವೆಂದೇ ಹೇಳಬೇಕಾಗುವದು. ಕಳೆದ ಮಹಾಯುದ್ಧದಲ್ಲಿ ಬ್ರಹ್ಮದೇಶದ ಮೇಲೆ ಜಪಾನರ ದಾಳಿ ಭರದಿಂದ ಸಾಗಿರುವಾಗ ಲಕ್ಷಗಟ್ಲೆ ಭಾರತೀಯರು ಭಾರತಕ್ಕೆ ಬಂದರು; ಬ್ರಹ್ಮದೇಶ ಸರಕಾರವೂ ಭಾರತಕ್ಕೆ ಸ್ಥಳಾಂತರ ಹೊಂದಿ ಶಿಮಲೆಯಲ್ಲಿ ಒಂದು ಭೋಜನಾಲಯದಲ್ಲಿ ಬಿಡಾರ ಬಿಟ್ಟಿದ್ದಿತು. ಇದೀಗ ಯುದ್ಧವೆಲ್ಲ ನಿಂತು ಪರಿಸ್ಥಿತಿ ಶಾಂತವಾಗಿರುವದರಿಂದ ಭಾರತಕ್ಕೆ ಬಂದಿದ್ದ ಬರ್ಮಾನಿವಾಸಿಗಳೆಲ್ಲ ಮರಳಿ ಅಲ್ಲಿಗೆ ಹೋಗುವದು ಕ್ರಮಪ್ರಾಪ್ತ. ಈ ಭಾರತೀಯರಲ್ಲಿ ಮೂರು ವರ್ಗಗಳನ್ನು ಕಲ್ಪಿಸಬಹುದು. ಬ್ರಹ್ಮದೇಶ ಭಾರತದಿಂದ ಬೇರ್ಪಡೆಯಾಗುವ ಮೊದಲು ಅಲ್ಲಿದ್ದ ಭಾರತೀಯರು ಮೊದಲನೆಯ ವರ್ಗದವರು. ಅವರಂತೂ ಬ್ರಹ್ಮದೇಶದ ನಾಗರಿಕರೇ. ಅವರಿಗೆ ಎಲ್ಲ ಬಗೆಯ ಹಕ್ಕುಬಾಧ್ಯತೆಗಳುಂಟು. ಬ್ರಹ್ಮದೇಶದ ವಿಭಜನೆಯ ನಂತರ ಅಲ್ಲಿಗೆ ಹೋಗಿ ಜಪಾನದ ದಾಳಿಯಾಗುವ ವರೆಗೆ ಅಲ್ಲಿದ್ದುಕೊಂಡವರು ಎರಡನೆಯ ವರ್ಗದವರು. ಈ ಎರಡು ವರ್ಗಗಳ ಭಾರತೀಯರ ಪುನಃಪ್ರವೇಶಕ್ಕೆ ಬ್ರಹ್ಮದೇಶ ಸರಕಾರದವರು ಯಾವ ಬಗೆಯಿಂದಲೂ ಅಡ್ಡಿ ಮಾಡಲಾರರು. ಕೇವಲ ಉಪಜೀವನಕ್ಕಾಗಿಯೆಂದು ಬ್ರಹ್ಮದೇಶಕ್ಕೆ ಈಗ ಹೋಗಬಯಸುವವರನ್ನು ಬೇಕಾದರೆ ನಿರ್ಬಂಧಿಸಬಹುದು. ಹೀಗಿದ್ದರೂ ಬ್ರಹ್ಮದೇಶ ಸರಕಾರದವರು ಪೂರ್ಣ ವಿಚಾರ ಮಾಡದೆ ಭಾರತೀಯರ ಮೇಲೆ ನಿರ್ಬಂಧ ಹೇರಿದ್ದು ಅತ್ಯಂತ ವಿಷಾದದ ಸಂಗತಿ. ಹಿಂದುಸ್ತಾನ ಸರಕಾರ ಸಕಾಲದಲ್ಲಿಯೆ ಬ್ರಹ್ಮದೇಶ ಸರಕಾರದ ಈ ಸಂಕುಚಿತ ಧೋರಣವನ್ನು ಖಂಡಿಸಿರುವದು ಹಿಂದುಸ್ತಾನ ಸರಕಾರದವರು ಈ ಕಾಯದೆಯ ಕರಡಿನಲ್ಲಿ ಸೂಚಿಸಿದ ಯಾವ ಬಗೆಯ ತಿದ್ದುಪಡಿಗಳನ್ನೂ ಮಾಡದೆ ಬೇರೆ ಕಲಮುಗಳನ್ನೆ ಸೇರಿಸಿ ಅದನ್ನು ಪಾಸುಮಾಡಿಕೊಂಡಿದ್ದು ರಾಜಕೀಯ ಸಂಬಂಧದ ಕ್ರಮದ ಭಂಗವೆಂದು ಹಿಂದುಸ್ತಾನ ಸರಕಾರ ಪ್ರತಿಭಟಿಸಿದೆ. ಎರಡೂ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ಸೂರ್ಯ ಉದಯವಾಗಲಿರುವ ಈ ಸಮಯದಲ್ಲಿ ಬ್ರಹ್ಮದೇಶ ಸರಕಾರ ಇಂಥ ನಿರ್ಬಂಧ ಹಾಕಿ ಪರಸ್ಪರರ ಸಂಬಂಧವನ್ನು ಹದಗೆಡಿಸುವದು ಸೂಕ್ತವಾಗಲಾರದು.

ಅಮೇರಿಕನ್‌ರ ಹಾರೈಕೆ

ಭಾರತಕ್ಕೆ ಅಮೇರಿಕೆಯ ರಾಯಭಾರಿಗಳೆಂದು ಬಂದ ಡಾ. ಹೆನ್ರಿ ಗ್ರೇಡೆಯವರು ಮುಂಬಯಿಗೆ ಬಂದಿಳಿದ ಕೂಡಲೆ ಭಾರತದ ಭವಿತವ್ಯದ ಬಗೆ ಆಶೋತ್ತರಗಳನ್ನು ವ್ಯಕ್ತಪಡಿಸಿದರು. ಭಾರತವು ತನ್ನ ಮಹತ್ಕಾರ್ಯದಲ್ಲಿ ಯಶಸ್ಸು ಪಡೆಯುವದೆಂಬ ಆಸೆ ಅಮೇರಿಕೆ ಇಟ್ಟುಕೊಂಡಿದೆಂದು ತಿಳಿಸಿದರು. ಭಾರತದ ಈ ನವಜಾತ ಭಾರತದ ಇಷ್ಟೇ ಅಲ್ಲ ಇಡೀ ಜಗತ್ತಿನ ದೃಷ್ಟಿಯಿಂದ ತೀರ ಮಹತ್ವದ್ದಾಗಿದ್ದು ಅದರ ಭವಿತವ್ಯವನ್ನು ಇಡೀ ಅಮೇರಿಕೆ ರಾಷ್ಟ್ರ ಒಳ್ಳೆ ಆತುರತೆಯಿಂದ ನಿರೀಕ್ಷಿಸುತಿದೆಂದು ಅಭಿಪ್ರಾಯಪಟ್ಟರು. ಭಾರತವಿಂದು ಪರಕೀಯ ಸತ್ತೆಯನ್ನು ತೊರೆದು ಸ್ವತಂತ್ರವಾಗುತಲಿದೆ. ಈ ಸಮಯದಲ್ಲಿ ಬೇರೆ ಬೇರೆ ರಾಷ್ಟ್ರಗಳೊಡನೆ ರಾಯಭಾರ ಸಂಬಂಧವನ್ನು ಬೆಳೆಸುವದು ಇಷ್ಟವಾಗಿದೆ. ಅಮೇರಿಕೆಯಲ್ಲಿ ಡಾ. ಆಸಫ ಅಲಿಯಂಥ ಉಜ್ವಲ ರಾಷ್ಟ್ರಾಭಿಮಾನಿಗಳು ಹಿಂದುಸ್ತಾನದ ರಾಯಭಾರಿಗಳಾಗಿರುವರು. ಡಾ. ಹೆನ್ರಿ ಗ್ರೇಡಿಯವರಂಥ ಮಹನೀಯರು ಹಿಂದುಸ್ತಾನಕ್ಕೆ ರಾಯಭಾರಿಗಳಾಗಿ ಬಂದದ್ದು ಎರಡೂ ರಾಷ್ಟ್ರಗಳಲ್ಲಿನ ಸಂಬಂಧ ಮತ್ತಷ್ಟು ಸ್ನೇಹವಾಗುವದಕ್ಕೆ ಅನುಕೂಲವಾಗಿದೆ. ಭಾರತದ ಹೆಸರು ಈ ರೀತಿಯಾಗಿ ಅಂತರ್ ರಾಷ್ಟ್ರೀಯ ಕ್ಷೇತ್ರದಲ್ಲಿ ಮುಂದೆ ಬೆಳಗುತಿರುವುದು ಶುಭಸೂಚಕವು. ಭಾರತ ಬೇಗನೆ ಸ್ವತಂತ್ರವಾಗಿ ಜಗತ್ತಿನಲ್ಲಿ ಅದಕ್ಕೂ ಹೆಚ್ಚಿನ ಸ್ಥಾನ ದೊರೆತು ಇತರ ರಾಷ್ಟ್ರಗಳಲ್ಲಿ ಮುಖ್ಯದ ಹೊಣೆಗಾರಿಕೆಯನ್ನು ಹೊರುವಂತಾಗಲಿ.

ಹಿಂದೀ ಒಕ್ಕೂಟದಲ್ಲಿ ಸೇರದ

ಸಂಸ್ಥಾನಗಳ ಮೇಲೆ ಆರ್ಥಿಕ ಪ್ರತೀಕಾರೋಪಾಯ ?

ತಿರ್ವಾಂಕೂರಿನ ಮೇಲೆ ಮೊದಲನೆ ಗದೆ— ಕೆಂಪಂಗಿಗಳು ಗಡಿನಾಡಿನ ಮತಗಣನೆಯನ್ನು ಬಹಿಷ್ಕರಿಸುವರು— ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸೊತ್ತುಸಾಲಗಳನ್ನು ಹಂಚುವಲ್ಲಿ ಬಿಕ್ಕಟ್ಟು ?

ಮತಗಣನೆಗೆ ಬಹಿಷ್ಕಾರ

ಬಂಗಾಲ ಮತ್ತು ಪಂಜಾಬದ ವಿಭಜನೆಯಾಗಬೇಕೆಂಬ ನಿರ್ಣಯವಾಗಿ ಆ ಬಗ್ಗೆ ಸಮಿತಿಗಳ ನೇಮಕವಾಗಿಬಿಟ್ಟದ್ದರಿಂದ ಆ ಎರಡು ಪ್ರಾಂತಗಳ ಮುಂದಾಳುಗಳ ಮನಸ್ಸಿನಿಂದ ದೂರವಾದಂತಾಯಿತು. ಆದರೆ ಹಿಂದುಸ್ತಾನದ ಪ್ರಾದೇಶಿಕ ವಿಭಜನೆಯ ಎಲ್ಲ ತೊಡಕುಗಳು ಇನ್ನೂ ಮುಗಿದಂತಾಗಿಲ್ಲ. ಗಡಿನಾಡಿನಲ್ಲಿ ನಡೆಯಲಿರುವ ಜನಮತಗಣನೆಯ ಬಗ್ಗೆ ದೊಡ್ಡ ವಿವಾದವೇ ಎದ್ದು ನಿಂತಿದೆ. ಗಡಿನಾಡ ಗಾಂಧಿಯೆನಿಸಿದ ಅಬ್ದುಲ ಗಫಾರಖಾನರು ತಮ್ಮ ದೊಡ್ಡ ಮನ್ನಿತ ಹೇಳಿಕೆಯಲ್ಲಿ ಗಡಿನಾಡ ಮತಗಣನೆಗೆ ಕೆಂಪಂಗಿ ಪಕ್ಷದವರು ಬಹಿಷ್ಕಾರ ಹಾಕುವದಾಗಿ ಸಾರಿದರು. ಅವರ ವಾದ ತೀರ ಸರಳವಾಗಿದೆ. ಗಡಿನಾಡ ಪಠಾಣರಿಗೆ ಪಾಕಿಸ್ತಾನ ಇಲ್ಲವೆ ಹಿಂದುಸ್ತಾನ ಘಟನಾಸಮಿತಿಯಲ್ಲಿ ಸೇರುವ ಸ್ವಾತಂತ್ರ್ಯ ಕೊಡಲಾಗಿದೆಯಲ್ಲದೆ ನಿಜವಾಗಿ ತಮ್ಮ ಭವಿತವ್ಯವನ್ನು ನಿರ್ಧರಿಸಿಕೊಳ್ಳುವ ಹಕ್ಕು ಕೊಡಲ್ಪಟ್ಟಿಲ್ಲ. ಸ್ವತಂತ್ರ ಪಠಾಣ ರಾಜ್ಯ ಇಲ್ಲವೆ ಪಾಕಿಸ್ತಾನ ಇವುಗಳಲ್ಲೊಂದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿದ್ದರೆ ಮಾತ್ರ ಪಠಾಣರಿಗೆ ನಿಜವಾದ ಆಯ್ಕೆ ಮಾಡಿಕೊಳ್ಳಲು ಅವಕಾಶವಾಗುವದು. ಹಿಂದುಸ್ತಾನ ಇಲ್ಲದೆ ಪಾಕಿಸ್ತಾನಗಳಲ್ಲೊಂದನ್ನಾರಿಸುವದೆಂದರೆ ಪಠಾಣ ಪಠಾಣರಲ್ಲಿ ಹಿಂದೂ-ಮುಸ್ಲಿಂ ಎಂಬ ಜಾತೀಯ ಪ್ರಶ್ನೆಯನ್ನು ಮುಂದೆ ಮಾಡಿ ಒಡಕು ಹುಟ್ಟಿಸಿದಂತಾಗುವದು. ಇಂದಿನ ದ್ವೇಷಮಯ ವಾತಾವರಣದಲ್ಲಿ ಈ ಜಾತೀಯ ತಳಹದಿಯ ಮೇಲೆ ಮತಗಣನೆಯನ್ನು ನಡೆಸುವದೆಂದರೆ ಅದು ಕಲುಷಿತ ತಂಟೆಯ ಒಳಸಂಚಿನ ಹರಿಕಾರನೇ ಸರಿ ಎಂದು ಬಾದಶಹಾ ಖಾನರು ತಮ್ಮ ಬಹಿಷ್ಕಾರ ನಿರ್ಣಯದ ಬಗ್ಗೆ ಹೊರಡಿಸಿದ ಹೇಳಿಕೆಯಲ್ಲಿ ವಿವರಿಸಿದ್ದಾರೆ. ಗಡಿನಾಡಿನ ಅಧಿಕಾರಿಗಳ ಪಕ್ಷಪಾತ, ಅಲ್ಲಿ ಲೀಗಿನವರು ನಡೆಸಿದ ಜಾತೀಯ ಹಿಂಸಾಚಾರ ಇವೆಲ್ಲವನ್ನು ಅವರು ಬಯಲಿಗೆಳೆದಿರುವರಲ್ಲದೆ, ಗಲಭೆಯ ಕಾಲದಲ್ಲಿ ಪ್ರಾಂತವನ್ನು ಬಿಟ್ಟುಹೋದ ಪಠಾಣ ಅಲ್ಪಸಂಖ್ಯಾತರನ್ನು ಮತಗಣನೆಯ ಕಾಲಕ್ಕೆ ತಿರುಗಿ ಬರದಂತೆ ಲೀಗಿನವರು ತಡೆಯುತ್ತಿದ್ದಾರೆಂದೂ ಹೇಳಿರುವರು. ಜಾತೀಯ ದ್ವೇಷದ ಮೇಲೆ ಮತಗಣನೆ ನಡೆಸಿ ಪಠಾಣ ಪಠಾಣರಲ್ಲಿ ದ್ವೇಷ ಹುಟ್ಟಿಸದೆ ಶಾಂತ ರೀತಿಯಿಂದ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲು ಗಫಾರಖಾನರು ಶಕ್ತಿಮೀರಿ ಹೆಣಗಿದರು. ಒಣ ಹೊಲು ಹಚ್ಚಿಕೊಳ್ಳದೆ ದಿಲ್ಲಿಯಲ್ಲಿ ಜಿನ್ನಾಸಾಹೇಬರನ್ನು ಭೆಟ್ಟಿಯಾಗಿ ಏನಾದರೊಂದು ಒಪ್ಪಂದ ಮಾಡಿಕೊಳ್ಳಲು ಅವರು ಯತ್ನಿಸಿದರು. "ಮೊದಲು ಪಾಕಿಸ್ತಾನ ಸೇರಿರಿ, ಆ ಮೇಲೆ ನಿಮ್ಮ ಬೇಡಿಕೆಗಳತ್ತ ಮುಂದೊತ್ತರ" ಎಂಬೊಂದೇ ಕುರುಡ ಹಿಡಿದ] ಜಿದ್ದಿನಿಂದ ಜಿನ್ನಾರು ಗಫಾರಖಾನರಿಗೆ ಉತ್ತರವಿತ್ತರಂತೆ. ಮತಗಣನೆಯ ಹಾದಿಯೇ ಸರಿಯಾಗಿಲ್ಲವೆಂಬುದೊಂದೇ ತಾತ್ವಿಕ ತೊಡಕಲ್ಲ. ಗಡಿನಾಡು ಬಡಪ್ರಾಂತ. ಅದು ಕೇಂದ್ರದಿಂದ ವರ್ಷಕ್ಕೆ ಒಂದೂವರೆ ಕೋಟಿ ಸಹಾಯಧನ ಪಡೆಯುತ್ತಿದೆ. ತಾನೇ ಬಡವಾದ ಪಾಕಿಸ್ತಾನ ಇಷ್ಟು ಸಹಾಯವನ್ನು ಕೊಡುವದೆ? ಇಲ್ಲದಿದ್ದರೆ ಪಾಕಿಸ್ತಾನ ಸೇರಿ ಪಠಾಣರಿಗೆ ಪುರುಷಾರ್ಥವೇನು ? ತಮ್ಮ ಬದುಕನ್ನು ಅಷ್ಟು ಹೆಚ್ಚಿಸಿಕೊಂಡು ಸಿಂಧ ಪಂಜಾಬಗಳ ದಾಸ್ಯಕ್ಕೆ ಗುರಿಯಾಗುವದೊಂದೇ ಲಾಭವೆ? ಇದಾವುದಕ್ಕೂ ಜಿನ್ನಾರಾಗಲಿ ಅವರ ಅನುಯಾಯಿಗಳಾಗಲಿ ಸಮರ್ಪಕ ಉತ್ತರವನ್ನು ಕೊಡದೆ ಕೇವಲ ಜಾತೀಯ ದ್ವೇಷವನ್ನು ಕೆರಳಿಸಿ ಮತಗಣನೆಯಲ್ಲಿ ಪಠಾಣ ಜನತೆಯನ್ನು ಪಾಕಿಸ್ತಾನ ಬುಟ್ಟಿಯಲ್ಲಿ ಹಾಕಿಕೊಳ್ಳುವ ಹಟ ತೊಟ್ಟಿದ್ದಾರೆ. ಗಫಾರಖಾನರು ಈ ಬಗ್ಗೆ ವಾಯಿಸರಾಯರೊಡನೆಯೂ ಮಾತುಕತೆ ನಡೆಸಿದರು. ಆದರೆ ಎರಡೂ ಪಕ್ಷಗಳಲ್ಲಿ ಒಡಂಬಡಿಕೆಯಾಗದೆ ಮತಗಣನೆಯ ಮುದ್ದತನ್ನು ಬದಲಿಸುವದಾಗದೆಂದು ಅವರೆಂದರು. ಗಫಾರಖಾನರು ಕೇಳುವ ಪಠಾಣಿಸ್ತಾನವಾದರೂ ಸರ್ವತಂತ್ರ ಸ್ವತಂತ್ರ ರಾಜ್ಯವಾಗಬಯಸುವದಿಲ್ಲೆಂದು ಗಾಂಧೀಜಿಯವರು ವಿವರಿಸಿದ್ದಾರೆ. ಪ್ರಾಂತಕ್ಕೆ ಸ್ವಯಂನಿರ್ಣಯಾಧಿಕಾರ ದೊರೆತ ಮೇಲೆ ಅದು ಅನುಕೂಲ ನೋಡಿ ಎರಡು ಒಕ್ಕೂಟಗಳಲ್ಲೊಂದನ್ನು ಸೇರುವದು. ಆದರೆ ತಾತ್ಪೂರ್ತಿಕ ವಿಜಯದಿಂದ ಮತ್ತರಾದ ಲೀಗಿನವರು ಪಠಾಣ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಬೇಳೆ ಬೇಯಿಸಿಕೊಳ್ಳುವ ಹಟತೊಟ್ಟಿರುವದರಿಂದ ಕೆಂಪಂಗಿಗಳು ಮತಗಣನೆಯನ್ನೆ ಬಹಿಷ್ಕರಿಸಿ ಪಠಾಣರಲ್ಲಿ ಒಡಕು ಹುಟ್ಟಿಸುವವರ ತಂತ್ರದ ವಿರುದ್ಧ ಹೋರಾಟ ಹೂಡಿದರು. ಗಡಿನಾಡಿನ ಮತಗಣನೆ ತಾ. ೬ ಜುಲೈಗೆ ಪ್ರಾರಂಭವಾಗಿ ೧೬ ಕ್ಕೆ ಮುಗಿಯುವದು.

ಬಲೂಚಿಗಳ ಸಂಶಯ

ಗಡಿನಾಡೊಂದೇ ಈ ಬಗೆಯಾಗಿ ಸಂದಿಯಲ್ಲಿ ಸಿಕ್ಕಬಿದ್ದಿಲ್ಲ. ಬಲೂಚಿಸ್ತಾನದ ಪರಿಯಾದರೂ ಹೆಚ್ಚು ಕಡಿಮೆ ಇದೇ. ಹೊಸ ದಿಲ್ಲಿಯಿಂದ ಹೊರಟ ಅಧಿಕೃತ ಪ್ರಕಟನೆಯೊಂದು ಬಲೂಚಿಸ್ತಾನದ ಅಭಿಪ್ರಾಯವನ್ನು ತಿಳಿದುಕೊಳ್ಳುವ ಕ್ರಮವನ್ನು ನಿರ್ದೇಶಿಸಿದೆ. ಶಾಹಿ ಜಿರಗಾ (ಬಲೂಚಿ ಜನರ ಪಂಚಾಯತಿಗಳು) ದ ಸದಸ್ಯರೆಲ್ಲರ ಮತ್ತು ಕ್ವೆಟಾ ನಗರ ಸಭೆಯ ಅಧಿಕಾರೇತರ ಸದಸ್ಯರ ಸಂಯುಕ್ತ ಸಭೆಯಲ್ಲಿ ಬಲೂಚಿಸ್ತಾನ ಹಿಂದುಸ್ತಾನದ ಘಟನಾ ಸಮಿತಿಯಲ್ಲಿ ಸೇರುವದೋ ಹೊಸ [ಪಾಕಿಸ್ತಾನ] ಘಟನಾ ಸಮಿತಿಯಲ್ಲೊ ಎಂಬ ಬಗ್ಗೆ ಮತಗಣನೆ ನಡೆಯುವದು. ಈ ಸಂಬಂಧದಲ್ಲಿ ಬಲೂಚಿಗಳು ತಳೆಯಬೇಕಾದ ಧೋರಣೆಯನ್ನು ನಿರ್ಧರಿಸಲು ಈಚೆಗೆ ಬಲೂಚಿ ಮುಂದಾಳುಗಳ ಸಭೆಯೊಂದು ಸೇರಿತು. ಅದನ್ನು ಕರೆದ ನವಾಬ ಮಹಮದ ಖಾನ ಜಗದಾಳ ಅವರು ಬಲೂಚಿಸ್ತಾನ ನೇರವಾಗಿ ಪಾಕಿಸ್ತಾನವನ್ನು ಸೇರಬೇಕೆಂದರು. ಆದರೆ ಅವರ ಈ ಅಭಿಪ್ರಾಯಕ್ಕೆ ಎರಡು ದಿಕ್ಕುಗಳಿಂದ ವಿರೋಧಬಂತು. ಬಲೂಚಿ ಜಮಾಯತ್ ಉಲ್-ಉಲೇಮಾದವರು ಪಾಕಿಸ್ತಾನಕ್ಕೆ ಬಲೂಚಿಸ್ತಾನ ಸೇರಬೇಕಾದರೆ ಮೊದಲು ಮುಸ್ಲಿಂ ಲೀಗಿನಿಂದ ಬಲೂಚಿಗಳ ಸ್ವಾಯತ್ತತೆಗೆ ಮಾನ ಕೊಡುವ, ಬಲೂಚಿಸ್ತಾನಕ್ಕೆ ಬೀಳುವ ಹಣಕಾಸಿನ ಕೊರತೆಯನ್ನು ತುಂಬಿಕೊಡುವ ಹಾಗು ಬಲೂಚಿಸ್ತಾನದ ಘಟನೆಯನ್ನು ಇಸ್ಲಾಮಿ ಕಾಯಿದೆಯ ಮೇರೆಗೆ ರಚಿಸುವ ಆಶ್ವಾಸನವನ್ನು ಪಡೆಯಬೇಕೆಂದರು. ಲೋರಲಾಯಿ ಮುಸ್ಲಿಂ ಸಂಘದ ಅಧ್ಯಕ್ಷರಂತೂ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಯಾವುದು ಅನುಕೂಲ ಕರಾರುಗಳನ್ನು ಕೊಡುವದೋ ಅದರಲ್ಲಿ ಸೇರಬೇಕೆಂದರು. ಹೀಗಾಗಿ ಸಭೆ ನಿರ್ಣಯಕ್ಕೆ ಬರಲಾರದೆ ಚದರಿತು.

ತಿರ್ವಾಂಕೂರಿನ ಆಹ್ವಾನ

ಹೈದರಾಬಾದು, ತಿರ್ವಾಂಕೂರು ಇವೆರಡೂ ಆಗಸ್ಟ ೧೫ ರ ನಂತರ "ಸ್ವತಂತ್ರ" ವಾಗುವದಾಗಿ ಸಾರಿದ್ದರೂ ತಿರ್ವಾಂಕೂರಿನ ದಿವಾಣರೊಬ್ಬರೇ ಈ ಬಗ್ಗೆ ಬಂದ ಟೀಕೆಗಳಿಗೆ ಉತ್ತರ ಕೊಟ್ಟು ದೊಡ್ಡ ವಿವಾದವನ್ನೆಬ್ಬಿಸಿದ್ದಾರೆ. ಅವರ ಸಂಸ್ಥಾನದಲ್ಲಿ ಈಗಾಗಲೆ ಸಭೆ ಮೆರವಣಿಗೆಗಳಿಗೆ ಹಲವು ನಿರ್ಬಂಧಗಳಿದ್ದರೂ ತಾವು ನಾಗರಿಕ ಸ್ವಾತಂತ್ರ್ಯವನ್ನೆತ್ತಿ ಹಿಡಿಯುವವರೆಂಬ ಬಡಾಯಿಯನ್ನು ಸರ್ ಸಿ. ಪಿ. ಯವರು ಕೊಚ್ಚಿಕೊಳ್ಳುತ್ತಿದ್ದಾರೆ. ಗಾಂಧೀಜಿಗೆ ಅವರು ತಮ್ಮ ನಿಲುವೆಯನ್ನು ಸಮರ್ಥಿಸಿ ದಿನದಿನಗಳಾದರೊಂದು ತಂತಿ ಕಳಿಸುತಿದ್ದಾರೆ. ತಿರ್ವಾಂಕೂರಿನ ಜನಮತ ತಮ್ಮ ಕಡೆಗೇ ಇದೆ, ಸಂಸ್ಥಾನ ಕಾಂಗ್ರೆಸ್ಸಿಗೆ ಜನರು ರೋಸಿ ಹೋಗಿದ್ದಾರೆ ಎಂಬ ವಾದವನ್ನು ಅವರು ಎತ್ತಿ ಹಿಡಿದಿರುವದಲ್ಲದೆ ಗಡಿನಾಡಿನಲ್ಲಿ ಸ್ವತಂತ್ರ ಪಠಾಣಿಸ್ತಾನಕ್ಕೆ ಬೆಂಬಲ ಕೊಡುವ ಗಾಂಧೀಜಿ ತಿರುವಾಂಕೂರಿನ ಸ್ವಾತಂತ್ರ್ಯಕ್ಕೇಕೆ ಅಡ್ಡ ಮಾತಾಡುವರೆಂದು ಕೇಳುತ್ತಾರೆ. ಪಠಾಣಿಸ್ತಾನದ ಸ್ವಾತಂತ್ರ್ಯ ಸರ್ವತಂತ್ರ ಸ್ವಾತಂತ್ರ್ಯವಲ್ಲವೆಂದು ಗಾಂಧೀಜಿ ಅದಕ್ಕೆ ಉತ್ತರ ಕೊಟ್ಟರು. ಸಂಸ್ಥಾನಿ ಕಾಂಗ್ರೆಸ್ಸು "ಹೊರಗಿನವರ" ಸಹಾಯದಿಂದ ಅಸಹಕಾರ ಚಳವಳಿಯನ್ನು ಪ್ರಾರಂಭಿಸಿದರೆ, ಅದು ಬೆಂಬಲವಿಲ್ಲದೆ ಸೋಲುವದು ನಿಶ್ಚಿತವೆಂದು ಅವರ ಭವಿಷ್ಯ. ಇಷ್ಟಕ್ಕೇ ನಿಲ್ಲಿಸದೆ ಅವರು ಈಗಾಗಲೆ ಕೃತಿಯಿಂದ ತಮ್ಮ "ಸ್ವಾತಂತ್ರ್ಯ" ವನ್ನು ತೋರಿಸುವ ದಿಟ್ಟತನಕ್ಕಿಳಿದಿದ್ದಾರೆ. [ಜಿನ್ನಾಸಾಹೇಬರಿಗೆ ತಂತಿ ಕಳಿಸಿ, ಪಾಕಿಸ್ತಾನ ಪ್ರಾಪ್ತಿಗಾಗಿ ಅವರನ್ನು ಅಭಿನಂದಿಸಿ, ತಿರುವಾಂಕೂರಿನಿಂದ ಪಾಕಿಸ್ತಾನಕ್ಕೆ ರಾಯಭಾರಿಯನ್ನು ಕಳಿಸುವದಾಗಿ ಅವರು ಸೂಚಿಸಿದರು. [ಜಿನ್ನಾರು ಅದನ್ನು ಬಾಚಿ ತಬ್ಬಿಕೊಂಡರೆಂದು ಹೇಳಬೇಕಿಲ್ಲ. ಈ ಎಲ್ಲ "ಅಸೌಹಾರ್ದ" ದ ಕೃತಿಗಳಿಗಾಗಿ, ಹಿಂದುಸ್ತಾನ ಸರಕಾರದವರು ಒಕ್ಕೂಟದಿಂದ ಹೊರಗುಳಿಯುವ ಸಂಸ್ಥಾನಗಳ ಮೇಲೆ ಕೈಕೊಳ್ಳಬೇಕೆಂದಿರುವ ಆರ್ಥಿಕ ಬಹಿಷ್ಕಾರಕ್ಕೆ ತಿರ್ವಾಂಕೂರು ಮೊದಲನೆ ಆಹುತಿಯಾಗುವ ಲಕ್ಷಣ ತೋರುತಿದೆ. ತಾವೀ ಬಹಿಷ್ಕಾರಕ್ಕೆ ಬೆದರುವದಿಲ್ಲೆಂದು ಸರ್ ಸಿ. ಪಿ. ಯವರು ವಾದಿಸಿ, ಬಹಿಷ್ಕಾರವೆಂಬುದು ಉಭಯತಃ ಪ್ರಯೋಗಿಸಬಹುದಾದ ಅಸ್ತ್ರವೆಂದರು. ಆದರೆ ಎಲ್ಲವನ್ನು ಗಮನಿಸಿಯೇ ಹಿಂದುಸ್ತಾನ ಸರಕಾರ ಕ್ರಮ ಕೈಕೊಳ್ಳುವ ವಿಚಾರದಲ್ಲಿದೆ. ತಿರ್ವಾಂಕೂರಿನಿಂದ ಮುಖ್ಯವಾಗಿ ಬರುವ ಕೊಬ್ಬರಿಯನ್ನು ಸಿಂಹಳದಿಂದ ತುಂಬಿಕೊಳ್ಳುವ ವಿಚಾರ ನಡೆದಿದೆ. ಮದ್ರಾಸ ಸರಕಾರದವರು ತಿರ್ವಾಂಕೂರಿಗೆ ಕಡ ಕೊಟ್ಟಿದ್ದ ಅಧಿಕಾರಿಗಳನ್ನು ಹಿಂತೆಗೆದುಕೊಳ್ಳಬಹುದು. ಕೇಂದ್ರಸರಕಾರದ ನೌಕರಿಯಲ್ಲಿರುವ ತಿರ್ವಾಂಕೂರು ಪ್ರಜೆಗಳ ಮೇಲೆ ಕ್ರಮ ತೆಗೆದುಕೊಳ್ಳಬಹುದು. ನಿಜಾಮರ ಮೇಲೆ ಇಂಥ ಕ್ರಮಗಳನ್ನು ಕೈಕೊಳ್ಳುವ ಮೊದಲು ಸಂಸ್ಥಾನದ ಹಳ್ಳಿಹಳ್ಳಿಗಳಲ್ಲಿ ಸಭೆ ಸೇರಿಸಿ ಹಿಂದೀ ಒಕ್ಕೂಟವನ್ನು ಸೇರುವಂತೆ ನಿಜಾಮರನ್ನು ಕೇಳಿಕೊಳ್ಳುವ ಗೊತ್ತುವಳಿ ಮಾಡುವ ಎತ್ತುಗಡೆಯನ್ನು ಸಂಸ್ಥಾನ ಕಾಂಗ್ರೆಸ್ಸು ನಡೆಸಿದೆ.

ಹಿಂ. ಸರಕಾರದ ರಾಜಕೀಯ ಶಾಖೆಯನ್ನು ನಿಲ್ಲಿಸಿದಂತಾದ್ದರಿಂದ ಆಗಸ್ಟ ೧೫ ಕ್ಕೆ ತಿರುವಾಂಕೂರು ಹಾಗೂ ಹೈದರಾಬಾದ ಸಂಸ್ಥಾನಗಳಿಗೆ ತಮ್ಮ ಸ್ವಾತಂತ್ರ್ಯ ಘೋಷಿಸಲು ಬರುವುದಿಲ್ಲ. ಹೊಸ ಒಡಂಬಡಿಕೆ ಮಾಡಿಕೊಳ್ಳುವ ವರೆಗೆ ಅವು ವಸಾಹತು ಸರಕಾರಗಳ ಕೈಕೆಳಗೆ ಕೆಲಸ ಮಾಡಬೇಕಾಗುತ್ತದೆ.

ವಿಭಜನ ಸಮಿತಿಗಳು

ಇತ್ತ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಹಿಂದುಸ್ತಾನದ ಸೊತ್ತು ಸಾಲ ಮೊದಲಾದವುಗಳನ್ನು ವಿಭಜಿಸುವ ಸಲುವಾಗಿ ಹಿಂದೂ ಮುಸ್ಲಿಮ ಸದಸ್ಯರನ್ನೊಳಗೊಂಡ ಒಂಭತ್ತು ಸಮಿತಿಗಳು ನೇಮಿಸಲ್ಪಟ್ಟಿವೆ. ವಿಭಜನೆ ಜನಸಂಖ್ಯೆಯ ಪ್ರಮಾಣದಲ್ಲಿ ಮಾಡಲ್ಪಡುವದೆಂದು ತಿಳಿಯುತ್ತದೆ. ಒಂಭತ್ತು ತಜ್ಞ ಸಮಿತಿಗಳಿಂತಿವೆ: (೧) ಸರಕಾರದ ಸಂಘಟನೆ ಮತ್ತು ಅಧಿಕಾರಿ ವರ್ಗದ ಮೇಲೆ ವಿಭಜನೆಯಿಂದಾಗುವ ಪರಿಣಾಮವನ್ನು ಅಭ್ಯಸಿಸಿ ಸೂಕ್ತ ಉಪಾಯಗಳನ್ನು ಸೂಚಿಸಲು; (೨) ಹಿಂದುಸ್ತಾನ ಸರಕಾರದ ಸೊತ್ತು ಸಾಲಗಳನ್ನು ಲೆಕ್ಕಮಾಡಿ ಅವುಗಳ ವಿಭಜನೆಯ ಕ್ರಮವನ್ನು ಸೂಚಿಸಲು (೩) ಹಿಂದುಸ್ತಾನದ ಈ ವರ್ಷದ ತೆರಿಗೆ ಮೊದಲಾದವುಗಳ ವಿಭಜನೆಯ ಬಗೆಯನ್ನು ಸೂಚಿಸಿ ಮುಂದೆ ಸುಂಕ, ಆದಾಯ ತೆರಿಗೆ ಮೊದಲಾದವುಗಳಲ್ಲಿ ಉಭಯ ಸರಕಾರಗಳ ಸಂಬಂಧವೆಂತಿರಬೇಕೆಂದು ಸೂಚಿಸಲು (೪) ಕೇಂದ್ರ ಸರಕಾರದ ಗುತ್ತಿಗೆಗಳನ್ನು ಕುರಿತು ಸೂಚಿಸಲು (೫) ಚಲಾವಣೆಯಲ್ಲಿರುವ ಹಣದ ಮತ್ತು ರಿಜರ್ವಬ್ಯಾಂಕಿನ ಸೊತ್ತು ಸಾಲಗಳ ವಿಭಜನೆಯ ಬಗೆಯನ್ನು ಸೂಚಿಸಲು (೬) ನಿಯಂತ್ರಣಗಳ ವ್ಯವಸ್ಥೆಯ ಬಗ್ಗೆ ಸೂಚಿಸಲು (೭) ಉಭಯ ಪ್ರದೇಶಗಳ ನಡುವೆ ವ್ಯಾಪಾರ ಮೊದಲಾದ ಸಂಬಂಧಗಳ ಬಗ್ಗೆ ಸೂಚನೆ ಕೊಡಲು (೮) ಉಭಯ ರಾಷ್ಟ್ರಗಳ ನಾಗರಿಕತ್ವ ನಿಯಮಗಳ ಬಗ್ಗೆ ಸೂಚನೆ ಕೊಡಲು ೯) ವಿದೇಶ ಮತ್ತು ಬ್ರಿಟಿಶ ಸಾಮ್ರಾಜ್ಯ ರಾಷ್ಟ್ರಗಳೊಡನೆ ಇಟ್ಟುಕೊಳ್ಳಬೇಕಾದ ಸಂಬಂಧದ ಮತ್ತು ವಿದೇಶದಲ್ಲಿರುವ ಹಿಂದೀಯರ ಬಗ್ಗೆ ಸೂಚನೆ ಕೊಡಲು. ಹೀಗೆ ನೇಮಿಸಲ್ಪಟ್ಟ ಸಮಿತಿಗಳು ಸಕಾಲಕೆ ಕಾರ್ಯ ಮಾಡುವಂತೆ ನೋಡಿಕೊಳ್ಳಲು ನಿರ್ದೇಶಕ ಸಮಿತಿಯೊಂದು ನೇಮಿಸಲ್ಪಟ್ಟಿದೆ.

ವಿಭಜನೆಯಲ್ಲಿ ತೊಡಕು?

ಇವೆಲ್ಲ ಸಮಿತಿಗಳು ಭರದಿಂದ ಕೆಲಸವನ್ನು ಆರಂಭಿಸಿದ್ದರೂ ಆಮೆರಿ ಸಾಹೇಬರು ಕಳೆದ

—೧೪ ನೇ ಪುಟಕ್ಕೆ



ದಿಲ್ಲಿ ಅ. ಭಾ. ಕಾಂ. ಸಭೆಯಲ್ಲಿ ಬ್ರಿಟಿಶ ಯೋಜನೆಯನ್ನೊಪ್ಪಿದ ೧೫೭ ಕೈಗಳು.

ಅಂತರರಾಷ್ಟ್ರೀಯ

ರಶಿಯಾದ ಒಪ್ಪಿಗೆ

ರಶಿಯಾದೊಡನೆ ಸ್ನೇಹದಿಂದಿರೋಣ ಎಂದು ಕಳೆದ ಕೆಲ ತಿಂಗಳಿಂದ ಒದರುತ್ತಿರುವ ಅಮೇರಿಕೆಯ ಹಿಂದಿನ ಉಪಾಧ್ಯಕ್ಷರಾದ ವಾಲೇಸರು, ಕಮ್ಯೂನಿಸ್ಟ ವಿರೋಧಿ ರಾಷ್ಟ್ರಗಳಿಗೆ ಸೈನಿಕ ಸಹಾಯವನ್ನು ನೀಡುವ ಬದಲು ರಶಿಯಾ ಮೊದಲಾದ ಉಧ್ವಸ್ತ ಯುರೋಪಿಯನ್ ರಾಜ್ಯಗಳಿಗೆ ಪುನರ್ನಿಯೋಜನೆಗಾಗಿ ಸಾಲ ಕೊಟ್ಟರೆ ಜಗತ್ತಿನ ಶಾಂತಿಗೆ ಪೋಷಕವಾಗುವದೆಂದು ಸಾರುತ್ತಿದ್ದರು. "ಯುರೋಪಿಗೆ ಸಹಾಯ" ಮಾಡುವ ಅಮೇರಿಕನ್ ವಿದೇಶ ಮಂತ್ರಿ ಜನರಲ್ ಜಾರ್ಜ ಮಾರ್ಶಲ್ಲರ ಯೋಜನೆಯ ಬಗ್ಗೆ ನಡೆವ ಮಾತುಕತೆಯಲ್ಲಿ ಭಾಗವಹಿಸಲು ರಶಿಯನ್ ಸರಕಾರ ಒಪ್ಪಿದ್ದು ವಾಲೇಸರ ಪ್ರಮೇಯದ ಸತ್ಯತ್ವದ ದ್ಯೋತಕವಾಗಿರಬಹುದು, ಇಲ್ಲವೆ ಬ್ರಿಟನ್ ಅಮೇರಿಕೆಗಳ "ಬಿಗಿ" ಧೋರಣೆಯ ವಿಜಯವಾಗಿರಬಹುದು. ಹೇಗೆಯೆ ಇದ್ದರೂ ಮಾರ್ಶಲ್ಲರ ಯೋಜನೆಯನ್ನು "ಬೇರೆ ರಾಷ್ಟ್ರಗಳ ಅಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುವ ಇನ್ನೊಂದು ಉಪಾಯ" ಎಂದು ರಶಿಯನ್ ಪತ್ರಿಕೆಗಳು ತೆಗಳಿದ್ದರೂ ರಶಿಯನ್ ಸರಕಾರದವರು ಫ್ರೆಂಚ ಬ್ರಿಟಿಶ ಆಮಂತ್ರಣವನ್ನು ಸ್ವೀಕರಿಸಿ ತಾ. ೨೭ ಕ್ಕೆ ಪ್ಯಾರಿಸಿನಲ್ಲಿ ಈ ವಿಷಯ ಚರ್ಚೆಗಾಗಿ ಸೇರುವ ತ್ರಿರಾಷ್ಟ್ರ ವಿದೇಶ ಮಂತ್ರಿಗಳ ಸಭೆಯಲ್ಲಿ ಭಾಗವಹಿಸಲು ಒಪ್ಪಿದ್ದಾರೆ.

● ತಾ. ೨೭ ರ ಸಭೆಯಲ್ಲಿ ಬ್ರಿಟಿಶ, ಫ್ರೆಂಚ ಮತ್ತು ರಶಿಯನ್ ವಿದೇಶ ಮಂತ್ರಿಗಳು ಭಾಗವಹಿಸುವರು. ಯುದ್ಧದಿಂದ ಧ್ವಂಸವಾದ ಯುರೋಪಿಗೆ ಶ್ರೀಮಂತ ರಾಷ್ಟ್ರವಾದ ಅಮೇರಿಕೆಯ ಸಹಾಯ ಬೇಕೆಂದು ರಶಿಯನ್ ಸರಕಾರ ಒಪ್ಪಿದೆ. ಬ್ರಿಟಿಶ ಮತ್ತು ಫ್ರೆಂಚ ಸರಕಾರಗಳು ಈಗಾಗಲೆ, ಬೆವಿನ್ನರ ಮಾತಿನಲ್ಲಿ, ಈ ಯೋಜನೆಯನ್ನು "ಎರಡೂ ಕೈಗಳಿಂದ ಅವಚಿಕೊಂಡಿವೆ" ಯಲ್ಲದೆ ಬೆಲ್ಜಿಯಂ ಮತ್ತು ನದರ್ಲಂಡ್ಸ, ಲಕ್ಸೆಂಬರ್ಗ ರಾಷ್ಟ್ರಗಳೂ ಅದನ್ನು ಸ್ವಾಗತಿಸಿವೆ. ಪ್ಯಾರಿಸಿನಲ್ಲಿ ಸೇರುವ ಸಭೆ ಅಮೇರಿಕೆಯ ಸಹಾಯವನ್ನು ಯುರೋಪು ಯಾವ ಬಗೆಯಿಂದ ತೆಗೆದುಕೊಳ್ಳಬೇಕೆಂದು ವಿಚಾರಿಸುವದು. ರಶಿಯಾದ ಸಮ್ಮತಿಯಿಂದ ಮಾರ್ಶಲ್ ಯೋಜನೆಗೆ ಯಶಸ್ಸು ದೊರೆಯುವ ಸಂಭವ ಹೆಚ್ಚಾಗಿದೆ.

● ಆದರೆ ರಶಿಯನ್ನರೂ ಅವರ ಆಶ್ರಿತ ರಾಷ್ಟ್ರಗಳೂ ಅಮೇರಿಕೆಯ ಯೋಜನೆಯನ್ನು ಕರಾರಿಲ್ಲದೆ ಒಪ್ಪಿಕೊಳ್ಳಲಿಕ್ಕಿಲ್ಲ ಮುಖ್ಯವಾಗಿ ಈ ಸಹಾಯದೊಡನೆ ಅಮೇರಿಕೆ ರಾಜಕೀಯ ಕರಾರುಗಳನ್ನು ಹಾಕಿದರೆ, ಅರ್ಥಾತ್, ಸಹಾಯ ಬೇಡುವ ದೇಶಗಳ ಸರಕಾರ ಇಂಥ ಬಗೆಯದೇ ಆಗಿರಬೇಕು ಇತ್ಯಾದಿ ಕರಾರುಗಳನ್ನು ಹಾಕಿದರೆ, ಪೂರ್ವ ಯುರೋಪಿನ ರಾಷ್ಟ್ರಗಳು ಅದನ್ನು ತಿರಸ್ಕರಿಸುವದು ನಿಶ್ಚಿತಪ್ರಾಯವಾದುದು. ಅಲ್ಲದೆ ಪೋಲಂಡಿನ ಸರಕಾರ ಈಗಾಗಲೆ ವ್ಯಕ್ತಗೊಳಿಸಿದಂತೆ, ತಂತಮ್ಮ ರಾಷ್ಟ್ರಗಳಿಗೆ ಯಾವ ಯಾವ ಬಗೆಯ ಸಹಾಯ ಬೇಕೆಂಬದನ್ನು ಆಯಾ ಸರಕಾರಗಳೇ ನಿರ್ಣಯಿಸತಕ್ಕದ್ದೆಂದು ಅವು ಹಟ ತೊಡಬಹುದು. ಈ ಸಹಾಯವೆಲ್ಲ ನೇರವಾಗಿ ಅಮೇರಿಕೆಯಿಂದ ವ್ಯವಸ್ಥೆಗೊಳಿಸಲ್ಪಡದೆ ಯುಕ್ತರಾಷ್ಟ್ರ ಸಂಘದ ಮೂಲಕ ಹಂಚಲ್ಪಡಬೇಕೆಂದೂ ಅವುಗಳು ಸಾಧಿಸಬಹುದು.

● ಆದರೆ ಅಮೇರಿಕೆ ಸುಮ್ಮನೆ ಸಹಾಯವನ್ನು ಕೊಡುವಷ್ಟು ಔದಾರ್ಯವನ್ನು ತೋರಿಸಲಿಕ್ಕಿಲ್ಲ. ಅದು ಒಂದಲ್ಲ ಒಂದು ಬಗೆಯ 'ಪ್ರಜಾತಂತ್ರ' ಮತ್ತು ವ್ಯಕ್ತಿ ಸ್ವಾತಂತ್ರ್ಯ ಪದ್ಧತಿಯನ್ನು ಸಹಾಯ ಪಡೆಯುವ ರಾಷ್ಟ್ರಗಳ ಮೇಲೆ ಹೊರಿಸಲೆತ್ನಿಸಬಹುದು. ಸಾಲದ್ದಕ್ಕೆ ಸಹಾಯ ಪಡೆಯುವವರಿಂದ ಅಮೇರಿಕೆಗೆ ಆರ್ಥಿಕ ಕ್ಷೇತ್ರದಲ್ಲಿ ಕೆಲ ಸವಲತ್ತುಗಳನ್ನೂ ಬೇಡಬಹುದು. ತುರ್ಕಿಯಲ್ಲಿ ಅಮೇರಿಕನ್ ತಜ್ಞರು ಎಣ್ಣೆ ಗಣಿಗಳ ಶೋಧ ನಡೆಸಿರುವದು ಇದಕ್ಕೊಂದು ಉದಾಹರಣೆ ಆರ್ಥಿಕ ದೌರ್ಬಲ್ಯದ ಪೀಡೆಯ ಫಲವಾಗಿ ಕಮ್ಯೂನಿಝಂಗೆ "ಬಲಿಬೀಳುತ್ತಿರುವ" ಯುರೋಪಿಯನ್ ರಾಜ್ಯಗಳನ್ನು "ಬಲಕ್ಕೆ ತಿರುಗಿಸುವದೇ" ಅಂದರೆ ಬಂಡವಲಶಾಹಿಗೆ ಅನುಕೂಲರಾಗಿ ಮಾಡುವದೇ ಈ ಅಮೇರಿಕನ್ 'ಔದಾರ್ಯ'ದ ಅಪ್ರತ್ಯಕ್ಷ ಉದ್ದೇಶವೆಂಬಲ್ಲಿ ಸಂದೇಹವಿಲ್ಲ.

● ಆದರೆ ರಶಿಯನ್ನರೂ ಅವರ ಗೆಳೆಯರೂ ಈ ಯೋಜನೆಯನ್ನು ತಮ್ಮದೇ ಅನುಕೂಲಕ್ಕೆ ವಿನಿಯೋಗಿಸಿಕೊಳ್ಳಲು ಹೊಂಚು ಹಾಕುತ್ತಿದ್ದಾರೆ. ಯಾವದೇ ನಿಜವಾದ ಸವಲತ್ತು ಕೊಡದೆ ಸಹಾಯವನ್ನು ಪಡೆದು ಸಮೃದ್ಧಿ ಹೊಂದಲು ಅವರು ಹವಣಿಸುತ್ತಿರಬೇಕು.

● ಅಮೇರಿಕೆಯ ಸ್ಥಿತಿ ಇದರಲ್ಲಿ ಪೂರ್ಣ ಬಲವಾಗಿಲ್ಲ. ಯುದ್ಧ ಕಾಲದಲ್ಲಿ ಅದರ ಕಾರಖಾನೆಗಳ ಉತ್ಪಾದನ ಶಕ್ತಿ ಅಗಾಧವಾಗಿ ಬೆಳೆಯಿತು. ಅದರೆ ಜಗತ್ತಿನ ವ್ಯಾಪಾರ ಕ್ಷೇತ್ರ ಸೀಮಿತವಾಗಿದೆ. ಈಗಾಗಲೆ ಅದು ಆಯಾತಕ್ಕಿಂತ ಎಷ್ಟೋ ಕೋಟಿ ಡಾಲರು ಬೆಲೆಬಾಳುವ ವಸ್ತುಗಳನ್ನು ಹೆಚ್ಚಾಗಿ ನಿರ್ಯಾತಮಾಡಿದೆ. ಇದರಿಂದ ಜಗತ್ತು ಅಮೇರಿಕೆಯಿಂದ ಕೊಂಡದ್ದರ ಪ್ರತಿಫಲ ಮುಟ್ಟಿಸಲಾರದೆ ಹೋಗಿರುವದರಿಂದ ಅಮೇರಿಕೆಯ ಸರಕುಗಳನ್ನು ಕೊಳ್ಳುವವರಿಲ್ಲದೆ ಮುಗ್ಗಟ್ಟು ತಲೆದೋರಬಹುದು. ಅದುದರಿಂದ ಅದು ನಿರುದ್ಯೋಗ ಮೊದಲಾದುದನ್ನು ತಡೆಯಲು ಯುದ್ಧ ಸನ್ನಾಹ ಮಾಡಬೇಕು ಇಲ್ಲವೆ ಈ ಬಗೆಯ 'ಔದಾರ್ಯ' ತೋರಬೇಕು.

● ಹೀಗೆ ಇದರಲ್ಲಿ ಪರಸ್ಪರ ವಿರುದ್ಧ ಧ್ಯೇಯಗಳ ತಾಕಲಾಟವಿರುವದರಿಂದ ಅದರ ಯಶಸ್ಸು ಅಷ್ಟು ಮಟ್ಟಿಗೆ ಜಟಿಲವಾಗಿದೆ. ರಶಿಯನ್ ಪ್ರಭಾವಕ್ಕೆ ಬಿದ್ದ ರಾಷ್ಟ್ರಗಳಿಗೆ ಯಾವದೇ ನೆವಕ್ಕಾಗಿ ಸಹಾಯ ನಿರಾಕರಿಸಲ್ಪಟ್ಟರೆ ಇಡೀ ಯೋಜನೆ ಯುರೋಪದ ಇಬ್ಭಾಗದಲ್ಲಿ ಪರಿಣಮಿಸಿ ಯುದ್ಧ ಸನ್ನಾಹದಲ್ಲಿ ಕೊನೆಗೊಳ್ಳಬಹುದು.

ಬ್ರಿಟಿಶ ಎಚ್ಚರಿಕೆ

ಹೋರಾಟದ ಸಂಭಾವ್ಯತೆ ಪ್ರಮುಖ ಪಾಶ್ಚಿಮಾತ್ಯ ರಾಷ್ಟ್ರಗಳ ವಿಚಾರಧಾರೆಯಿಂದ ಹೊರಗಿಲ್ಲವೆಂಬದು ಕಳೆದವಾರ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಜರಗಿದ ವಿದೇಶ ಧೋರಣ ಚರ್ಚೆಯಲ್ಲಿ ವಿದೇಶ ಮಂತ್ರಿ ಅರ್ನೆಸ್ಟ್ ಬೆವಿನ್ನರ ಉಗ್ರ ವಾಕ್ಯಗಳಿಂದ ವ್ಯಕ್ತವಾಗುತ್ತದೆ. ಅಂತರ್ರಾಷ್ಟ್ರೀಯ ಮಾತುಕತೆಗಳೆಲ್ಲ ಕಡೆದುಬೀಳಲು ರಶಿಯಾವೇ ಕಾರಣವೆಂದು ಅವರು ಒತ್ತಿ ಹೇಳಿದ್ದಲ್ಲದೆ, ಪ್ರತಿಯೊಂದು ಮಾತನ್ನೂ ಸಿದ್ಧಾಂತದ ಹಿನ್ನೆಲೆಯಲ್ಲಿಟ್ಟು ರಶಿಯನ್ ಪ್ರತಿನಿಧಿಗಳು ವಿಚಾರ ಮಾಡುವರೆಂದರು ಅರ್ಥಾತ್ ಪ್ರತಿಯೊಂದು ಮಾತನ್ನೂ ಕಮ್ಯೂನಿಸ್ಟ ಸಿದ್ಧಾಂತದ ಪ್ರಸಾರಕ್ಕಾಗಿ ಅವರು ವಿನಿಯೋಗಿಸುತ್ತಾರೆಂದು ಅವರ ಆರೋಪ. ಬೆವಿನ್ನರು ಅದೇ ಧಾಟಿಯಲ್ಲಿ ಮುಂದುವರಿದು, "ಸಿದ್ಧಾಂತಗಳ ತಾಕಲಾಟವಾದರೆ ನಮಗೆ ಬಹಳ ದುಃಖವಾಗುವದು. ಆದರೆ ಅದು ಬಂದೇ ಬಂದರೆ ನಾವದಕ್ಕೆ ಸಿದ್ಧರಾಗಿಯೆ ಇದ್ದೇವೆ" ಎಂದು ಎಚ್ಚರಿಸಿದರು. ಮಾರ್ಗೇಟ ಕೂಲಿಕಾರ ಸಮ್ಮೇಲನದಲ್ಲಿ ತಮಗೆ ದೊರೆತ ಪ್ರಚಂಡ ಬೆಂಬಲದಿಂದ ಬೆವಿನ್ನರ ದಿಟ್ಟತನ ಬೆಳೆದಿದೆ, ಅವರ ವಿರೋಧಿಗಳ ಧೈರ್ಯ ಕುಗ್ಗಿದೆ. ನಿಜವಾಗಿ ಕೆಲ ತಿಂಗಳ ಹಿಂದೆ ಬೆವಿನ್ನರ ವಿದೇಶ ಧೋರಣೆಯ ವಿರುದ್ಧ ಪಾರ್ಲಮೆಂಟಿನಲ್ಲಿ "ಬಂಡಾಯ"ದ ಮುಂದಾಳ್ತನವ ಹಿಡಿದ ಕ್ರಾಸ್ಮನ್ನರು ಈಗ ರಶಿಯಾದ ಒರಟುತನವನ್ನು ಖಂಡಿಸಿ ಬೆವಿನ್ನರ ಧೋರಣೆಯೆ ಸರಿಯೆಂದು ಹೇಳತೊಡಗಿದ್ದಾರೆ. ಮುಖ್ಯಮಂತ್ರಿ ಅಟ್ಲಿಯವರೂ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ರಾಜಕೀಯ ಸ್ವಾತಂತ್ರ್ಯವಿಲ್ಲದುದನ್ನು ಖಂಡಿಸಿ ಅಲ್ಲಿಯ "ಪ್ರಜಾತಂತ್ರ" ಬರಿ ಸುಳ್ಳೆಂದು ನುಡಿದಿದ್ದಾರೆ. ಸ್ವಾತಂತ್ರ್ಯವೆಂಬುದು ಎಲ್ಲ ಜನರಿಗೂ ಇರಬೇಕು, ಅವರು ಬಂಡವಳಗಾರರಿರಲಿ ಕೂಲಿಕಾರರಿರಲಿ, ಎಂದರವರು.

ಪಾಲಿಸ್ತಾನ ಸತ್ಯಶೋಧನೆ

ಜೆರುಸಲೇಮಿನಲ್ಲಿ ಯುಕ್ತರಾಷ್ಟ್ರ ಸಂಘದ ಪರವಾಗಿ "ಸತ್ಯಶೋಧನೆ"ಯನ್ನು ಪ್ರಾರಂಭಿಸಿದ ೧೧ ರಾಷ್ಟ್ರಗಳ ಸಮಿತಿಯನ್ನು ಕಳೆದ ವಾರ ಆ ನಗರದ ೧,೫೦,೦೦೦ ಅರಬರು ನಿಷೇಧಾತ್ಮಕ ಸಂಪು, ಹೊರ ಪಯಣ ಮೊದಲಾದವುಗಳಿಂದ ಸ್ವಾಗತಿಸಿದರು. ದೇಶಾದ್ಯಂತವೂ ಈ "ಸತ್ಯಶೋಧನೆ"ಯ ವಿರುದ್ಧ ಅರಬರು ಸಂಪು ಹೂಡಿದರು. ಸೀರಿಯಾ, ಲೇಬನಾನ, ಟ್ರಾನ್ಸ ಜಾರ್ಡನ್ ಮೊದಲಾದ ಅರಬ ರಾಷ್ಟ್ರಗಳಲ್ಲಿ ಸಹಾನುಭೂತಿಪರ ಸಂಪು ನಡೆಯಿತು. ಪಾಲಿಸ್ತಾನದ ಅರಬ ವರಿಷ್ಠ ಸಮಿತಿಯ ನಿರ್ಣಯದಂತೆ ಅರಬರು ಈ ಸಮಿತಿಯನ್ನು ಪೂರ್ತಿ ಬಹಿಷ್ಕರಿಸಿದ್ದಾರೆ. ಅದರ ಮುಂದೆ ಯಾವಲ್ಲಿಯೂ ಯಾವ ಅರಬನೂ ಸಾಕ್ಷಿ ಹೇಳಲಿಲ್ಲ. ಆಯಾ ನಗರಗಳ ನಗರ ಸಭಾಧ್ಯಕ್ಷರು ಮಾತ್ರ ಕೇವಲ ಶಿಷ್ಟಾಚಾರಕ್ಕಾಗಿ ಈ ವಿದೇಶೀಯರನ್ನು ಕಂಡು ಮಾತಾಡಿಸಿ ಹೋದರು; ಅರಬ ಮುಂದಾಳು ಜಮಾಲ ಹುಸೇನಿ ಹೇಳಿದಂತೆ, ಸತ್ಯಶೋಧಕ ಸಮಿತಿಯ ಬಗ್ಗೆ ಅರಬರ ಭಾವನೆ ಹೀಗಿದೆ: "ನಿಮ್ಮನ್ನು ಅವಮಾನಗೊಳಿಸುವದು ನಮ್ಮ ಉದ್ದೇಶವಲ್ಲ. ಆದರೆ ನಮ್ಮ ರಾಜಕಾರಣದಲ್ಲಿ ದಯವಿಟ್ಟು ಕೈಹಾಕಬೇಡಿರಿ."

ಪಾಲಿಸ್ತಾನದ ಯಹೂದ್ಯರ ಪರವಾಗಿ ಮಾತ್ರ ಸಮಿತಿಯ ಮುಂದೆ ಮನವಿ ಒಪ್ಪಿಸಲ್ಪಟ್ಟಿದೆ. ಪಾಲಿಸ್ತಾನವನ್ನು ಯಹೂದ್ಯ ರಾಷ್ಟ್ರವಾಗಿ ಮಾಡಬೇಕು. ಯುರೋಪಿನ ಸಂತ್ರಸ್ತ ಯಹೂದ್ಯರಿಗೆ ಅಲ್ಲಿ ಅನಿರ್ಬಂಧ ಪ್ರವೇಶವಿರಬೇಕೆಂಬ ಅವರ ಹಳೆಯ ಬೇಡಿಕೆಗಳೇ ಅದರಲ್ಲಿ ಮುಂದೊಡ್ಡಲ್ಪಟ್ಟಿವೆ. ಅರಬರಂತೂ ಇಂಥ ಕ್ರಮ ಕೈಕೊಂಡಲ್ಲಿ ಇಲ್ಲವೆ ಪಾಲಿಸ್ತಾನವನ್ನು ಅರಬ—ಯಹೂದ್ಯವೆಂದು ವಿಂಗಡಿಸಿದಲ್ಲಿ ಯುದ್ಧ ನಿಶ್ಚಿತವೆಂದು ಸಾರಿದ್ದಾರೆ.

ಘೆಟೋ ಕಾಯದೆಯ ಫಲ

ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರ ವಿರುದ್ಧ ಮಾಡಲ್ಪಟ್ಟ ಘೆಟೋ ಅಥವಾ ಪ್ರತ್ಯೇಕ ನಿವಾಸದ ಕಾಯದೆಯ ಫಲವಾಗಿ ಕಳೆದವಾರ ಅನೇಕ ಹಿಂದೀಯರು ನ್ಯಾಯಸ್ಥಾನದ ಮುಂದೆ ತರಲ್ಪಟ್ಟರು. ಜೊಹಾನ್ಸಬರ್ಗಿನಲ್ಲಿ ಕಳೆದ ವರ್ಷ ಅಪ್ಪಣೆ ಚೀಟಿಯಿಲ್ಲದೆ ೪೪ ದಿನಗಳ ವರೆಗೆ ಯುರೋಪಿಯನ್ ಪ್ರದೇಶದಲ್ಲಿ ವಾಸಿಸಿದ ಬಗ್ಗೆ ಅಹಮದ ಫಕೀರ ಸೇಟ ಎಂಬ ಹಿಂದೀಯನನ್ನು ದೋಷಿಯೆಂದು ನ್ಯಾಯಸ್ಥಾನ ತೀರ್ಮಾನಿಸಿತು. ಆದರೆ ಶಿಕ್ಷೆಯನ್ನು ನಿರ್ದೇಶಿಸುವದನ್ನು ಮಾತ್ರ ಮುಂದೆ ಹಾಕಿತು. ಟ್ರಾನ್ಸವಾಲದಲ್ಲಿಯೂ ಇದೇ ಬಗೆಯಾಗಿ ಘೆಟೋ ಕಾಯದೆ ಮುರಿದುದಕ್ಕಾಗಿ ೬ ಹಿಂದೀ ಜನರನ್ನು ನ್ಯಾಯಸ್ಥಾನಕ್ಕೆಳೆಯಲಾಗಿದೆ.

● ದಕ್ಷಿಣ ಆಫ್ರಿಕೆಯಲ್ಲಿ ಬೇಗನೆ ಜರಗಲಿರುವ ಚುನಾವಣೆಯಲ್ಲಿ ವರ್ಣದ್ವೇಷದ ಪ್ರಶ್ನೆಯೇ ಮಹತ್ವದ ಸ್ಥಾನ ಪಡೆಯುವಂತೆ ತೋರುತ್ತದೆ. ಸ್ಮಟ್ಸರ ವಿರೋಧಿಯೂ ಅವರಿಗಿಂತಲೂ ತೀಕ್ಷ್ಣ ವರ್ಣದ್ವೇಷಪೋಷಕವೂ ಆದ ರಾಷ್ಟ್ರೀಯ ಪಕ್ಷ ಬಿಳಿಯರ ವರ್ಣದ್ವೇಷವನ್ನು ಜಾಗ್ರತಗೊಳಿಸಿ ಚುನಾವಣೆಗಳಲ್ಲಿ ಗೆಲ್ಲುವ ಹಂಚಿಕೆ ಹಾಕಿದೆ. ಹಿಂದೀಯರನ್ನೆಲ್ಲ ದಕ್ಷಿಣ ಆಫ್ರಿಕೆಯಿಂದ ಓಡಿಸಿಬಿಡಬೇಕೆಂಬವರಿವರು. ತಮ್ಮ ಧೋರಣೆಯನ್ನು ಸುಗಮ ಮಾಡಿಕೊಳ್ಳಲು ದಕ್ಷಿಣ ಆಫ್ರಿಕೆಯನ್ನು ಬ್ರಿಟಿಶ ಸಾಮ್ರಾಜ್ಯದಿಂದ ಒಡೆದುಬಿಡಬೇಕೆಂದು ಅವರು ಸಾಧಿಸುತ್ತಾರೆ. ಮುಖ್ಯ ಮಂತ್ರಿ ಜನರಲ್ ಸ್ಮಟ್ಸರು ವರ್ಣದ್ವೇಷವನ್ನು ಎಚ್ಚರಗೊಳಿಸುವದರಿಂದ ಅನಾಹುತ ಖಂಡಿತವೆಂದೆಚ್ಚರಿಸಿದ್ದಾರಲ್ಲದೆ ಬ್ರಿಟಿಶ ಸಾಮ್ರಾಜ್ಯದಿಂದ ದಕ್ಷಿಣ ಆಫ್ರಿಕಾ ಒಕ್ಕೂಟ ಹೊರಬಿದ್ದರೆ ಆ ಒಕ್ಕೂಟವೇ ಒಡೆದು ಹರಿಹಂಚಾಗುವದು ನಿಶ್ಚಯವೆಂದಿದ್ದಾರೆ.

ಬ್ರಹ್ಮದೇಶದ "ಸ್ವಾತಂತ್ರ್ಯ ಗೊತ್ತುವಳಿ"

ಬ್ರಹ್ಮದೇಶದ ಘಟನಾ ಸಮಿತಿಯ ಪ್ರಾಸ್ತಾವಿಕ ಅಧಿವೇಶನದಲ್ಲಿ ಕಳೆದ ವಾರ ಬ್ರಹ್ಮೀ ಕಾರ್ಯಕಾರಿ ಮಂಡಲದ ಉಪಾಧ್ಯಕ್ಷರೂ ಫ್ಯಾಸಿಸ್ಟ ವಿರೋಧಿ ಸಂಘದ ಅಧ್ಯಕ್ಷರೂ ಆದ ಜನರಲ್ ಅಂಗ ಸಾನರು ಬ್ರಹ್ಮದೇಶ ಸ್ವತಂತ್ರ ಪ್ರಜಾರಾಜ್ಯವಾಗಬೇಕೆಂಬ ಗೊತ್ತುವಳಿಯನ್ನು ತಂದರು. ಅದು ಸರ್ವ ಪಕ್ಷಗಳ ಸಮ್ಮತಿಯಿಂದ ಅಂಗೀಕರಿಸಲ್ಪಟ್ಟಿತು. ಬ್ರಹ್ಮದೇಶಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ಬ್ರಿಟಿಶರಿನ್ನೂ ವಾಗ್ದಾನ ಮಾಡಿಲ್ಲೆಂದು ಇಲ್ಲಿ ನೆನೆದುಕೊಳ್ಳಬಹುದು. ಈ ಪೂರ್ಣ ಸ್ವಾತಂತ್ರ್ಯವನ್ನು ಬ್ರಿಟನ್ನು ಶಾಂತಿಯಿಂದ ಕೊಡದೆ ಹೋದರೆ "ಇತರ ಉಪಾಯ"ಗಳನ್ನು ಅನುಸರಿಸಬೇಕಾಗುವದೆಂದು ಆ ಕಾರಣದಿಂದಲೇ ಅಂಗಸಾನರು ಎಚ್ಚರಿಸಿದರು. ಘಟನಾ ಸಮಿತಿಯ ನಿರ್ಣಯದಂತೆ ಪೂರ್ಣ ಸ್ವಾತಂತ್ರ್ಯದ ತಳಹದಿಯ ಮೇಲೆ ಅಧಿಕಾರವನ್ನು ವರ್ಗಾಯಿಸುವ ಕ್ರಮವನ್ನು ಬ್ರಿಟಿಶ ಸರಕಾರದೊಡನೆ ಚರ್ಚಿಸಲು ಅಂಗಸಾನರು ಈಗಾಗಲೇ ಸೌಹಾರ್ದ ಶಿಷ್ಟಾಯಿಯೊಂದನ್ನು ಇಂಗ್ಲಂಡಿಗೆ ಕಳಿಸಿದ್ದಾರೆ. ಬ್ರಹ್ಮೀ ಘಟನೆ ಈ ವರ್ಷದ ಕೊನೆಯೊಳಗೆ ಸಿದ್ಧವಾಗುವದೆಂದು ಆಶಿಸಲಾಗಿದೆ.

ಟ್ರೂಮನ್ನರ "ವೀಟೋ"

ಕಳೆದ ವಾರ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ಎರಡು ಸಾರೆ ತಮ್ಮ ನಿಷೇಧಾಧಿಕಾರವನ್ನು ಪ್ರಯೋಗಿಸಿ ಶಾಸನಸಭೆಗಳು ಅಂಗೀಕರಿಸಿದ ಎರಡು ಮಸೂದೆಗಳನ್ನು ರದ್ದುಗೊಳಿಸಿದರು. ಎರಡೂ ರಿಪಬ್ಲಿಕನ್ ಪಕ್ಷದ ಬಂಡವಲಗಾರರು ಸ್ವಹಿತಕ್ಕಾಗಿ ಮಾಡಿದ ಮಸೂದೆಗಳಾಗಿದ್ದವು.

● ಮೊದಲನೆಯದು ಆದಾಯ ತೆರಿಗೆಯನ್ನು ಕಡಿಮೆ ಮಾಡುವ ಮಸೂದೆ. ಅದು ಕಾಯದೆಯಾಗಿದ್ದರೆ ಅಮೇರಿಕನ್ ಸರಕಾರದ ಉತ್ಪನ್ನ ೪೦೦ ಕೋಟಿ ಡಾಲರ ಕಡಿಮೆಯಾಗುತ್ತಿತ್ತು. ಈ ಮಸೂದೆ ಸಂಕುಚಿತ ದೃಷ್ಟಿಯದೆಂದೂ ಈ ಸಮೃದ್ಧಿ ಕಾಲದಲ್ಲಿ ಸರಕಾರದ ಆಯವ್ಯಯ ಪತ್ರಿಕೆಯಲ್ಲಿ ಉಳಿತಾಯವಿರುವದು ಹಿತಕರವೆಂದೂ ಹೇಳಿ ಟ್ರೂಮನ್ನರು ಆ ಮಸೂದೆಯನ್ನು ಪ್ರತಿಬಂಧಿಸಿದರು. ಅಧ್ಯಕ್ಷರ ಪ್ರತಿಬಂಧವನ್ನುಲ್ಲಂಘಿಸಲು ರಿಪಬ್ಲಿಕನ್ನರು ಪ್ರಯತ್ನಿಸಿದರು. ಆದರೆ ಅದಕ್ಕೆ ಎರಡೂ ಸಭೆಗಳಲ್ಲಿ ಮೂರರಲ್ಲೆರಡಂಶ ಬಹುಮತ ಬೇಕಾಗುತ್ತದೆ. ಅದು ದೊರಕಲಿಲ್ಲವಾದುದರಿಂದ ಅಧ್ಯಕ್ಷರ ಪ್ರತಿಬಂಧಾಧಿಕಾರ ಗೆದ್ದಿತು.

● ಇನ್ನೊಂದು ಮಸೂದೆಯಲ್ಲಿ ಮಾತ್ರ ಟ್ರೂಮನ್ನರು ಸೋಲು ತಿಂದರು. ಕೂಲಿಕಾರರ ಸಂಪು ಮೊದಲಾದವುಗಳ ಮೇಲೆ ಅನೇಕ ನಿರ್ಬಂಧಗಳನ್ನು ಹೇರುವ ಮಸೂದೆಯನ್ನು ಶಾಸನ ಸಭೆಗಳು ಅಂಗೀಕರಿಸಿದ್ದವು. ಮುಖ್ಯವಾಗಿ "ರಾಷ್ಟ್ರಹಿತಘಾತಕ"ವಾದ ಸಾರ್ವತ್ರಿಕ ಸಂಪುಗಳನ್ನು ಕಾಯದೆ ವಿರುದ್ಧವೆಂದು ಮಾಡಿ ಕೂಲಿಕಾರ ಸಂಘಗಳ ಶಕ್ತಿಯನ್ನು ಮುರಿಯಲು ಈ ಮಸೂದೆಯನ್ನು ತರಲಾಗಿದೆ. ಇದರಿಂದ ಕೂಲಿಕಾರರ ಸ್ವಾತಂತ್ರ್ಯವನ್ನು ಕಸಿದುಕೊಂಡಂತಾಗುವದಲ್ಲದೆ ದೇಶದಲ್ಲಿ ಒಡಕುಂಟಾಗುವದೆಂದು ಹೇಳಿ ಅಧ್ಯಕ್ಷರು ಅದನ್ನು ಕಿತ್ತು ಹಾಕಿದರು. ಆದರೆ ಶಾಸನ ಸಭೆಗಳು ಮೂರರಲ್ಲೆರಡಂಶ ಬಹುಮತದಿಂದ ತಿರುಗಿ ಅದನ್ನು ಪಾಸುಮಾಡಿದ್ದರಿಂದ ಅಧ್ಯಕ್ಷರು ಇನ್ನು ಅದನ್ನು ಪ್ರತಿಬಂಧಿಸಲಾರರು. ಹೀಗಾಗಿ ಅಮೇರಿಕೆಯಲ್ಲಿ ಕೂಲಿಕಾರರ ಬೆಳೆಯುತ್ತಿರುವ ಶಕ್ತಿಯ ಮೇಲೆ ಬಂಡವಳಗಾರರು ಯಶಸ್ವಿಯಾಗಿ ಹೊಡೆತಕೊಟ್ಟರು.

ಚುಟುಕುಗಳು

ಹಿಂದುಸ್ತಾನ, ಬ್ರಹ್ಮದೇಶಗಳಲ್ಲಾಗುತ್ತಿರುವ ರಾಜಕೀಯ ಬದಲಾವಣೆಗಳನ್ನು ಅನುಲಕ್ಷಿಸಿ ಬ್ರಿಟಿಶ ಸರಕಾರ ಸಿಂಹಳ ದ್ವೀಪಕ್ಕೆ ಸಾಮಂತ ಸ್ವರಾಜ್ಯ ಕೊಡುವದೆಂದು ಪ್ರಸಿದ್ಧಿಸಲ್ಪಟ್ಟಿದೆ. ಈಚೆಗೆ ಅದಕ್ಕೆ ಕೊಟ್ಟ ಹೊಸ ರಾಜ್ಯಘಟನೆಯನ್ವಯ ಚುನಾವಣೆಗಳಾದ ಮೇಲೆ ಉಭಯ ಸರಕಾರಗಳು ಆ ಬಗ್ಗೆ ಮಾತುಕತೆ ಪ್ರಾರಂಭಿಸುವವು.

x x x

ಇಂಗ್ಲಂಡಿಗೂ ಇಜಿಪ್ತಿಗೂ ಇರುವ ಭಿನ್ನಾಭಿಪ್ರಾಯದ ಮೇಲೆ ಇಜಿಪ್ತ ಯುಕ್ತರಾಷ್ಟ್ರ ಸಂಘಕ್ಕೆ ಅರ್ಜಿ ಮಾಡಿಕೊಳ್ಳಲು ಕೊನೆಗೂ ನಿರ್ಧರಿಸಿದೆ. (೧) ಬ್ರಿಟಿಶರು ನೀಲ ನದೀ ತೀರದಿಂದ ಸೈನ್ಯ ಹಿಂತೆಗೆದುಕೊಳ್ಳಬೇಕು, (೨) ಸುದಾನದಿಂದ ಸೈನ್ಯ ಹಿಂತೆಗೆದುಕೊಳ್ಳಬೇಕು ಮತ್ತು (೩) ನೀಲ ನದಿಯು ಐಕ್ಯ ಉಳಿಯಬೇಕು ಅರ್ಥಾತ್ ಸುದಾನಕ್ಕೆ ಸ್ವಾತಂತ್ರ್ಯ ಕೊಡಬಾರದು ಎಂಬದು ಇಜಿಪ್ತಿನ ಬೇಡಿಕೆಯಾಗಿದೆ.

x x x

ಚೀನದಲ್ಲಿ ಕಮ್ಯೂನಿಸ್ಟ ಪಡೆಗಳ ಕೈ ಮೇಲಾಗುತ್ತಿದ್ದು ಸೆಪ್ಟೆಂಬರ ಅಕ್ಟೋಬರದೊಳಗೆ ಕಮ್ಯೂನಿಸ್ಟರನ್ನು ಪೂರ್ಣ ತೀರಿಸಿಬಿಡುವೆವೆಂಬ ಚಿಯಾಂಗರ ಆಸೆ ಪೂರೈಸುವ ಲಕ್ಷಣವಿಲ್ಲ. ಈಗ, ಕಮ್ಯೂನಿಸ್ಟರಿಗೆ ರಶಿಯಾದ ಸಹಾಯ ದೊರೆಯುತ್ತಿದೆಯೆಂದೂ ಅದರಿಂದ ಅಮೇರಿಕೆ ತಮಗೆ ಸಹಾಯ ಮಾಡಬೇಕೆಂದೂ ಚೀನೀ ಸರಕಾರದ ಮುಂದಾಳುಗಳು ಹೇಳತೊಡಗಿದ್ದಾರೆ.

x x x

ಜಗತ್ತಿನಲ್ಲೆಲ್ಲ ಗುಲಾಮ ಪದ್ಧತಿಯನ್ನು ರದ್ದುಗೊಳಿಸಬೇಕೆಂದೂ ಇದಕ್ಕೊಪ್ಪದ ದೇಶಗಳಿಗೆ ಯುಕ್ತರಾಷ್ಟ್ರ ಸಂಘದಲ್ಲಿ ಪ್ರವೇಶ ಕೊಡಬಾರದೆಂದೂ ಯುಕ್ತರಾಷ್ಟ್ರ ಮಾನವ ಹಕ್ಕುಗಳ ಸಮಿತಿ ಸರ್ವಾನುಮತದಿಂದ ಸೂಚಿಸಿದೆ. ಜಗತ್ತಿನಲ್ಲಿ ಒಟ್ಟು ೮೦ ಲಕ್ಷ ಜನರು ಒಂದಲ್ಲ ಒಂದು ಬಗೆಯ ಗುಲಾಮರಾಗಿ ಬಾಳುತ್ತಿದ್ದು ಅವರಲ್ಲಿ ಚೀನದಲ್ಲಿ ೨೦ ಲಕ್ಷ ಬಾಲಗುಲಾಮರು, ಅಬಿಸೀನಿಯಾದಲ್ಲಿನ ೨೦ ಲಕ್ಷ ಗುಲಾಮರು, ಅರೇಬಿಯಾದಲ್ಲಿ ೭ ಲಕ್ಷ, ಲೈಬೇರಿಯಾದಲ್ಲಿ ೩ ಲಕ್ಷ ಇರುವರು. ದಕ್ಷಿಣ ಅಮೇರಿಕೆಯಲ್ಲಿನ ೪೦ ಲಕ್ಷ ಆದಿವಾಸಿಗಳೂ ಇದೇ ವರ್ಗಕ್ಕೆ ಸೇರುತ್ತಾರೆ.

೧೯೫೦ ರಲ್ಲಿ ನಾಝೀ ವಿಜಯವೆ?

ಸ್ವೀಡನ್ನಿನ ಮೂಲಕ ನಾಝಿಗಳ ಪಲಾಯನ, ಜರ್ಮನಿಯ ಕಾರಖಾನೆಗಳಲ್ಲಿ ಗುಪ್ತವಾಗಿ ಆಯುಧ ತಯಾರಿಸಿ ನಾಝೀ ಕೆಲಸಗಾರರಲ್ಲಿ ಹಂಚಲಾಗುತ್ತಿದೆ. ದಕ್ಷಿಣ ಅಮೇರಿಕೆಯನ್ನು ನಾಝೀ ಕಾರಸ್ಥಾನದ ಕೇಂದ್ರವಾಗಿ ಮಾಡಲಾಗುವುದು.

ಜರ್ಮನರ ವಿಜ್ಞಾನ ಬಲ

ಕಳೆದ ಮಹಾಯುದ್ಧದ ಪೂರ್ವಾರ್ಧದಲ್ಲಿ ಹಿಟ್ಲರನು ಮೇಲಿಂದ ಮೇಲೆ ಹೊಸ ಹೊಸ ಯಂತ್ರೋಪಕರಣಗಳನ್ನೂ ಶಸ್ತ್ರಾಸ್ತ್ರಗಳನ್ನೂ ಉಪಯೋಗಿಸಿ ಹಗೆಗಳಿಗೆ ಸೋಲಿನ ಮೇಲೆ ಸೋಲನ್ನೂ ಉಣಿಸುತ್ತ ಅತ್ಯಂತ ವಿಚಿತ್ರ ವಿಜಯವನ್ನು ಪಡೆಯುತ್ತ ಸಾಗಿದ್ದು ಇಂದಿಗೂ ಅಚ್ಚರಿಯ ಕಥೆಯಾಗಿದೆ. ಯುದ್ಧದಲ್ಲಿ ಹಿಟ್ಲರ ಮತ್ತು ಅವನ ಹಲವು ಮುಖ್ಯಾಧಿಕಾರಿಗಳು ಮಡಿದರೆಂದೂ ಉಳಿದ ನಾಝೀ ಪ್ರಮುಖರನ್ನು ನ್ಯೂರೆಂಬರ್ಗದ ವಿಚಾರಣೆಯಾದ ಬಳಿಕ ಗಲ್ಲಿಗೇರಿಸಲಾಯಿತೆಂದೂ ಕೇಳಿದ್ದೇವೆ. ಆದರೆ ಜರ್ಮನಿಯ ಅಣುಶಕ್ತಿ ಪ್ರಯೋಗ ಶಾಲೆಯ ಮತ್ತು ಇನ್ನಿತರ ಗುಪ್ತಾಸ್ತ್ರ ನಿರ್ಮಾಣದ ಕಾರ್ಯಾಲಯದ ವಿಜ್ಞಾನಿಗಳು ದಪ್ತರ ಸಹಿತ ತಪ್ಪಿಸಿಕೊಂಡು ತಿರುಗುತ್ತಿದ್ದಾರೆಂಬ ಸುದ್ದಿಯೂ ಉಂಟು. ಇದ್ದಲಿಯಿಂದ ಬೆಣ್ಣೆ ತೆಗೆಯಲು ಸಮರ್ಥರಾದ ಜರ್ಮನ ವಿಜ್ಞಾನಿಗಳು ಏನನ್ನೂ ಮಾಡಿಯಾರೆಂಬುದನ್ನು ಜಗತ್ತೇ ಬಲ್ಲುದು. ಬಟಾಟೆಯ ಸಿಪ್ಪೆಯಿಂದ ಪೆಟ್ರೋಲನ್ನು ತೆಗೆದ ಅವರು ಅಭಿನವ ವಿಶ್ವಾಮಿತ್ರರೇ ಎನ್ನಲು ಯಾವ ಅಡ್ಡಿಯೂ ಇಲ್ಲ.

ನಾಝಿಗಳ ಕಾರಸ್ಥಾನ

ಜಾಗತಿಕ ಪೋಲೀಸು ದಳದವರಿಗೂ ಇನ್ನಿತರ ಮಿತ್ರಶಕ್ತಿಯವರಿಗೂ ಜರ್ಮನ ನಾಝೀ ದಳಗಳು ಈಗಲೂ ಅಲ್ಲಲ್ಲಿ ಗುಪ್ತ ಕಾರಸ್ಥಾನಗಳಲ್ಲಿ ವಿನಾಶಕರ ರಂಕೆಯುದ್ಯೋಪಕರಣ ಮತ್ತು ಭಯಂಕರ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲಿ ಮಗ್ನವಾಗಿವೆಯೆಂದು ತಿಳಿದುಬಂದಿದೆ. ಮೊನ್ನೆ ಮೊನ್ನೆ ಸ್ವೀಡನ್ನಿನ ಒಬ್ಬ ಜರ್ಮನ ವ್ಯಾಪಾರಿಯ ಮನೆಯಲ್ಲಿ ಆಕಸ್ಮಾತ್ತಾಗಿ ಹಿಟ್ಲರನ ನಂತರದ ಅಧಿಕಾರಿಯಾದ ಮಾರ್ಟಿನ್ ಬೋರ್ಮನ್ನನನ್ನು ಭೆಟ್ಟಿಯಾಗಿ ಜರ್ಮನ ನಾಝಿಗಳ ಗುಪ್ತ ಕಾರಭಾರದ ಹಲವು ವಿಷಯಗಳನ್ನು ಸ್ವೀನ ಪೀಟರ್‌ಸನ್ನೆಂಬ ಪತ್ರಿಕಾ ಪ್ರತಿನಿಧಿಗಳು ಬಯಲಿಗೆಳೆದಿದ್ದಾರೆ.

ಬೋರ್ಮನ್ನನ ಯೋಜನೆ

ಬೋರ್ಮನ್ನನ ಯೋಜನೆಯ ಪ್ರಕಾರ ೧೯೫೦ ರಲ್ಲಿ ನಾಝೀದಲವು ಸರ್ವಸನ್ನಾಹದಿಂದ ಪ್ರಕಟವಾಗಿ ಸದ್ಯದ ಮಹಾಯುದ್ಧದಲ್ಲಿ ಕಳೆದುಕೊಂಡ ಸರ್ವಸ್ವವನ್ನೂ ಪುನಃ ಪಡೆಯಬಹುದು. ಅದಕ್ಕೆ ಬೇಕಾದ ಧನ, ಶಸ್ತ್ರಾಸ್ತ್ರಗಳು, ಸೈನ್ಯ ಮೊದಲಾದವನ್ನು ಗುಪ್ತ ರೀತಿಯಿಂದ ತಯಾರಿಸಲಾಗುವುದು. ಹೊಸ ಹೊಸದಾದ ವಿನಾಶಕ ಯುದ್ಧಸಾಮಗ್ರಿಗಳನ್ನು ಸಿದ್ಧಗೊಳಿಸಲಾಗುವುದು. ಅವುಗಳಲ್ಲಿ ರೋಗಾಣುಗಳನ್ನು ಪ್ರಯೋಗಿಸುವ ಯುದ್ಧಕ್ಕೆ ಬೇಕಾದ ಒಂದು ಅದ್ಭುತ ಶಸ್ತ್ರವು ಪ್ರಧಾನವಾದುದೆಂದು ಬ್ರಿಟಿಶ ಗುಪ್ತ ಸುದ್ದಿಗಾರರೊಬ್ಬರು ತಿಳಿಸುತ್ತಾರೆ. ಮತ್ತು ಸ್ವೀಡನ್ನಿನ ಮೂಲಕ ನಾಝೀ ಕಾರ್ಯಕರ್ತರಲ್ಲಿ ಪ್ರಮುಖರನ್ನು ದಕ್ಷಿಣ ಅಮೇರಿಕೆಗೆ ಸಾಗಿಸಿ ಅಲ್ಲಿ ತಮ್ಮ ಪ್ರಯೋಗಶಾಲೆ, ಕಾರಖಾನೆ ಮೊದಲಾದವನ್ನು ಹೂಡುವರೆಂದು ಗೊತ್ತಾಗಿದೆ.

ಸದ್ಯದ ಚಟುವಟಿಕೆ

ತಟಸ್ಥ ರಾಷ್ಟ್ರಗಳಲ್ಲಿ ಈ ಮೊದಲೇ ನಾಝಿಗಳು ಯಥೇಚ್ಛ ದ್ರವ್ಯವನ್ನು ನಿಧಿಯಾಗಿ ಇಟ್ಟಿದ್ದಾರೆ. ಅವುಗಳಿಂದಲೂ ಧರ್ಮಸಹಾಯದಿಂದ ಬಂದ ಹಣದಿಂದಲೂ ಸ್ವೀಡಿಶ್, ಫ್ರೆಂಚ್ ನಾಝಿಗಳ ದಾನದಿಂದ ಸಿಕ್ಕ ಹಣದಿಂದಲೂ ಈಗಾಗಲೆ ಸ್ವೀಡಿಶ ಸರಕಾರೀ ಅಧಿಕಾರಿಗಳಿಗೆ ಲಂಚ ತಿನ್ನಿಸಿ ಅನೇಕ ನಾಝೀನಾಯಕರನ್ನು ಸ್ವೀಡನ್ನಿನ ಸ್ಥಾನಬದ್ಧತೆಯಿಂದ ಮುಕ್ತಮಾಡಲಾಗಿದೆ. ಅಲ್ಲದೆ ಬ್ರಿಟಿಶರಿಂದ ಮತ್ತು ರಶಿಯನ್ನರಿಂದ ಆಕ್ರಮಿತವಾದ ಜರ್ಮನಿಯ ವಿಭಾಗಗಳಲ್ಲಿ ಕೆಲಸಮಾಡಲು ಬೇರೆ ಬೇರೆ ಗುಪ್ತದಲಗಳನ್ನು ಸ್ಥಾಪಿಸಲಾಗಿದೆ. ನಾನಾ ಉದ್ಯೋಗಗಳಲ್ಲಿ ನಿರತರಾದ ಗುಪ್ತನಾಝಿಗಳು ಯುದ್ಧಪರಿಹಾರಕ್ಕಾಗಿ ಪರದೇಶಗಳಿಗೆ ಕಳುಹಲು ತಯಾರಿಸುವ ಸಾಮಾನುಗಳನ್ನು ಅಷ್ಟು ಉತ್ತಮ ರೀತಿಯಿಂದ ತಯಾರಿಸುವುದಿಲ್ಲ. ಹಿಮಯಿಪರಾಯುಟಿನ ತಯಾರಿಯ ಕಾರಖಾನೆ ಮೊದಲಾದವುಗಳಲ್ಲಿ ಗುಪ್ತವಾಗಿ ಶಸ್ತ್ರಗಳನ್ನು ತಯಾರಿಸಿ ಜರ್ಮನ ನಾಝಿಗಳಿಗೆ ಹಂಚಲಾಗುತ್ತದೆ. ಜರ್ಮನ ಕಾರ್ಮಿಕರ ಹತ್ತಿರ ಮತ್ತು ಗಿರಣಿಯ ಕೆಲಸಗಾರರ ಹತ್ತಿರ ಹೀಗೆ ಹಂಚಲಾದ ಆಯುಧಗಳಿವೆಯೆಂಬುದು ಮಿತ್ರಪಕ್ಷದವರ ಪೋಲೀಸರ ಕಣ್ಣಿಗೆ ಬಿದ್ದಿದೆ. ವಿಮಾನಗಾರರ ದೋಣಿಗಳ ಮೂಲಕ ಸ್ವೀಡನ್ನಿನ ಲಿಂಹಮ್ ಬಂದರದಿಂದ ಡೆನ್ಮಾರ್ಕಿನ ದ್ರಾಗೋರುಬಂದರಿಗೆ ನಾಝಿಗಳನ್ನು ಸಾಗಿಸಲಾಗುತ್ತಿದೆ. ಅಲ್ಲಿಂದ ದಕ್ಷಿಣ ಅಮೇರಿಕೆ ಮೊದಲಾದ ತಮಗನುಕೂಲ ವಾತಾವರಣವಿರುವ ಅನ್ಯದೇಶಗಳಿಗೆ ಅವರು ಪ್ರಯಾಣ ಬೆಳೆಸುತ್ತಾರೆ. ಸುಳ್ಳು ಸಹಿ ಹಾಕಿದ ಪ್ರಯಾಣದ ಪರವಾನಿಗೆ ಮುಂತಾದವುಗಳ ಸಹಾಯದಿಂದ ಅವರು ಉದ್ದಿಷ್ಟ ಸ್ಥಳಕ್ಕೆ ಬೇಕಾದಾಗ ಹೋಗಿಬರುತ್ತಿದ್ದಾರೆ.

ಮೇಲೆ ಹೇಳಿದ ನಾನಾ ವಿಧವಾದ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದು ಸರ್ವಸಿದ್ಧತೆಯಾದ ಬಳಿಕ ೧೯೫೦ರಲ್ಲಿ ಮಾರ್ಟಿನ್ ಬೋರ್ಮನ್ನನಿಗಾಗಿ ಮನುಷ್ಯರ ಬೇಟೆಯನ್ನು ಪ್ರಾರಂಭಿಸಲಿರುವರೆಂದು ಸುದ್ದಿ ಬಂದಿದೆ. ನಾಝಿಗಳು ತಮ್ಮ ಶತ್ರುಗಳನ್ನು ಸಂಪೂರ್ಣ ಮೂಲೋತ್ಪಾಟನ ಮಾಡಲು ಕಂಕಣಬದ್ಧರಾಗಿ ಕಾರ್ಯನಡೆಸುವುದಕ್ಕೆ ಹಲವಾರು ಪುರಾವೆಗಳು ದೊರೆತಿರುವುದು ಆಶ್ಚರ್ಯಕರವಾಗಿದೆ; ಮತ್ತು ಮುಂದೆ ಬರಲಿರುವ ಅಪಾಯವನ್ನು ಸೂಚಿಸುವ ಎಚ್ಚರಿಕೆಯ ಕರೆಯೂ ಆಗಿದೆ.

ಹೈದರಾಬಾದ ಭಾರತದ ಸಂಯುಕ್ತ ಸರಕಾರ ಸೇರಬೇಕು

ಹೈದರಾಬಾದ ಕಾಂಗ್ರೆಸ್ಸಿನ ನಿರ್ಣಯ

“ಹೈದರಾಬಾದ ಸಂಸ್ಥಾನವು ಘಟನಾಸಮಿತಿಯನ್ನು ಸೇರುವುದಿಲ್ಲ ಮತ್ತು ಬ್ರಿಟಿಶರ ವರಿಷ್ಠಾಧಿಕಾರ ಹೋದಬಳಿಕ ಅದು ಸ್ವತಂತ್ರ ಸಾರ್ವಭೌಮ ಸಂಸ್ಥಾನವಾಗುವ ಹಕ್ಕನ್ನು ಹೊಂದುತ್ತದೆ—ಎಂಬ ನಿಜಾಮರ ಫರ್ಮಾನನ್ನು ನೋಡಿ ಸಂಸ್ಥಾನದ ಕಾಂಗ್ರೆಸಿಗೆ ಬಹಳ ಖೇದವಾಯಿತು. ಈ ಮಹಾಘೋಷಣೆ ಸಂಸ್ಥಾನ ಪ್ರಜೆಗಳನ್ನು ಗಮನಿಸದೆ ಮಾಡಲಾಗಿದೆ ಮತ್ತು ಅವರ ಇಚ್ಛೆಯನ್ನು ಅದು ಪ್ರತಿಬಿಂಬಿಸುವುದಿಲ್ಲ. ಇದು ಸಂಸ್ಥಾನದ ಪ್ರಜೆಗಳ ಪರವಾಗಿ ಸಂಸ್ಥಾನ ಕಾಂಗ್ರೆಸ್ಸು ಪದೇ ಪದೇ ಪ್ರಕಟಪಡಿಸಿದ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಜನರ ಸಮ್ಮತಿ ಪಡೆಯದೆ ಯಾವ ನಿರ್ಣಯವನ್ನೂ ಸ್ವೀಕರಿಸಲಸಾಧ್ಯ” ಎಂದು ಜೂನ ೧೬,೧೭,೧೮ ರಲ್ಲಿ ಜರುಗಿದ ಹೈದರಾಬಾದ ಕಾಂಗ್ರೆಸ್ಸಿನ ಸಭೆಯು ಗೊತ್ತುವಳಿಯನ್ನು ಪಾಸುಮಾಡಿತು.

ಗೊತ್ತುವಳಿ ಹೀಗೆ ಮುಂಬರಿಯುತ್ತದೆ: “ಆಂಧ್ರರು, ಮಹಾರಾಷ್ಟ್ರೀಯರು ಮತ್ತು ಕನ್ನಡಿಗರು—ಹಿಂದುಗಳಿರಲಿ ಮುಸಲ್ಮಾನರಿರಲಿ—ಈಯೆಲ್ಲರೂ ಹತ್ತಿರದ ಪ್ರಾಂತದಲ್ಲಿರುವ ಅವರ ಬಂಧುಗಳೊಡನೆ ಒಂದೇ ಕುಲದಲ್ಲಿ ಜನಿಸಿದವರಿದ್ದಾರೆ. ಕೇವಲ ಇತಿಹಾಸದ ಆಕಸ್ಮಿಕ ಘಟನೆಗಳು ಕೃತಕವಾದ ರಾಜಕೀಯ ಸೀಮೆಗಳನ್ನು ನಿರ್ಮಿಸಿದವು. ಆದುದರಿಂದ ಹೈದರಾಬಾದದ ಸ್ಥಾನವು ಸ್ವಾಭಾವಿಕವಾಗಿ ಭಾರತ ಸಂಯುಕ್ತ ಸರಕಾರದಲ್ಲಿಯೇ ಇದೆ. ಸರಕಾರವು ತನ್ನ ಈ ಮಹಾಘೋಷಣೆಯಿಂದ ಸ್ವಾರ್ಥಸಾಧಕರ ಮತ್ತು ಜಹಗೀರದಾರರ ಪ್ರಗತಿವಿಘಾತಕ ಪಡೆಗಳೊಡನೆ ಹೊಂದಿಕೊಳ್ಳಲೆಳಸಿದಂತಾಗಿದೆ. ಇದಕ್ಕೆ ನಿರಂಕುಶ ಪ್ರಭುತ್ವವನ್ನು ಶಾಶ್ವತವಾಗಿ ಮಾಡುವದೊಂದಲ್ಲದೆ ಬೇರೆಯ ಅರ್ಥವಿಲ್ಲ.

“ಇಂದಿನವರೆಗೆ ಭಾರತೀಯ ಸಂಸ್ಥಾನಾಧೀಶರು ತಮ್ಮ ಅಸ್ತಿತ್ವವೇ ಬ್ರಿಟಿಶರ ಸಾಮ್ರಾಜ್ಯಶಾಹಿಯನ್ನವಲಂಬಿಸಿದೆಯೆಂದು ತಿಳಿದುಕೊಂಡಿದ್ದರು. ಭಾರತದ ಒಕ್ಕೂಟದೊಡನೆ ಮೂಲತಃ ಒಂದಾಗಿದ್ದ ಹೈದರಾಬಾದವು ಅದರಿಂದ ಬೇರಾಗಿ ಜನತೆಯ ಬೆಂಬಲವನ್ನು ಕಳೆದುಕೊಂಡರೆ ತನ್ನ ಆಧಾರದಮೇಲೆ ತಾನು ನಿಲ್ಲಲು ಶಕ್ಯವಿಲ್ಲ; ಮತ್ತು ಅದು ದುರ್ಬಲವೂ ಪ್ರಜಾನುರಂಜನದಲ್ಲಿ ಅಸಮರ್ಥವೂ ಆಗುತ್ತದೆ: ಅಲ್ಲದೆ ಅಂತಹ ದುರ್ಬಲ ಸಂಸ್ಥಾನವು ಅವಶ್ಯವಾಗಿ ಪರಪ್ರಭುತ್ವದ ಸಹಾಯವನ್ನು ಅಪೇಕ್ಷಿಸಿ ಅದನ್ನೇ ಅವಲಂಬಿಸಿ ನಿಲ್ಲುವಂತಾಗುತ್ತದೆ. ಅದು ಜನರ ಸ್ವಾತಂತ್ರ್ಯ, ಸುಖ, ಸಮೃದ್ಧಿಗಳನ್ನು ಅಪಾಯಕ್ಕೆ ಗುರಿಪಡಿಸುತ್ತದೆ. ಅಗತ್ಯವಾದ ತ್ಯಾಗ ಪ್ರಯತ್ನ, ಸಂಕಷ್ಟಗಳಿಂದ ಭಾರತೀಯರು ಭಾರತದ ಸ್ವಾತಂತ್ರ್ಯವನ್ನು ಗೆದ್ದಿದ್ದಾರೆ; ಅದರಿಂದ ಬ್ರಿಟಿಶರ ವರಿಷ್ಠಾಧಿಕಾರವು ಕೊನೆಗಂಡಿತು. ಈ ಕಾರಣದಿಂದ ಹೈದರಾಬಾದದ ಪ್ರಜೆಗಳು ಎಂತಹ ಪರಿಸ್ಥಿತಿಯಲ್ಲಿಯೂ ತಮ್ಮನ್ನು ಭಾರತದ ಜನರಿಂದ ಬೇರ್ಪಡಿಸುವ ಪ್ರಯತ್ನವನ್ನು ಸಹಿಸಲಾರರು. ಸರಕಾರದ ನಿರಂಕುಶ ಪ್ರಭುತ್ವ ಸ್ಥಾಪನೆಯ ಪ್ರಯತ್ನವನ್ನು ಪ್ರತಿಭಟಿಸಿ ಭಾರತದ ಸಂಯುಕ್ತ ಸರಕಾರಕ್ಕೆ ಹೊಂದಿಕೆಯಾಗುವಂತೆ ಜವಾಬ್ದಾರ ಸರಕಾರ ಸ್ಥಾಪಿಸಲು ಬೇಕಾದ ಕಾರ್ಯಕ್ರಮಗಳನ್ನು ಕೈಕೊಳ್ಳಲು ಈ ಕಾಂಗ್ರೆಸ್ಸು ತನ್ನ ಕಾರ್ಯಸಮಿತಿಗೆ ಅಧಿಕಾರಕೊಡುತ್ತದೆ.”

ಕರ್ಮವೀರ
ಹರಿಜನ ಪುರವಣಿ

ಸಾಕ್ಷಾತ್ಕಾರ ಮಾರ್ಗ

ತನ್ನ ಹೃನ್ಮಂದಿರದಲ್ಲಿ ರಾಮನನ್ನು ನೆಲೆಗೊಳಿಸಿಕೊಂಡವನ ಲಕ್ಷಣವೇನು? ಇದನ್ನು ನಾವು ತಿಳಿದುಕೊಳ್ಳದಿದ್ದರೆ ರಾಮನಾಮದ ಬಗ್ಗೆ ಬಹಳ ತಪ್ಪು ತಿಳಿವಳಿಕೆಯುಂಟಾಗುವ ಭೀತಿಯಿದೆ. ಈಗಾಗಲೆ ಕೆಲ ಬಗೆಯ ತಪ್ಪು ತಿಳಿವಳಿಕೆಯುದ್ಭವಿಸಿದುಂಟು. ಅನೇಕರು ಜಪಮಣಿಗಳನ್ನು ತಿರುವುತ್ತ ಹಣೆಯ ಮೇಲೆ ನಾಮಗಳನ್ನು ಧರಿಸಿ ಒಳ್ಳೆ ಆಸ್ಥೆಯಿಂದ ಅವನ ನಾಮೋಚ್ಚಾರ ನಡೆಸುವರು. ನಾನು ರಾಮನಾಮದ ಬಗೆ ಬಿಟ್ಟೂಬಿಡದೆ ಒತ್ತಾಯಪಡಿಸುವದರಿಂದ ಈಗಾಗಲೆ ಇದ್ದ ಕಳ್ಳತನಕ್ಕೆ ಮತ್ತಷ್ಟು ಹೀರಿರಿಡಿ ದೊಂತಾಗುವದಿಲ್ಲವೆ ಎಂದು ಹಠಾತ್ತಾಗಿ ಕೇಳಬಹುದು. ಇಂಥ ಅನಿಷ್ಟ ಸೂಚನೆಗಾಗಿ ನಾನೇನು ಕಾರ್ಯಪರಾಙ್ಮುಖನಾಗಬೇಕಿಲ್ಲ. ಈ ರೀತಿ ಮೌನ ತಾಳುವುದು ಅಪಾಯಕರ. ಬಹಳ ದಿನಗಳ ಪ್ರಯತ್ನಪೂರ್ವಕ ಆಚರಣೆಯಿಂದ ಮಾತ್ರ ಈ ಬಗೆಯ ಮೌನವನ್ನು ಆಚರಿಸಬಹುದಾಗಿದೆ. ಅಂತಹ ಸ್ವಾಭಾವಿಕವಾದ ಮೌನಾಚರಣೆಯುಳ್ಳದಿದ್ದಾಗ ಯಾವನ ಹೃನ್ಮಂದಿರದಲ್ಲಿ ರಾಮನ ನಿವಾಸವಿದೆಯೋ ಅಂಥವನ ಲಕ್ಷಣಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲೇ ಬೇಕು.

ರಾಮನ ಭಕ್ತನೆಂದರೆ, ಗೀತೆಯಲ್ಲಿಯ ಸ್ಥಿತಪ್ರಜ್ಞನೆ ಎಂದು ಹೇಳಬಹುದು. ಆಳವಾಗಿ ವಿಚಾರ ಮಾಡಿದರೆ ಪರಮಾತ್ಮನ ನಿಜಭಕ್ತನು ಪಂಚಭೂತಗಳ ನಿಯಮಗಳನ್ನು ಒಳ್ಳೆ ಆಸ್ಥೆಯಿಂದ ಆಚರಿಸುವನೆಂಬುದು ಕಂಡು ಬರುವದು. ಅವನು ಹಾಗೆ ಆ ನಿಯಮಗಳನ್ನು ಪಾಲಿಸಿದ್ದಾದರೆ ಬೇನೆಯು ಅವನನ್ನು ಮುಟ್ಟದು. ಯದಾಕದಾಚಿತ್ ಅವನು ಬೇನೆ ಬಿದ್ದರೆ ಪಂಚಭೂತಗಳ ಸಹಾಯದಿಂದಲೆ ಅವನು ಅದನ್ನು ವಾಸಿಮಾಡಿಕೊಳ್ಳಬಲ್ಲನು. ಆದರೆ ಶರೀರಸ್ಥನಿಗೇನು ಯಾವದೇ ಬಗೆಯಿಂದ ಶರೀರವನ್ನು ಗುಣಪಡಿಸಿಕೊಳ್ಳುವ ಅಗತ್ಯವಿರುವದಿಲ್ಲ. ತಾನು ಕೇವಲ ಶರೀರಿಯೆಂದು ಯಾವನು ಭಾವಿಸುವನೊ ಅವನು ಶರೀರದಲ್ಲಿಯ ರೋಗಗಳನ್ನು ಗುಣಪಡಿಸಿಕೊಳ್ಳುವದಕ್ಕಾಗಿ ಸ್ವಾಭಾವಿಕವಾಗಿ ಜಗತ್ತನ್ನೆಲ್ಲ ಸುತ್ತಬೇಕಾಗುವದು. ಆದರೆ ಆತ್ಮವೆಂಬುದೊಂದು ಬೇರೆ ಇದೆ. ಅದು ಶರೀರದಲ್ಲಿದ್ದರೂ ಪ್ರತ್ಯೇಕವಾಗಿಯೆ ಇದೆಂದು ಯಾವನು ತಿಳಿದುಕೊಳ್ಳುವನೋ, ದೇಹವು ವಿನಾಶಿಯಾಗಿದ್ದು ಆತ್ಮವು ಅವಿನಾಶಿಯಾಗಿದೆಯೆಂದು ಯಾವನು ತಿಳಿದುಕೊಳ್ಳುವನೋ ಅವನು ಪಂಚಭೂತಗಳು ಕೈಬಿಟ್ಟರೂ ಪರಿತಪಿಸುವದಿಲ್ಲ. ಶೋಕ ಮಾಡುವದಿಲ್ಲ. ತದ್ವಿರುದ್ಧವಾಗಿ ಅವನು ಮರಣವನ್ನು ಮಿತ್ರನಂತೆ ಅಪ್ಪಿಕೊಳ್ಳುವನು. ತನ್ನ ಬೇನೆಗಳನ್ನು ವಾಸಿ ಮಾಡಿಕೊಳ್ಳುವದಕ್ಕಾಗಿ ಅವನು ಡಾಕ್ಟರರನ್ನು ಹುಡುಕುತ್ತ ಹೋಗದೆ ತಾನೇ ಅವನ್ನು ಗುಣಪಡಿಸಿಕೊಳ್ಳುವನು. ಹೃನ್ಮಂದಿರದಲ್ಲಿಯ ಆತ್ಮನ ಅರಿವಿನಲ್ಲಿ ಅವನು ಯಾವಾಗಲೂ ಇದ್ದು ಅವನ ಬಗ್ಗೆಯೆ ಸದಾ ದಕ್ಷತೆ ವಹಿಸುವನು.

ಇಂಥ ಮನುಷ್ಯ ಉಸಿರಾಡಿಸುವಾಗೆಲ್ಲ ಪರಮಾತ್ಮನ ನಾಮೋಚ್ಚಾರ ನಡೆಸುವನು. ಅವನ ಶರೀರ ನಿದ್ರಾವಸ್ಥೆಯಲ್ಲಿರುವಾಗ ಕೂಡ ಅವನ ರಾಮನು ಜಾಗ್ರತನಾಗಿರುವನು. ಅವನ ಪ್ರತಿಯೊಂದು ಕಾರ್ಯದಲ್ಲಿಯೂ ರಾಮನು ಅವನ ಬೆಂಬಲಿಗನಾಗಿಯೆ ಇರುವನು. ಇಂಥ ಪವಿತ್ರ ಮಿತ್ರತ್ವದ ನಾಶವೆಂದರೇ ಭಕ್ತನಿಗೆ ನಿಜವಾದ ಮರಣ.

ತನ್ನ ರಾಮನ ಸಹಾಯವನ್ನು ಯಾವಾಗಲೂ ಪಡೆಯಬಯಸುವವನು ಪಂಚಭೂತಗಳು ತನಗೆ ಕೊಡಬಯಸಿದಷ್ಟರಿಂದಲೆ ಸಂತುಷ್ಟನಾಗಬೇಕು. ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳಿಂದ ಅದಷ್ಟು ಸರಳ ಮತ್ತು ಸುಲಭ ಮಾರ್ಗಗಳಿಂದ ಎಲ್ಲಬಗೆಯ ಪ್ರಯೋಜನವನ್ನು ಪಡೆಯಬೇಕು. ರಾಮನಾಮಕ್ಕೆ ಈ ಸಹಾಯವೇನು ಪೂರಕವಾಗಲಾರದು. ಅದರ ಸಾಕ್ಷಾತ್ಕಾರಕ್ಕೆ ಒಂದು ಬಗೆಯ ಸಾಧನ ಮಾತ್ರ. ರಾಮನಾಮಕ್ಕೆ ನಿಜವಾಗಿ ಯಾರ ಸಹಾಯವೂ ಬೇಡ. ಆದರೆ ರಾಮನಾಮದಲ್ಲಿ ಶ್ರದ್ಧೆಯನ್ನಿಡುವುದು ಅದೇ ಕಾಲಕ್ಕೆ ಡಾಕ್ಟರರ ಕಡೆಗೆ ಓಡಿ ಹೋಗುವದು ಒಂದಕ್ಕೊಂದು ಸರಿಹೋಗಲಾರವು.

ಧರ್ಮಜಿಜ್ಞಾಸುಗಳೊಬ್ಬರು ರಾಮನಾಮದ ಬಗ್ಗೆ ನಾನು ಮಾಡಿದ ಪ್ರತಿಪಾದನೆಯನ್ನೋದಿ ಕೆಲ ದಿನಗಳ ಹಿಂದೆ ನನಗೊಂದು ಪತ್ರ ಬರೆದರು. ರಾಮನಾಮವು ಶರೀರವನ್ನೇ ಪರಿವರ್ತನಗೊಳಿಸುವ ರಾಸಾಯನಿಕ ದ್ರವ್ಯವಂತಿದೆಂದು ಅವರ ಅಭಿಪ್ರಾಯ. ಮನುಷ್ಯನ ಉತ್ಸಾಹಶಕ್ತಿಯ ಸಂಗ್ರಹವೆಂದರೆ ದ್ರವ್ಯಸಂಗ್ರಹದಂತೆಯೆ ಎಂದು ಅವರ ಹೇಳಿಕೆ. ಎಂದೆಂದಿಗೂ ವಿನಾಶಹೊಂದದಂಥ ಉದಿತೋದಿತವಾದ ಆಧ್ಯಾತ್ಮಿಕ ಶಕ್ತಿಯನ್ನು ದಯಪಾಲಿಸುವ ಸಾಮರ್ಥ್ಯ ಆ ರಾಮನಾಮದಲ್ಲಿಯೆ ಇದೆ.

ರಕ್ತವಿಲ್ಲದೆ ಶರೀರ ಹೇಗೆ ಅಸ್ತಿತ್ವದಲ್ಲಿ ಇರಲಾರದೋ ಅದರಂತೆ ಆತ್ಮಕ್ಕೆ ವಿಶುದ್ಧ ಮತ್ತು ಅನುಪಮ ಶ್ರದ್ಧೆ ಅತ್ಯವಶ್ಯವಾಗಿದೆ. ಮನುಷ್ಯನ ಶಾರೀರಿಕ ಅಶಕ್ತತೆಯನ್ನೆಲ್ಲ ಈ ನೈತಿಕ ಶಕ್ತಿಯು ಹೋಗಲಾಡಿಸಬಲ್ಲದು. ಅಂತೆಯೆ ರಾಮನಾಮವನ್ನು ಹೃನ್ಮಂದಿರದಲ್ಲಿ ಸ್ಥಾಪಿಸಿಕೊಂಡದ್ದಾದರೆ ಮನುಷ್ಯನ ಪುನರ್ಜನ್ಮವಾದಂತೆಯೆ ಎಂದು ಹೇಳಲಾಗುತ್ತದೆ. ಈ ನಿಯಮವು ಸ್ತ್ರೀಪುರುಷರಿಗೆ, ತರುಣ ವೃದ್ಧರಿಗೆಲ್ಲರಿಗೂ ಸಮವಾಗಿಯೆ ಅನ್ವಯಿಸುವದು.

ಪಾಶ್ಚಾತ್ಯರಲ್ಲಿಯೂ ಈ ಬಗೆಯ ವಿಶ್ವಾಸವುಂಟು. ಕ್ರಿಶ್ಚನ್ ಶಾಸ್ತ್ರದಲ್ಲಿಯೂ ಅದರ ಲಕ್ಷಣಗಳನ್ನು ನಾವು ಕಾಣಬಹುದು. ಇದೇ ಹರಿಜನ ಸಂಚಿಕೆಯಲ್ಲಿ ರಾಜಕುಮಾರಿಯು "ಸೆವೆಂಥ ಡೆ ಎಡ್ವೆಂಟಿಸ್ಟ"ರು ಬರೆದ ಒಂದು ಪುಸ್ತಿಕೆಯಿಂದ ಎತ್ತಿದ ಉಚಿತ ಅವತರಣಿಕೆಗಳನ್ನು ಕೊಟ್ಟಿರುವಳು.

ಯುಗಯುಗಾಂತರಗಳಿಂದ ಹಿಂದೀ ಜನರಿಗೆ ಪರಂಪರೆಯಾಗಿ ಬಂದ ಈ ವಿಶ್ವಾಸಕ್ಕೆ ಪರಕೀಯರ ಸಹಾಯದ ಅವಶ್ಯಕತೆಯೇನಿಲ್ಲ.

ಹರಿದ್ವಾರ — ಮೋ. ಕ. ಗಾಂಧಿ
೨೧—೬—೧೯೪೭

(ಗುಜರಾಥಿಯಿಂದ ಅನುವಾದಿತ)

ಅಮೇರಿಕೆಯಿಂದ

ಶ್ರೀ ರಿಚರ್ಡ್ ಗ್ರೆಗ್‌ರವರು ನನಗೆ ಅಮೇರಿಕೆಯಿಂದ ಬರೆಯುತ್ತಾರೆ:

"ನೀವು ೧೨೫ ವರ್ಷಗಳವರೆಗೆ ಬದುಕುವ ಆಸೆಯನ್ನು ಬಿಟ್ಟಿರುವಿರೆಂದೂ ಹಿಂಸಾಪ್ರಲಯದ ದೆಸೆಯಿಂದ ನಿಮಗೆ ಭಾರತದಲ್ಲಿ ಸ್ಥಾನವಿಲ್ಲವೆಂದೂ ಇಂದಿನ ನ್ಯೂಯಾರ್ಕಿನ ಪತ್ರಿಕೆಯಲ್ಲಿ ಹೊಸದಿಲ್ಲಿಯ ಸುದ್ದಿಯೆಂದು ಪ್ರಸಿದ್ಧವಾಗಿದೆ. ಈ ಸುದ್ದಿಯು ನಿಜವೇ ಆಗಿದ್ದರೆ ನೀವು ನಿಮ್ಮ ಮನಃಪ್ರವೃತ್ತಿಯನ್ನು ದಯವಿಟ್ಟು ಪುನರ್ವಿಮರ್ಶಿಸಬೇಕೆಂದು ಬೇಡುತ್ತೇನೆ. ಇನ್ನೂ ೧೫ ವರ್ಷಗಳ ವರೆಗೆ ಮುಂಬರಿದರೂ ಮುಂಬರಿಯಲಿ; ಭಾರತದ ಸದ್ಯದ ಹಿಂಸೆ ಅಷ್ಟೇನೂ ಹೆಚ್ಚಿನದಲ್ಲ. ಭಾರತವು ಇಂದು ಅದಕ್ಕಿಂತಲೂ ಹೆಚ್ಚಿನ ವಸ್ತುಗಳ ಕಡೆ ಗಮನಕೊಡಬೇಕಾಗಿದೆ.

"ಭಾರತವು ಇಡಿಯ ಜಗತ್ತಿನಲ್ಲಿ ಅತ್ಯಂತ ಅಗಾಧವಾದ ಮತ್ತು ಸಮರ್ಥವಾದ ಆಧ್ಯಾತ್ಮಿಕ ದರ್ಶನ ಹಾಗೂ ಸಂಸ್ಕೃತಿಗಳ ಆಗರವಾಗಿದೆ. ಅದು ಬಹಳ ಕಾಲ ಬಾಳುವಂಥದೂ ಆಗಿದೆ, ಆಧುನಿಕ ಧರ್ಮಹೀನತೆ ಮತ್ತು ಪ್ರಾಪಂಚಿಕತೆಯನ್ನು ಬೋಧಿಸುವ ಯುರೋಪಿನ ಸಂಸರ್ಗ—ಇವುಗಳಿಂದ ಹಿಂದೂ ಸಂಸ್ಕೃತಿಗೆ ಎಷ್ಟೇ ಆಘಾತಬಿದ್ದರೂ ಇನ್ನೂ ಅದು ಅತ್ಯುನ್ನತವಾಗಿಯೇ ಇದೆ. ಜಗತ್ತಿನ ಬಹುಭಾಗವು ಹಿಂಸೆ, ಲೋಭ ಮತ್ತು ಹಿರಣ್ಯಹೀನತೆಗಳಿಂದ ಹಾಳಾಗಿ ಹೋಗುತ್ತದೆ; ಆದರೆ ತನ್ನ ಆಧ್ಯಾತ್ಮಿಕ ನಿಲ್ದಾಣವನ್ನು ಸುರಕ್ಷಿತವಾಗಿಡುವ ಮತ್ತು ಭರವಸೆಯನ್ನು ಬಗೆಗೀವ ನಡುಗಡ್ಡೆಯಾಗಿ ಉಳಿದ ಹಾಗೂ ಅಧಿವ್ಯಾಧಿಬಾಧಿತ ಪ್ರಪಂಚಕ್ಕೆ ಸುಬುದ್ಧಿಯನ್ನು ಕೊಡುವ ಆಧ್ಯಾತ್ಮಿಕ ಅಂತರ್ದೃಷ್ಟಿಯು—ಎಷ್ಟೇ ಸಣ್ಣದಾಗಿಯಾಗಲಿ—ಭಾರತದಲ್ಲಿ ಉಳಿಯುವುದೆಂದು ನಾನು ನಂಬಿದ್ದೆ.

"ಉಳಿದೆಲ್ಲರಿಗಿಂತ ಹೆಚ್ಚಾಗಿ ನೀವು ಆ ಹಿಂದೂ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತೀರಿ. ನೀವು ಬದುಕಿ ಉಳಿಯುವುದು ಇಡಿಯ ಜಗತ್ತಿಗೆ ಬಹಳ ಮುಖ್ಯವಾದುದು. ಕೆಲಕಾಲ ನಿಮ್ಮ ಮತವನ್ನು ಒಪ್ಪುವ ಮತ್ತು ಅಹಿಂಸಾಮಾರ್ಗದಲ್ಲಿ ನಡೆವ ಜನರ ಸಂಖ್ಯೆ ಬೆರಳುಗಳಿಂದೆಣಿಸುವಷ್ಟೇ ಇರಬಹುದಾದರೂ ಆ ಅಲ್ಪಸಂಖ್ಯಾಕತೆಯೇ ಗುಣಾಭಿವೃದ್ಧಿಗೂ ಆಧ್ಯಾತ್ಮಿಕ ಉನ್ನತಿಗೂ ಕಾರಣವಾಗುತ್ತದೆ. ತಮ್ಮ ಕಷ್ಟ ಕಾರ್ಪಣ್ಯಗಳಿಂದ ಜನರು ಸುಬುದ್ಧಿಯನ್ನು ಪಡೆದ ಬಳಿಕ (ಬಹುಶಃ ಬಹಳ ಜನರು ಇದೊಂದೇ ಮಾರ್ಗದಿಂದ ಕಲಿಯಬಲ್ಲರೆಂದು ತೋರುತ್ತದೆ) ಪುನಃ ಆಧ್ಯಾತ್ಮಿಕ ಆಗರಗಳತ್ತ ಗಮನಕೊಡುತ್ತಾರೆ. ಹಿಂಸೆಯು (ಜನರ ದುರ್ನೀತಿ) ನಾವು ನಿರ್ದಿಷ್ಟಪಡಿಸಿದ ಕಾಲದಲ್ಲಿ ನಿಲ್ಲದೆಹೋದರೆ ನಮ್ಮ ಕೈಯಲ್ಲಾದುದೆಲ್ಲವನ್ನೂ ಮಾಡಬೇಕೆಂದು ಅದಷ್ಟು ಕಾಲ ಬದುಕುವುದನ್ನು ಹಿಡಿದು ನಾವು ಮಾಡಬಲ್ಲ ಎಲ್ಲವನ್ನೂ ನಿಲ್ಲಿಸುತ್ತೇವೆಂದು ನಾವು ದೇವರಿಗೆ ಹೇಳುವಂತಾಗದಿರಲಿ. ನಮ್ಮೊಡನೆ ನೀವು ಬದುಕಿರಬೇಕೆಂಬ ಉತ್ಕಟೇಚ್ಛೆಯಿಂದ ನಾನು ನಿಮಗೆ ಈ ಮಾತನ್ನು ಹೇಳಲು ಧೈರ್ಯ ಮಾಡಿದ್ದೇನೆ.

"ಸ್ವಲ್ಪ ವಿಶದವಾಗಿ ಹೇಳುತ್ತೇನೆ. ವಿವಿಧವಾದ ಆರ್ಥಿಕಕ್ರಿಯೆಗಳ ಹಲವು ತರಂಗ ಅಥವಾ ವೃತ್ತ ಇಲ್ಲವೆ ಹೊಂದಿಕೆಗಳವೆಯೆಂದು ಸೂಕ್ಷ್ಮವಾದ ಅರ್ಥಶಾಸ್ತ್ರ ಪರಿಶೀಲನದಿಂದ ತಿಳಿದುಬಂದಿದೆ. ೫೪ ವರ್ಷದ ಒಟ್ಟುಸಾಟಿ ದರಗಳ ಹೊಂದಿಕೆ, ೧೮ ವರ್ಷದ ಸ್ವಭೂಮಿಗೆ ಸಂಬಂಧಿಸಿದ ಕಾರ್ಯಗಳ ವೃತ್ತ, ೯ ವರ್ಷದ ಮತ್ತೊಂದು ತರಹದ ತರಂಗ, ಅನಂತರ ಮತ್ತೊಂದು ೩½ ವರ್ಷದ ಬಗೆಯದು—ಹೀಗೆ ಹಲವಾರಿವೆ. ಎಲ್ಲ ಆರ್ಥಿಕೋತ್ಪಾತಗಳೂ ಇವುಗಳಿಂದಲೇ ಸಂಭವಿಸಿವೆ. ಈ ಎಲ್ಲ ವೃತ್ತಗಳೂ ೧೯೫೦—೫೨ರಲ್ಲಿ ಅತ್ಯಂತ ಕೆಳಮಟ್ಟಕ್ಕಿಳಿದು ಬಿಡುವವು. ಕೈಗಾರಿಕೆ ಪ್ರಧಾನವಾದ ರಾಷ್ಟ್ರಗಳು ಕಂಡ ಆರ್ಥಿಕೋತ್ಪಾತಗಳಲ್ಲಿ ಅತ್ಯಂತ ಉಗ್ರವಾದುದನ್ನು ನಾವು ಈಗ ಬಹುಶಃ ಪ್ರವೇಶಿಸುತ್ತಿದ್ದೇವೆ. ಅದು ಅಮೇರಿಕೆಯ ಸಂಯುಕ್ತ ಸಂಸ್ಥಾನವನ್ನಲ್ಲದೆ ಉಳಿದ ಎಲ್ಲ ರಾಷ್ಟ್ರಗಳನ್ನೂ ವ್ಯಾಪಿಸುತ್ತದೆ. ಅಮೇರಿಕೆಯ ಸಂಯುಕ್ತ ಸಂಸ್ಥಾನದ ಆರ್ಥಿಕ ಸಹಾಯದ ಮೇಲೆ ಅವಲಂಬಿಸಿದ ಇಂಗ್ಲೆಂಡು ಆ ಕಾರಣದಿಂದಲೇ ಭಾರತದ ಸುದ್ದಿಗೆ ಬರದಂತಾಗುವುದೆಂದು ಹೇಳಬಹುದು. ಈಗ ಸಂಭಾವ್ಯವಾಗಿ ತೋರುತ್ತಿರುವ ಸಮರವು ರಶಿಯಾ ಅಮೇರಿಕೆಗಳೊಡನೆ ನಡೆದುದೇ ಆದರೆ ಪಾಶ್ಚಾತ್ಯ ನಾಗರಿಕತೆಯು ಅವಸಾನವಾಗಿ ಜಗತ್ತಿನ ಮೇಲೆ ಬಿಳಿಯನು ಅಧಿಕಾರ ನಡೆಸುವುದು ಕೊನೆಗೊಳ್ಳುತ್ತದೆ. ಆಗ ಹಿಂದೂ ಭಾರತವು ಆ ಸಮರಗ್ರಸ್ತ ಪರಿಸ್ಥಿತಿಯಿಂದ ಜಗತ್ತನ್ನು ಕೈಹಿಡಿದೆತ್ತಬಹುದು. ಇದೇ ನನ್ನ ನಂಬಿಗೆ. ಅಂತಹ ಅತ್ಯಂತ ಪ್ರಮುಖ ಕಾಲದಲ್ಲಿ ದೇವದೂತರಾಗಿ ಕೆಲಸ ಮಾಡುವುದರ ಸಲುವಾಗಿ ನೀವು ಜೀವಿಸತಕ್ಕದ್ದು; ಹೇಗಾದರೂ ನೀವು ೧೨೫ ವರ್ಷಗಳ ವರೆಗೆ ಬದುಕುವ ಯತ್ನಮಾಡಿರೆಂದು ಬೇಡುತ್ತೇನೆ. ಇಂದಿಗಿಂತ ಅಂದು ಜಗತ್ತಿಗೂ ಭಾರತಕ್ಕೂ ನೀವು ಬೇಕಾಗುತ್ತೀರಿ. ಏಕೆಂದರೆ, ಇದು ದೇವನಿಯಮ ನಿಯಂತ್ರಿತವಾದ ನೈತಿಕ ಪ್ರಪಂಚ ಮತ್ತು ಯುಗಯುಗಗಳಿಂದ ಆ ನಿಯಮಗಳನ್ನು ಉಲ್ಲಂಘಿಸುತ್ತ ಬಂದುದಕ್ಕಾಗಿ ಜನಾವಳಿಯು ಇಂದು ದುಃಖವನ್ನನುಭವಿಸಬೇಕಾಗಿದೆ— ಅದರಲ್ಲೂ ರಾಷ್ಟ್ರಗಳ ಆಳಿಕೆಯಿಂದ ಸಂಭವಿಸಿದ ನಿಯಮೋಲ್ಲಂಘನಗಳಿಗಾಗಿ ಮತ್ತಷ್ಟು ಸಂಕಟಕ್ಕೊಳಗಾಗಬೇಕಾಗಿದೆ. ಸಂಕಷ್ಟಗಳಾದರೋ ಯೋಚಿಸಿದರೆ ಬಹು ಭಯಂಕರವಾಗಿವೆ. ಆದರೆ ಅವು ಬರಲೇಬೇಕು—"

—[illegible]

ಸ್ವದೇಶಿ

(ಗಾಂಧೀಜಿ ೨೨-೬-೪೭ರಂದು ದಿಲ್ಲಿ ಪ್ರಾರ್ಥನೋತ್ತರ ಮಾಡಿದ ಭಾಷಣದ ಸಾರಾಂಶ— —[illegible])

ಸ್ವರಾಜ್ಯದ ಸ್ವರೂಪದಲ್ಲಿ ಸ್ವದೇಶಿ ರಾಜ್ಯ ಸ್ಥಾಪಿತವಾಗುವ ಈ ಸಮಯದಲ್ಲಿ ಸ್ವದೇಶೀ ಭಾವನೆ ದೇಶದಲ್ಲಿ ಬಹಳ ಭರದಿಂದ ಇಲ್ಲದಾಗುತ್ತಿದೆಂದು ಹೇಳಲಾಗುತ್ತದೆ. ಖಾದಿ ಹುಗಿದ ಬಹಳ ಕಡಿಮೆಯಾದೆ. ಇಷ್ಟು ಕಷ್ಟವೂ ಎಂದೂ ಇದ್ದಿರಲಿಲ್ಲೆಂದು ಹೇಳಬಹುದು. ಗಾಂಧಿ ಟೊಪ್ಪಿಗೆಯನ್ನು ಹಾಕಿಕೊಂಡು ಉಳಿದೆಲ್ಲ ಪರದೇಶೀಯ ಉಡುಪು ಧರಿಸಿಕೊಂಡು ಅಡ್ಡಾಡುವವರನ್ನು ಕಾಣುವದೇನೂ ಅಪರೂಪವಲ್ಲ. ಪ್ರಪಂಚ ಪ್ರಮಾಣದಲ್ಲಿ ಇದು ನಿಜವಿದ್ದರೆ, ಅಷ್ಟರಿಂದ ಸ್ತ್ರೀಯ ಸ್ವಾತಂತ್ರ್ಯ ಅದ್ಭುತ ಸಿದ್ಧವಾದಂತೆಂದು ತನ್ನ ಅಭಿಪ್ರಾಯ. ಹಿಂದು ಸ್ಥಾನದ ನ್ಯಾಯ್ಯವಾಗಿ ಆಗಬೇಕಿದ್ದ ಏಕೀಭಾವದ ಮಾರ್ಗದರ್ಶಕವಾಗಬಲ್ಲದೆಂಬ ಹಿರಿಯಾಸೆ ಮಣ್ಣುಗೂಡಿದಂತೆಯೆ ಸ್ವ. ಸ್ವದೇಶಿ ಎಂಬ ಕಲ್ಪನೆ 'ಬ್ರಿಟಿಶ್'ಗೆ ಪ್ರಾರಂಭವಾಗುವದು ಒಳ್ಳೇ ಬರಹದ ಅಭಿಪ್ರಾಯದಂತೆ ಇದು ಒಳ್ಳೆ ಪ್ರಮಾಣದಲ್ಲಿ ಬಂದಿದೆ. ಹಿಂದುಸ್ಥಾನದ ನಗರಗಳ ಮಟ್ಟಿಗೆ ಈ ಮಾತಿನ ಸತ್ಯ ಅನ್ವಯಿಸಬಹುದೆಂದೂ ಹಳ್ಳಿಗಳೆಲ್ಲ ಬಹಳ ಪ್ರಮಾಣದಲ್ಲಿ ಖಾದಿ ಪರಿಣಮಿಸಿದ್ದರೂ ಅಲ್ಲಿ ಇಂಥ ಮುರಿತ ಪರಿಸ್ಥಿತಿಯಿರಲಿಕ್ಕಿಲ್ಲೆಂದೂ ಆಶಿಸುತ್ತೇನೆಂದು ಗಾಂಧೀಜಿ ಹೇಳಿದರು.

೧೯೧೫ರಲ್ಲಿ ನಾನು ಹಿಂದುಸ್ಥಾನಕ್ಕೆ ಮರಳಿದ ಕೂಡಲೆ ಖಾದಿಯಲ್ಲಿಯೆ ಸ್ವದೇಶೀಯ ಸರ್ವಸಾರ ಅಡಕವಾಗಿದೆಂದು ನಾನು ಕಂಡುಹಿಡಿದೆ. ಖಾದಿಯು ಅಸ್ತವಾಗಿಬಿಟ್ಟರೆ, ಸ್ವದೇಶಿಯು ಅಸ್ತವಾದಂತೆಯೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಹಿಂದೀ ಗಿರಣಿಗಳಲ್ಲಿ ಬಟ್ಟೆಗಳನ್ನು ತಯಾರ ಮಾಡುವವರು ಸ್ವದೇಶಿಯಲ್ಲ ಎಂದು ನಾನು ತೋರಿಸಿ ಕೊಟ್ಟಿದ್ದೇನೆ. ಇಂದಿಗೂ ನನ್ನ ಆ ಅಭಿಪ್ರಾಯ ಕಾಯಂ ಇರುವದು.

ನಮ್ಮ ಮೊದಲನೆ ರಾಷ್ಟ್ರೀಯ ಹೋರಾಟದಲ್ಲಿ ಪರದೇಶಿ ಬಟ್ಟೆಗಳ ಹೋಳಿ ಮಾಡಿದುದನ್ನು ನೆನೆಯಿರಿ. ಶ್ರೀಮತಿ ಸರೋಜಿನಿ ನಾಯಡು ಮತ್ತು ಪಂಡಿತ ಮೋತೀಲಾಲ ನೆಹರು ಇವರು ತಮ್ಮ ನಯವಾದ ಸರಕುಗಳನ್ನೆಲ್ಲ ಅದರಲ್ಲಿ ಹೋಮಮಾಡಿದರು. ಹಿಂದುಗಡೆ ಪಂಡಿತ ಮೋತೀಲಾಲ ನೆಹರು ಇವರು ಖಾದಿಯಲ್ಲಿಯ ಸಾದಾತನ ಮತ್ತು ವಿಶುದ್ಧತೆಗಾಗಿ ನಿಜವಾದ ಸಂತೋಷ ತನಗೆ ಎನಿಸಹತ್ತಿದೆಂದು ಸುರಂಗದಿಂದ ಪತ್ರ ಬರೆದರು. ಅದು ಯಥಾರ್ಥವಾಗಿದೆ. ಆದರೆ ಇಂದು ಆ ಬಗೆಯ ಭಾವನೆ ಉಳಿದಿಲ್ಲ. ರಾಟಿಯು ನಮ್ಮ ರಾಷ್ಟ್ರಧ್ವಜದ ಮಧ್ಯದಲ್ಲಿ ಕಂಗೊಳಿಸುತ್ತದೆ. ಕೋಟ್ಯವಧಿ ಜನತೆಯ ಐಕ್ಯ ಮತ್ತು ಅಹಿಂಸಾತ್ಮಕ ಶಕ್ತಿಯ ಪ್ರತೀಕವದು. ರಾಟಿಯಿಂದ ತೆಗೆದ ನೂಲು ರಾಷ್ಟ್ರಧ್ವಜದಲ್ಲಿಯ ಮೂಬಣ್ಣಗಳು ಪ್ರತಿನಿಧಿಸುತ್ತಿರುವವರನ್ನೆಲ್ಲ ಕೂಡಿಯೆ ಕಟ್ಟಿಬಿಡುತ್ತದೆಂಬ ತನ್ನ ಅಭಿಪ್ರಾಯ. ಅಂತೆಯೆ ಸ್ವರಾಜ್ಯದ ಕಟ್ಟಡವೆಲ್ಲ ಕೈನೂಲಿನ ಮೇಲೆ ನಿಂತಿದೆಂದು ನಾನು ಹೇಳುತ್ತಿರುವೆನು. ರಾಟಿಯು ಪ್ರಬಲ ಅಸ್ತ್ರವೆಂದು ನಾನು ಕರೆದುದಕ್ಕೆ ಇದೇ ಕಾರಣ. ಇಂದು ಆ ರಾಟಿಯ ಗತಿಯೇನು? ಅದೆಲ್ಲಿದೆ? ನಿಮ್ಮಲ್ಲಿ ಸ್ವದೇಶಿ ಭಾವನೆಯಿದ್ದ ಪಕ್ಷದಲ್ಲಿ, ನಿಮ್ಮ ಮುಖ್ಯ ಮುಖ್ಯ ಬೇಡಿಕೆಗಳಿಗಾಗಿ ಪಟ್ಟಣದ ಕಡೆ ನೋಡಲು ನೀವು ಒಪ್ಪಬಾರದೆಂದು ನಾನು ಈ ಮೊದಲೆ ನಿಮ್ಮ ಸ್ಮರಣೆಗೆ ತಂದು ಕೊಟ್ಟಿದ್ದೇನೆ. ಸದ್ಯದಂಥ ಅತ್ಯಂತ ಕೊರತೆಯ ಸಮಯದಲ್ಲಿ ಹಿಂದುಸ್ಥಾನ ಹೊರಗಿನ ಪ್ರದೇಶಗಳಿಂದ ಆಹಾರ ಪದಾರ್ಥ ಮತ್ತು ಬಟ್ಟೆಯನ್ನು ತರಿಸಿಕೊಳ್ಳುತ್ತಿದ್ದರೆ ತಪ್ಪೇನೂ ಆಕ್ಷೇಪವಿಲ್ಲ. ಇದೂ ಯಾವ ಬಗೆಯಿಂದಲೂ ಸಿದ್ಧವಾಗಿಲ್ಲ. ಹೀಗೆ ಹೇಳಲು ನಾನು ಸ್ವಲ್ಪ ಹಿಂಜರಿಯುವದಿಲ್ಲ; ಹಿಂದುಸ್ಥಾನ ತನ್ನ ಅನೇಕ ಹಳ್ಳಿಗಳಲ್ಲಿ ತನಗೆ ಬೇಕಾದಷ್ಟು ಖಾದಿಯನ್ನು ಸಿದ್ಧಪಡಿಸಿಕೊಳ್ಳಬಹುದಾಗಿದೆ; ಬೇಕಾಗುವಷ್ಟು ಆಹಾರ ಪದಾರ್ಥಗಳನ್ನೂ ಅದು ಬೆಳೆಯಬಲ್ಲದೆಂದು ನಾನು ಪುನಃ ಪುನಃ ಹೇಳುತ್ತೇನೆ. ಆದರೆ ದುರ್ದೈವದಿಂದ ಜನರು ಅಂತರ್ಮುಖರಾಗದಷ್ಟು ಅಲಸಿಗರಾಗಿರುತ್ತಾರೆ. ಹಿಂದುಸ್ಥಾನದ ಗಡಿಗಳೊಳಗಿಂದಲೆ ಈ ಎರಡೂ ಬೇಡಿಕೆಗಳನ್ನು ಪೂರಯಿಸಿಕೊಳ್ಳಬೇಕೆಂದು ಒತ್ತಿ ಹೇಳುವುದನ್ನು ಕೂಡ ಅವರು ಜಾಗ್ರತರಾಗಿಲ್ಲ. ಈ ಎರಡು ಅವಶ್ಯಕತೆಗಳನ್ನು ಪೂರಯಿಸಿಕೊಳ್ಳುವದಕ್ಕಾಗಿ ಪಾಶ್ಚಾತ್ಯರ ಕಡೆಗೆ ನೋಡುತ್ತ ಕೂಡ್ರುವ ಬದಲಿಗೆ ಉದಾರತೆ ಮತ್ತು ಸಗ್ಗತೆಯನ್ನು ಎದುರಿಸಬೇಕೆಂದು ಕೂಡ ಹೇಳುವ ಧಾರ್ಷ್ಟ್ಯವನ್ನು ನಾನು ಮಾಡುತ್ತೇನೆ. ಇಷ್ಟರ ನಿರ್ಧಾರವಿಲ್ಲದೆ ಸ್ವಾತಂತ್ರ್ಯವನ್ನು ಅನುಭವಿಸುವದು ಶಕ್ಯವಿಲ್ಲ.

ವಾರದ ಪತ್ರ

ಸಾರ್ವಜನಿಕ ಉಪವಾಸಗಳು

ತಮ್ಮ ಅಂತರ್ವಾಣಿ ಹಿಂದುಸ್ತಾನದ ವಿಭಜನೆಯನ್ನು ಪ್ರತಿಭಟಿಸುವಂತೆ ಆದೇಶ ಕೊಡುತ್ತಿದೆಯೆಂದೂ ಆದು ಕಾರಣ ತಾವು ಪಾಕಿಸ್ತಾನ ರದ್ದಾಗುವ ವರೆಗೂ ಉಪವಾಸ ಮಾಡುವೆವೆಂದೂ ಮಹಾರಾಷ್ಟ್ರೀಯ ದಂಪತಿಗಳು ಗಾಂಧೀಜಿಗೆ ಪತ್ರ ಬರೆದಿದ್ದರು. ಗಾಂಧೀಜಿಯ ವಸತಿಯಲ್ಲಿಯೆ ಉಪವಾಸ ಮಾಡಬೇಕೆಂದು ಅವರ ಅಪೇಕ್ಷೆಯಿತ್ತು. ಅದಕ್ಕಾಗಿ ಅಲ್ಲಿ ಉಳಿದುಕೊಳ್ಳಲು ಏರ್ಪಡಿಸಬೇಕೆಂದು ಅವರು ಕೇಳಿಕೊಂಡರು. ಆದರೆ ತಾವೇ ಬೇರೆಯವರ ಅತಿಥಿಯಾಗಿರುವಾಗ ಅಲ್ಲಿ ಇನ್ನೊಬ್ಬರಿಗೆ ಆತಿಥ್ಯ ಮಾಡುವ ಅಧಿಕಾರ ತಮಗಿಲ್ಲವೆಂದು ಗಾಂಧೀಜಿ ಉತ್ತರ ಕೊಟ್ಟರು. ಆದ್ದರಿಂದ ಆ ದಂಪತಿಗಳು ಭಂಗೀ ವಸತಿಯ ಮುಂದೆ ಉಪವಾಸ ಕುಳಿತರು. ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಅವರನ್ನುದ್ದೇಶಿಸಿ ಮಾತಾಡುತ್ತ, ಅವರಿಗೆ ಸಾರ್ವಜನಿಕ ಉಪವಾಸಗಳ ಶಾಸ್ತ್ರ ಗೊತ್ತಿಲ್ಲವೆಂದರು. ತಮಗೆ ತಿಳಿದಷ್ಟು ಮಟ್ಟಿಗೆ ಈ ಉಪವಾಸ ತೀರ ಅನುಚಿತವೂ ತಪ್ಪೂ ಆಗಿದೆಯೆಂದು ಅವರು ಅಭಿಪ್ರಾಯ ಪಟ್ಟರು. ತಮ್ಮ ಮೇಲೆ ಅದರ ಪರಿಣಾಮ ಎಳ್ಳಷ್ಟೂ ಆಗದು; ಉಳಿದವರ ಮೇಲಂತೂ ಕೇಳಲೇ ಬೇಡ. ಆ ತಪ್ಪು ಹಾದಿಯಿಂದ ಉಪವಾಸಿ ದಂಪತಿಗಳು ಪರಾವೃತ್ತರಾಗಬೇಕು. "ಅವರಿಗೆ ನಾನು ಸೂಚಿಸಿದ ದಾರಿಯನ್ನು ಅವರು ಅವಲಂಬಿಸಿದರೆ, ಅಂದರೆ ಮುಸ್ಲಿಂ ಬಂಧುಭಗಿನಿಯರಿಂದ ಬೇರಾಗದೆ ಎಲ್ಲರೂ ಒಂದೇ ಎಂಬಂತೆ ಆಚರಿಸಿದರೆ ಮತ್ತು ಹಿಂದೀ ಒಕ್ಕೂಟದಲ್ಲಿ ಎಲ್ಲರೂ ಅವರ ಮೇಲ್ಪಂಕ್ತಿಯನ್ನು ಅನುಸರಿಸಿದರೆ, ಆಗ ಪಾಕಿಸ್ತಾನ ಇದ್ದೂ ಇಲ್ಲದಂತಾದೀತು" ಎಂದು ಗಾಂಧೀಜಿ ಉಪದೇಶಿಸಿದರು. "ಮುಸ್ಲಿಮೇತರರ ಹೃದಯಗಳು ಶುದ್ಧವಾಗಿದ್ದರೆ ಭೌಗೋಲಿಕ ವಿಭಜನೆಯಿಂದ ಯಾವ ಕೆಡಕೂ ಆಗಲಾರದು. ಆದರಿಂದ ಈ ದಂಪತಿಗಳು ನಾನು ಹೇಳಿದ ವಿಧಾಯಕ ಕಾರ್ಯದಲ್ಲಿ ತಮ್ಮ ಸತ್ವವನ್ನು ತೊಡಗಿಸಲಿ. ಕಾಲವೇನೋ ನಮಗೆ ಪ್ರತಿಕೂಲವಾಗಿರುವಂತೆ ಕಾಣುತ್ತದೆ. ಆದರೆ ನಮ್ಮ ಶ್ರದ್ಧೆಯ ಪರೀಕ್ಷೆಯಿದೆಂದು ತಿಳಿದು ಕೊಳ್ಳೋಣ."

ದಂಪತಿಗಳು ಇದಕ್ಕೆ ಉತ್ತರ ಬರೆದರು. ಮನಸ್ಸಾಕ್ಷಿಯ ಆದೇಶವನ್ನು ಮುರಿಯುವದು ಅವರಿಗೆ ಸಾಧ್ಯವಿಲ್ಲಂತೆ. ಮರುದಿನ ಅವರನ್ನುದ್ದೇಶಿಸಿ ಮಾತಾಡುತ್ತ, ಮನಸ್ಸಾಕ್ಷಿಯೇನೋ ಎಲ್ಲರಲ್ಲಿಯೂ ಇದ್ದೇ ಇರುತ್ತದೆ, ಆದರೂ ಅದು ಎಲ್ಲರಲ್ಲಿಯೂ ಪರಿಪೂರ್ಣ ಜಾಗ್ರದವಸ್ಥೆಯನ್ನು ಮುಟ್ಟಿರುತ್ತದೆನ್ನ ಬರುವದಿಲ್ಲವೆಂದು ಗಾಂಧೀಜಿ ಪ್ರತಿಪಾದಿಸಿದರು. ಕಳ್ಳನೊಬ್ಬನು ಕದಿಯುವಾಗ ತನ್ನ ಮನಸ್ಸಾಕ್ಷಿಗೆ ವಿಧೇಯನಾಗಿ ವರ್ತಿಸಿದೆನೆಂದರೆ ಅದು ನ್ಯಾಯವಾದೀತೆ? ಪರಸ್ಪರ ಹತ್ಯಾಕಾಂಡದಲ್ಲಿಯೂ ನಿರಪರಾಧಿ ಮಕ್ಕಳ ಕೊಲೆಯಲ್ಲಿಯೂ ಮಗ್ನವಾದ ಹಿಂದೂ ಮತ್ತು ಮುಸ್ಲಿಂ ಜನಜಂಗುಳಿಗಳು ಮನಸ್ಸಾಕ್ಷಿಯ ಆದೇಶವನ್ನು ನಡೆಸುತ್ತಿರುವದಾಗಿ ಸಮರ್ಥಿಸಿಕೊಳ್ಳಬಲ್ಲವೆ?

ಉಪವಾಸ ಶಾಸ್ತ್ರದಲ್ಲಿ ಹಿಂದುಸ್ತಾನದಲ್ಲಿ ಬೇರಾರಿಗಿಂತ ತಮಗೆ ಹೆಚ್ಚು ಜ್ಞಾನವಿದೆಯೆಂದೂ ಅವರು ಹೇಳಿಕೊಂಡರು. ಅವರಿಂದಲೇ ಉಪವಾಸವನ್ನು ಕೈಕೊಂಡವರಲ್ಲಿ ಹೆಚ್ಚು ಕಡಿಮೆ ಎಲ್ಲರೂ ತಮ್ಮ ಸೂಚನೆಯನ್ನು ಮನ್ನಿಸುತ್ತಾರೆ. ಇದಕ್ಕೆ ಮೊನ್ನೆ ಮೊನ್ನೆಯ ಉದಾಹರಣೆಯೆಂದರೆ ಕೌಶಾಂಬೀಜಿಯವರು. ಅವರು ತಮ್ಮ (ಗಾಂಧೀಜಿಯ) ಸಲಹೆಯಂತೆ ಉಪವಾಸವನ್ನು ತ್ಯಜಿಸಿದರು. ತಮ್ಮ ಎಣಿಕೆಯಲ್ಲಿ ಈ ದಂಪತಿಗಳು ಉಪವಾಸದ ಫಲವನ್ನು ಹಿಡಿದುದು ತಪ್ಪು. ಅವರು ಅದನ್ನು ಬಿಟ್ಟುಕೊಡಬೇಕು. ಅವರಿಬ್ಬರೂ ಎಳೆಯ ಅನನುಭವಿ ಜನರು. ಉಪವಾಸದ ಜ್ಞಾನ ತಂತ್ರಗಳಲ್ಲಿಯೇ ಪಳಗಿ ಪಳಗಿದವನ ಉಪದೇಶಕ್ಕೆ ಅವರು ಕಿವಿಗೊಡಬೇಕೆಂದು ಗಾಂಧೀಜಿ ಬಿನ್ನವಿಸಿಕೊಂಡರು. "ನಿಜವಾಗಿ ನಿಮ್ಮ ಮನಸ್ಸಾಕ್ಷಿಯು ಸುಪ್ತಾವಸ್ಥೆಯಲ್ಲಿರಬೇಕು. ಶಾಸ್ತ್ರಗಳನ್ನು ಉರು ಪಾಠ ಮಾಡಿ ಕಲಿಯುವದರಿಂದ ಪ್ರಯೋಜನವಿಲ್ಲ. ಓದಿದ್ದನ್ನು ಅರಗಿಸಿಕೊಂಡರೆ ಮಾತ್ರ ಮನುಷ್ಯನು ಅವುಗಳನ್ನು ಅನುಸರಿಸಬಲ್ಲನು. ಆಗಲೇ ಅವನ ಜೀವನ ಎಚ್ಚೆತ್ತಂತಾಯಿತು."

ಗಾಂಧೀಜಿಯ ಉಪದೇಶ ದಂಪತಿಗಳ ಮೇಲೆ ಬಯಸಿದ ಪರಿಣಾಮವನ್ನು ಮಾಡಿತು. ಅಂದು ರಾತ್ರಿ ನಮ್ಮ ವಸತಿಯಲ್ಲಿ ಅವರು ತುಸು ಹಾಲು ಹಣ್ಣು ತೆಗೆದುಕೊಂಡರು. ಆ ಮೇಲೆ ಅವರು ಗಾಂಧೀಜಿಗೆ ಪತ್ರ ಬರೆದು ಅವರು ಸೂಚಿಸಿದ ವಿಧಾಯಕ ಪ್ರಯತ್ನಕ್ಕೆ ಜೀವನವನ್ನು ಮೀಸಲಾಗಿಡುವದಾಗಿ ತಿಳಿಸಿದರು.

ಭ್ರಾತೃಭಾವನೆಯಿಂದ ವಿಭಜನೆ

ವಿಭಜನೆಯನ್ನು ಭ್ರಾತೃಭಾವನೆಯಿಂದಲೇ ನೆರವೇರಿಸುವದಾಗಿ ವಿಭಜನ ಸಮಿತಿಗಳ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಸದಸ್ಯರು ವಾಯಿಸರಾಯರ ಮುಂದೆ ಒಪ್ಪಿಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. "ಮಾನ್ಯ ವಾಯಿಸರಾಯರು ಸಾಧಿಸಿದ್ದು ಪುಣ್ಯದ ಕೆಲಸವೇ ಸೈ," ಎಂದರು ಗಾಂಧೀಜಿ. "ಆದರೆ ಮಾತಿನ ಮುಂದಿಗೆಯಿಂದ ಹೊಟ್ಟೆ ತಂಪಾಗುವದಿಲ್ಲೆಂಬುದು ನನಗೆ ಗೊತ್ತು. ಮಾತಿನ ಹಿಂದೆ ಕೃತಿಗಳ ಮಾಲೆಯೊಂದು ಬಂದರೆ ಆಗ ನಾನು ಸಂತೋಷದಿಂದ ಕುಣಿದೇನು. ಬಾಯ್ಬಡಕ ಮಾತು ಬರೆಹಗಳಿಂದ ಜಗತ್ತು ಬೇಸತ್ತು ಹೋಗಿದೆ. ಇವೆರಡೂ ಅತಿರೇಕಕ್ಕೆ ಮುಟ್ಟಿಬಿಟ್ಟಿವೆ. ಹುಣುಚು ರೊಟ್ಟಿಯಾದರೂ ಅಷ್ಟಿಷ್ಟು ಹಸಿವು ಹಿಂಗಿಸುತ್ತದಲ್ಲದೆ ಸವಿಮಾತುಗಳಲ್ಲ."

ಮತ್ತೆ ತಿರ್ವಾಂಕೂರು

ಅ. ಭಾ. ಕಾಂಗ್ರೆಸ್ಸಿನ ತಿರ್ವಾಂಕೂರು ಪ್ರತಿನಿಧಿಗಳು ಮೌನದ ದಿನ ಗಾಂಧೀಜಿಯನ್ನು ಕಂಡರು. ತಿರ್ವಾಂಕೂರಿನಲ್ಲಿ ಸಂಸ್ಥಾನ ಕಾಂಗ್ರೆಸ್ಸಿನ ಮೇಲೆ ನಡೆದ ದಬ್ಬಾಳಿಕೆಯ ಬಗ್ಗೆ ಗಾಂಧೀಜಿ ನುಡಿದುದರಲ್ಲಿ ಅತಿಶಯೋಕ್ತಿ ಏನೂ ಇದ್ದಿಲ್ಲವೆಂದು ಅವರು ಹೇಳಿದರು. ಮುನ್ನಾದಿನ ಸಭೆಗಳು ಜರಗಿದ್ದವು, ಲಾಠಿ ಹೊಡೆತಗಳು ಬಿದ್ದಿದ್ದವು, ೩೫ ಜನರ ಬಂಧನವೂ ಆಗಿತ್ತು. ಅಭಿಪ್ರಾಯವನ್ನು ಪ್ರಕಟಿಸುವ ಸ್ವಾತಂತ್ರ್ಯದ ಬಾಯಿಗೆ ಬೀಗ ಹಾಕಲಾಗಿದೆ. ಅದೇನೇ ಇರಲಿ, ಸಂಸ್ಥಾನಗಳ ಸ್ವಾತಂತ್ರ್ಯ ಘೋಷಣೆಗೆ ಸ್ವತಂತ್ರ ಹಿಂದುಸ್ತಾನದಲ್ಲಿ ಬೆಲೆಯಿಲ್ಲವೆಂದು ಗಾಂಧೀಜಿ ಅಭಿಪ್ರಾಯ ಪಟ್ಟರು. ಅಂಥ ಘೋಷಣೆಯೂ ಹಿಂದುಸ್ತಾನದ ಸ್ವತಂತ್ರ ಪ್ರಜಾಕೋಟಿಯ ಮೇಲೆ ಯುದ್ಧವನ್ನು ಸಾರುವದೂ ಒಂದೇ ಎನ್ನಬೇಕು. ಅದರಲ್ಲಿಯೂ ವಿಶಿಷ್ಟ ಮಹಾರಾಜರಿಗೆ ಪ್ರಜೆಗಳ ಬೆಂಬಲವಿಲ್ಲದಿರುವಾಗ ಅದು ಕಲ್ಪನಾತೀತವಾದ ಕೃತಿಯೇ ಸರಿ. ಅಂಥ ಘೋಷಣೆಯಲ್ಲಿ ಅಡಕವಾದ ಉದ್ಧಟತನ ಆಶ್ಚರ್ಯಜನಕವಾದುದು. ನರೇಂದ್ರರ ಕೃತಿಗಳಿಗೆ ಬ್ರಿಟಿಶ ಶಕ್ತಿಯ ಬೆಂಬಲವಿದ್ದಾಗಲೇ ಇದು ಸಾಧ್ಯ. "ಸ್ಥಿತಿಗತಿ ಈಗ ಬದಲಾಗಿದೆಯೆಂದು ನನ್ನ ಕಲ್ಪನೆ" ಎಂದರು ಗಾಂಧೀಜಿ. "ಸ್ವತಂತ್ರರಾಗುವವರು ಯಾರು? ನರೇಂದ್ರರೇ ನರರೇ? ಸರ್ ಸಿ. ಪಿ. ಯವರಿಗೂ ಅವರಂಥ ಎಲ್ಲ ದಿವಾಣರಿಗೂ ನನ್ನ ಉಪದೇಶವಿಷ್ಟೆ: ನೀವು ನಿಮ್ಮ ಅರಸರ ಜೋಳದ ಪಾಳಿಯನ್ನು ಬಗೆಯುವವರಾದರೆ ಘಟನಾ ಸಮಿತಿಯನ್ನು ಸೇರುವಂತೆ ಅವರನ್ನು ಪ್ರೇರೇಪಿಸಿರಿ."

"ಪೆಟ್ಟಿಗೆ ಪೆಟ್ಟು" ನ ಸಿದ್ಧಾಂತ

ಮೌನದಿನ ಬಾಬು ಪುರುಷೋತ್ತಮದಾಸ ಟಂಡನ್ನರು ಗಾಂಧೀಜಿಯನ್ನು ಕಂಡರು. ಜನರಿಗೆ ಶಸ್ತ್ರಾಸ್ತ್ರಗಳಲ್ಲಿ ಶಿಕ್ಷಣ ಕೊಡಬೇಕೆಂಬ ಹಂಬಲ ತಮಗಿರುವದೇನೋ ನಿಜವಾದರೂ ಪೆಟ್ಟಿಗೆ ಪೆಟ್ಟು ಕೊಡುವ ಸಿದ್ಧಾಂತದಲ್ಲಿ ಮಾತ್ರ ತಮಗೆ ವಿಶ್ವಾಸವಿಲ್ಲವೆಂದು ಅವರು ಹೇಳಿದರು. ಅದೊಂದು ಪಾಮರ ಸಿದ್ಧಾಂತವೆಂದು ಅವರು ಭಾವಿಸುತ್ತಾರೆ. ಈ ಸ್ಪಷ್ಟೋಕ್ತಿಯಿಂದ ಗಾಂಧೀಜಿಗೆ ಸಂತೋಷವಾಯಿತು. ಟಂಡನ್ನರು ಪೆಟ್ಟಿಗೆ ಪೆಟ್ಟುಕೊಡುವ ಸಿದ್ಧಾಂತದ ವಿಷಯಕ್ಕೂ ಶಸ್ತ್ರಾಸ್ತ್ರಗಳ ಉಪಯೋಗದ ಇತಿಮಿತಿಗಳ ಬಗ್ಗೆಯೂ ಬಹಿರಂಗ ಹೇಳಿಕೆ ಕೊಡಬೇಕೆಂದು ಅವರು ಸೂಚಿಸಿದರು.

ಅದೇ ವಿಷಯದಲ್ಲಿ ಕೆಲ ನಿರಾಶ್ರಿತರಿಗೂ ಗಾಂಧೀಜಿ ಹೇಳಿದ್ದು: "ಮುಸ್ಲಿಮರು ನಿಮ್ಮ ಬಂಧುಗಳು. ಕೆಲವರು ಪಶುವೃತ್ತಿಗಿಳಿದಾಕ್ಷಣ ಎಲ್ಲರೂ ಹಾಗೆ ಮಾಡಬೇಕೆಂದಾಗಲಿಲ್ಲ. ಮುಸ್ಲಿಮರು ನಿಮ್ಮನ್ನು ಕೊಲ್ಲುತ್ತಲೇ ಹೋಗಲಾರರು. ಕೊಲೆಯಿಂದಲೇ ಯಾರೂ ಬದುಕಲಾರರು. ನನ್ನ ಹೃದಯದಲ್ಲಿ ದ್ವೇಷ ಹುಟ್ಟದೆ ಹೋದರೆ ಮುಸ್ಲಿಮನೊಬ್ಬನು ನನ್ನನ್ನು ಕೊಂದು ಏನು ಸಾಧಿಸಿದಂತಾಯಿತು?"

ರಾಷ್ಟ್ರೀಯ ಮುಸ್ಲಿಮರು

ಈ ವಾರ ಖ್ವಾಜಾ ಸಾಹೇಬ ಅಬ್ದುಲ ಮಜೀದರು ಗಾಂಧೀಜಿಯನ್ನು ಕಾಣಬಂದಿದ್ದರು. ಕಾಂಗ್ರೆಸ್ಸು ರಾಷ್ಟ್ರೀಯ ಮುಸ್ಲಿಮರನ್ನು ಕೈಬಿಡಲಾರದೆಂದು ಅವರು ಅಪೇಕ್ಷಿಸಿದರು. ತಾವು ಒಳ್ಳೆಯ ಹಿಂದುವಾಗಿರುವದರಿಂದ ಅದೇ ಕಾಲಕ್ಕೆ ಒಳ್ಳೆಯ ಮುಸ್ಲಿಮನೂ ಪಾರ್ಸಿಯೂ ಮೊದಲಾಗಿ ಆಗಿರುವೆನೆಂದು ಹೇಳಿಕೊಳ್ಳುತ್ತಿರುವ ಗಾಂಧೀಜಿಯಂತೆ ಖ್ವಾಜಾ ಸಾಹೇಬರೂ ತಾವು ಒಳ್ಳೆಯ ಮುಸ್ಲಿಮರಾಗಿರುವದರಿಂದ ಒಳ್ಳೆಯ ಹಿಂದುವೂ ಪಾರ್ಸಿಯೂ ಆಗಿರುವೆನೆಂದು ಹೇಳುತ್ತಾರೆ. "ಇದರ ಅರ್ಥವಿಷ್ಟೆ," ಗಾಂಧೀಜಿ ನುಡಿದರು. "ಎಲ್ಲ ಧರ್ಮಗಳ ದೈವಭೀರುಗಳೂ ಸಜ್ಜನರಾಗಿಯೂ ಸಮಾನರಾಗಿಯೂ ಇದ್ದಾರೆ. ಬೇರೆ ಬೇರೆ ಧರ್ಮದ ಅನುಯಾಯಿಗಳು ಮಾತ್ರವೇ ಪರಸ್ಪರ ಹೋರಾಡಿ ತಮ್ಮ ತಮ್ಮ ಧರ್ಮವನ್ನೇ ಅಲ್ಲಗಳೆಯುವರು. ಹಿಂದೀ ಒಕ್ಕೂಟದಲ್ಲಿರುವ ಎಲ್ಲರೂ ಸ್ವಧರ್ಮಕ್ಕೆ ಹಿರಿಮೆ ಬರುವಂತೆ ವರ್ತಿಸಿಯೂ ಒಂದೇ ಭೂಮಿಯ ಮಕ್ಕಳೆಂದು ಹೇಳಿಕೊಳ್ಳಲು ಹೆಮ್ಮೆಪಡಲೆಂದೂ ಶಾಸನದ ಮುಂದೆ ಸಮಾನತೆ ಅವರೆಲ್ಲರಿಗೂ ದೊರೆಕಲೆಂದೂ ನಾನು ಆಶಿಸುವೆ. ರಾಷ್ಟ್ರೀಯತ್ವದ ಅಳತೆಗೋಲು ಧರ್ಮವಲ್ಲ. ಧರ್ಮವೆಂಬುದು ಮನುಷ್ಯನ ಸ್ವಂತ ಬದುಕು, ಅವನಿಗೂ ಅವನು ನಂಬಿದ ಪರಮಾತ್ಮನಿಗೂ ಇರುವ ಸಂಬಂಧದ ಕುರುಹು. ರಾಷ್ಟ್ರೀಯತ್ವದ ಮಾತು ಬಂದರೆ ಎಲ್ಲರೂ ಮೊಟ್ಟಮೊದಲು ಹಿಂದೀಯರು, ಧರ್ಮದ ಮಾತು ಕೊನೆಗೆ."

ಹಿಂದೀ ಒಕ್ಕೂಟದಲ್ಲಿ ರಾಷ್ಟ್ರೀಯ ಮುಸ್ಲಿಮರ ಗತಿ ಏನಾಗುವದೋ ಎಂದು ಭಯವನ್ನು ವ್ಯಕ್ತಗೊಳಿಸಿದ್ದ ಇನ್ನೊಬ್ಬ ಪತ್ರಕಾರನಿಗೆ ಉತ್ತರಕೊಡುತ್ತ, ಪಾಕಿಸ್ತಾನ ಪ್ರಾಂತಗಳ ಕ್ಲೇಶ ಆಗಲಿ ಅದನ್ನು ಗಮನಿಸದೆ ಒಕ್ಕೂಟ ಪ್ರಾಂತಗಳಲ್ಲಿರುವ ಮುಸ್ಲಿಂ ಬಂಧುಗಳನ್ನು ನ್ಯಾಯವೂ ಯೋಗ್ಯವೂ ಆದ ರೀತಿಯಿಂದ ನಡೆಸಿಕೊಳ್ಳಲಾಗುವದೆಂದು ಹಿಂದೀ ಒಕ್ಕೂಟವು ಕೃತಿಯಿಂದ ತೋರಿಸಿ ಕೊಡಬೇಕಾಗುವದೆಂದು ಗಾಂಧೀಜಿ ಹೇಳಿದರು. ಪಾಕಿಸ್ತಾನದ ಕಾರಣದಿಂದ ತಾವು ಮುಸ್ಲಿಮರಲ್ಲೂ ಇತರ ಅಲ್ಪಸಂಖ್ಯಾತರಲ್ಲೂ ವರ್ತಿಸುವ ಬಗೆ ಬೇರೆಯಾಗಕೂಡದು. ಇದಕ್ಕೂ ವಿದೇಶಿ ಆಳರಸರು ನಮ್ಮ ನಡುವೆ ತಂದು ನಟ್ಟ ಪ್ರತ್ಯೇಕ ಮತದಾನ ಮೊದಲಾದ ವಿಷಬೀಜಗಳಿಗೂ ಸಂಬಂಧವಿಲ್ಲ.

ಪ್ರಾರ್ಥನಾ ಬಲ

೧೪ ನೇ ತಾರೀಕು ಗಾಂಧೀಜಿಯೂ ಬಾದಶಹಾ ಖಾನರೂ ಕಾಯಿದೆ ಅಝಮ ಜಿನ್ನಾರನ್ನು ವಾಯಿಸರಾಯ ಭವನದಲ್ಲಿ ಭೆಟ್ಟಿಯಾದರು. ಆಗ ಮಾಡಿದ ವ್ಯವಸ್ಥೆಯಂತೆ ಮುಂದೆ ಬಾದಶಹಾ ಖಾನರು ಕಾಯಿದೆ ಅಝಮರನ್ನು ಅವರ ಮನೆಯಲ್ಲಿ ಕಂಡರು. ಬಾದಶಹಾ ಖಾನರು ಗಡಿನಾಡು ಪ್ರಾಂತದಲ್ಲಿ ರಕ್ತಪಾತವನ್ನು ತಡೆಯುವ ಉಪಾಯ ಹುಡುಕುವಲ್ಲಿ ತಮ್ಮ ಎಲ್ಲ ಶಕ್ತಿಯನ್ನೂ ವ್ಯಯಿಸುತಿದ್ದರು. ಬಾದಶಹಾ ಖಾನರ ಈ ಧ್ಯೇಯ ಯಶಸ್ವಿಯಾಗಲೆಂದು ಎಲ್ಲರೂ ಪ್ರಾರ್ಥಿಸಿರೆಂದು ಗಾಂಧೀಜಿ ನೆರೆದವರನ್ನು ಕೇಳಿಕೊಂಡರು. ಆದರೆ ಈ ಪ್ರಾರ್ಥನೆಗೆ ಬಯಸಿದ ಫಲ ದೊರೆಯದೆ ಹೋದರೆ ನಿರಾಶರಾಗಬಾರದೆಂದೂ ಅವರು ಎಚ್ಚರಿಸದಿರಲಿಲ್ಲ. ಪರಮಾತ್ಮನನ್ನು ಆ ಭಾವನೆಯಿಂದ ಅಳೆಯುವದು ತಪ್ಪು. ಪರಮಾತ್ಮನು ನಮ್ಮ ಪ್ರಾರ್ಥನೆಗಳಿಗೆ ತನ್ನದೇ ಆದ ರೀತಿಯಿಂದ ಫಲಗಳನ್ನು ಕೊಡುವನಲ್ಲದೆ, ನಮ್ಮಗಳ ರೀತಿಯಿಂದಲ್ಲ. ಆತನ ರೀತಿ ಮರ್ತ್ಯರಾದ ನಮ್ಮ ರೀತಿಗಿಂತ ಬೇರೆಯಾದುದು. ಆದರಿಂದ ಅದು ಊಹಾತೀತ. ಪ್ರಾರ್ಥನೆಗೆ ಶ್ರದ್ಧೆಯೇ ಆಧಾರ. ಯಾವ ಪ್ರಾರ್ಥನೆಯೂ ವ್ಯರ್ಥವಾಗದು. ಪ್ರಾರ್ಥನೆಯೆಂಬುದು ಬೇರಾವ ಕರ್ಮದಂತೆಯೆ ಇರುವದು. ನಮಗೆ ಗೋಚರವಾಗಿಯಾಗಲಿ ಅಗೋಚರವಾಗಿಯಾಗಲಿ ಅದು ಫಲ ಕೊಟ್ಟೇ ಕೊಡುವದು. ಪ್ರಾರ್ಥನೆಯ ಫಲ ಬೇರಾವ ಕರ್ಮದ ಫಲಕ್ಕಿಂತಲೂ ಪ್ರಬಲವಾಗಿರುವದು.

ಗಡಿನಾಡಿನ ಸಮಸ್ಯೆ

ಪಠಾಣಿಸ್ತಾನವೆಂಬ ಸ್ವತಂತ್ರ ಗಡಿನಾಡಿನ ಚಳವಳಿಯನ್ನು ಪ್ರಸ್ತಾವಿಸುತ್ತ, ಆ ಚಳವಳಿಗೆ ಬಲವಾದ ತಳಹದಿಯಿರುವದರಿಂದ ಅದು ಸ್ಥಾಯಿಯಾಗಿಯೆ ಉಳಿಯಲಿದೆಯೆಂದರು. ಅದು ಹಿಂದೀ ವಿರೋಧಿ ಚಳವಳಿಯಾಗಿದ್ದರೆ ಕಿಡಿಗೇಡಿತನದ್ದೇ ಸೈ. ಬದಲಿಗೆ ಪಠಾಣ ಜೀವನ ಸಂಸ್ಕೃತಿಗಳ ರಕ್ಷಣೆಯೆ ತಾವು ನಂಬಿದಂತೆ ಅದರ ಉದ್ದೇಶವಾಗಿದ್ದರೆ ಅದು ಪ್ರೋತ್ಸಾಹಕ್ಕೆ ಯೋಗ್ಯವಾದುದು. ಭೌಗೋಲಿಕ ದೃಷ್ಟಿಯಿಂದ ಅದು ಹಿಂದುಸ್ತಾನದ ಒಂದು ಅಂಶ; ಸಂಖ್ಯಾದೃಷ್ಟಿಯಿಂದಲೂ ಹಿಂದುಸ್ತಾನದ ಕೋಟಿಕೋಟಿಗಳೊಡನೆ ಹೋಲಿಸಿದರೆ ಪಠಾಣರ ಸಂಖ್ಯೆ ಬಲು ಕಡಿಮೆ. ಆದರೆ ಅವರ ಯುದ್ಧಪ್ರಾವೀಣ್ಯವೂ ಹಿಂದುಸ್ತಾನ ನಕಾಶೆಯಲ್ಲಿ ಅವರಿಗಿರುವ ಸ್ಥಾನವೂ ಅವರಿಗೆ ಅವರದೇ ಆದ ಒಂದು ಮಹತ್ವವನ್ನು ಗಳಿಸಿಕೊಟ್ಟಿದೆ. ಗಡಿನಾಡು ಕಾಂಗ್ರೆಸ್ ಪ್ರಾಂತ. ಕಾಂಗ್ರೆಸ್ಸು ವನವಾಸದಲ್ಲಿದ್ದಾಗಲೂ ಅದು ಹಾಗೆಯೆ ಇತ್ತು, ಇಂದು ಅದು ಅಧಿಕಾರಸ್ಥಾನದಲ್ಲಿರುವಾಗಲೂ ಹಾಗೆಯೆ ಇದೆ. ಅದಕ್ಕೆ ಘಟನಾ ಸಮಿತಿಯಲ್ಲಿಯೂ ಪ್ರಾತಿನಿಧ್ಯವುಂಟು. ಆದರೆ ಅದಕ್ಕಿಂದು ಸೂಕ್ಷ್ಮವಾದ ಪರಿಸ್ಥಿತಿಯನ್ನು ಎದುರಿಸುವ ಕಾಲ ಬಂದಿದೆ. ಬೇಗನೆ ಅಲ್ಲಿ ಮತಗಣನೆಯಾಗಲಿದೆ. ಕಾಂಗ್ರೆಸ್ಸೂ ಲೀಗೂ ಆ ವಿಷಯದಲ್ಲಿ ವಾಗ್ಬದ್ಧವಾಗಿವೆ. ಆದರೆ ಮುದ್ದೆಯನ್ನು ಬದಲಿಸುವದು ಯಾವುದೇ ಒಂದು ಪಕ್ಷದ ಕೈಯಲ್ಲಿಲ್ಲ. ಪಾಕಿಸ್ತಾನ ಬೇಕೊ ಹಿಂದುಸ್ತಾನವೋ ಎಂಬುದೀಗ ಆ ಮತಗಣನೆಯ ಪ್ರಶ್ನೆ. ನಮ್ಮ ಮುಂದೆ ಜರಗಿದ್ದೆಲ್ಲದರ ದೃಷ್ಟಿಯಲ್ಲಿ ಈ ಪ್ರಶ್ನೆಗೆ ದುಷ್ಟ ಅರ್ಥವುಂಟಾಗಿದೆ. ಪಠಾಣರು ಹಿಂದುಗಳ ಸಂಗಡ ಉಳಿಯುವರೋ ಮುಸ್ಲಿಮರೊಡನೆಯೊ? ಕಾಂಗ್ರೆಸ್ಸು ಹಿಂದೂ ಸಂಸ್ಥೆಯಲ್ಲ. ಅದು ಹಿಂದೆಂದೂ ಹಿಂದೂ ಸಂಸ್ಥೆಯಾಗಿದ್ದಿಲ್ಲ ಮುಂದಾದರೂ ಆಗಲಿಕ್ಕಿಲ್ಲೆಂದು ಗಾಂಧೀಜಿ ಹಾರೈಸಿದರು. ಆದರೆ ದಿನದಿನಕ್ಕೆ ಹೆಚ್ಚುತಿರುವ ಗೊಂದಲದ ನಡುವೆ ಪಠಾಣನ ಬುದ್ಧಿಗೆ ಇದೆಲ್ಲ ಹೇಗೆ ತಿಳಿಯಬೇಕು? ಆದರಿಂದ ಕಾಂಗ್ರೆಸ್ಸು ತನ್ನ ನಿಲುಮೆಯನ್ನು ಸ್ಪಷ್ಟಗೊಳಿಸಬೇಕೆಂದು ಗಾಂಧೀಜಿ ಸೂಚಿಸಿದರು. ಅದೇ ಪ್ರಕಾರ ಲೀಗಾದರೂ ಮಾಡಬೇಕು. ಇಬ್ಬರೂ ಪಠಾಣ ಭಾವನೆಗಳಿಗೆ ಮಾನ ಕೊಟ್ಟು ಆಂತರಿಕ ಆಡಳಿತೆಯ ಬಗ್ಗೆ ತಮ್ಮ ರಾಜ್ಯಘಟನೆಯನ್ನು ತಾವೇ ರಚಿಸಿಕೊಳ್ಳುವ ಅವಕಾಶ ಕೊಡಲಿ. ಅದು ಪಠಾಣರ ಐಕ್ಯಕ್ಕೆ ಸಾಧಕವಾದೀತು, ಆಂತರಿಕ ತಿಕ್ಕಾಟವನ್ನು ತಡೆದೀತು, ಪುಶ್ತು ಸಂಸ್ಕೃತಿ ಮತ್ತು ಭಾಷೆಗಳನ್ನು ಉಳಿಸೀತು. ಇಷ್ಟು ಮಾಡಲು ಅವರಿಗೆ ಅವಕಾಶ ಕೊಟ್ಟರೆ ಪಾಕಿಸ್ತಾನದಲ್ಲಾಗಲಿ ಹಿಂದೀ ಒಕ್ಕೂಟದಲ್ಲಾಗಲಿ ಹೆಚ್ಚು ಒಗ್ಗಟ್ಟಿನಿಂದ ಪ್ರವೇಶಿಸಲು ಅವರಿಗೆ ಸಾಧ್ಯವಾಗುವದು. ಮತಗಣನೆಯಾಗಲಿ ಆಗದಿರಲಿ ಇದು ಅವಶ್ಯವೆಂದು ಗಾಂಧೀಜಿಯ ಮತ. ಅಕಾಲದಲ್ಲಿ ಮತಗಣನೆ ಮಾಡುವದೆಂದರೆ ಕತ್ತಲೆಯಲ್ಲಿ ಹಾರಿಕೊಂಡಂತೆ.

ಹೊಸದಿಲ್ಲಿ —ಸುಶೀಲಾ ನಯ್ಯರ
೨೨—೬—೧೯೪೭

ಉಪಾಸಕ

ಬಾದಶಹಖಾನರು ಹೆಚ್ಚು ಮಾತನಾಡುವವರಲ್ಲ. ಗಾಂಧಿಯವರ ಜೊತೆಗೆ ನಡೆಯುತ್ತ ಇಲ್ಲವೆ ಮಾತನಾಡುತ್ತ ಹೋಗುವ ಈ ಕುಲಸಹಜವಾದ ಎತ್ತರದ ಮನುಷ್ಯನನ್ನು ನೋಡುವುದರಲ್ಲಿ ಯಾವಾಗಲೂ ಒಂದು ಸಂತೋಷವಿದೆ.

ಇತ್ತೀಚೆಗೆ ಮತಗಣನೆಯ ಪ್ರಶ್ನೆಯು ಬಾದಶಹ ಖಾನರಿಗೆ ಬಹಳ ಚಿಂತೆಯನ್ನುಂಟು ಮಾಡಿದೆ. "ನಾನೊಬ್ಬ ಶಾಂತಿಪ್ರಿಯ. ಪಠಾಣ ಪಠಾಣರಲ್ಲಿ ಯುದ್ಧವಾಗುವುದೆಂಬ ವಿಚಾರವನ್ನು ನಾನು ಸಹಿಸಲಾರೆ" ಇಷ್ಟು ವರ್ಷಗಳ ವರೆಗೆ ಐಕ್ಯಭಾವದಿಂದ ತಾವು ಸೇವೆಸಲ್ಲಿಸುತ್ತಿದ್ದವರೊಳಗೆ ರಕ್ತಪಾತವಾಗದಂತೆ ಮಾಡುವುದು ಹೇಗೆಂಬುದೇ ಇಂದು ಅವರ ಮನಸ್ಸನ್ನು ಆವರಿಸಿದ ವಿಚಾರ.

ನಿರ್ಗಮನಕ್ಕೆ ಮೊದಲು ನನಗೆ ನಮಿಸಿ ಅವರು "ನಮಗಾಗಿ ದೇವರನ್ನು ಪ್ರಾರ್ಥಿಸಿರಿ. ಬಹಳ ಭಯಂಕರ ಕಾಲವನ್ನು ನಾವು ಕಾಣಲಿದ್ದೇವೆ"--ಎಂದು ಹೇಳಿದರು. ಧರ್ಮಿಷ್ಠರಲ್ಲವೆಂದರೆ ಬಾದಶಹಖಾನರಿಲ್ಲವೇ ಇಲ್ಲವೆನ್ನಬೇಕು; ಅವರು ಪ್ರಾರ್ಥನೆಯ ಪರಿಣಾಮಕಾರಿತ್ವದಲ್ಲಿ ಶ್ರದ್ಧೆಯುಳ್ಳ ಜನ. ಗಾಬರಿಗೊಳಗಾದ ಅವರನ್ನು ನೋಡುವುದು ದುಃಖಕರವಾಗಿತ್ತು. ಆದರೆ ಕುಲಸಹಜವಾದ ಅಲ್ಲದೆ ಗಡಿನಾಡಿನ ಐಕ್ಯದಲ್ಲಿ ಅವರಿಗಿದ್ದ ಶ್ರದ್ಧೆಯಿಂದ ಉದ್ಭವಿಸಿದ ಧೈರ್ಯವನ್ನು ಯಾರೂ ಅವರಲ್ಲಿ ಕಾಣಬಹುದಾಗಿತ್ತು. ಜಿನ್ನಾಸಾಹೇಬರ ಮನೆಗೆ ಹೋದುದಕ್ಕಾಗಿ ಬಹಳ ಜನರು ಅವರನ್ನು ಟೀಕಿಸಿದರು. ಗರ್ವ ಮತ್ತು ಹಿಂಸೆ ಜೊತೆಜೊತೆಗೇ ಹೋಗುವಂತೆ ದೈನ್ಯವು ಅಹಿಂಸಾಚಾರನಿಷ್ಠನ ಮುಖ್ಯಗುಣ. ಬಹಳ ಪಠಾಣರ ಜೀವ ಉಳಿಯುವಂತಿದ್ದರೆ, ಗಡಿನಾಡಿನ ಐಕ್ಯಭಂಗ ಬರದಂತಾಗುವುದಾದರೆ ಜಿನ್ನಾ ಸಾಹೇಬರ ಮನೆಗೆ ಹೋದ ಮಾತ್ರದಿಂದ ಏನು ಕೆಟ್ಟುಹೋಯಿತು? ತಾವು ಸೋತೇವೆಂಬ ಭಯವು ಅವರನ್ನು ಅಲ್ಲಿಗೊಯ್ದುದಲ್ಲ. ಬಾದಶಹಖಾನರು ಅವರ ಅನುಯಾಯಿಗಳ ಅನಭಿಷಿಕ್ತರಾಜರು; ಏಕೆಂದರೆ ಅವರು ಆ ಜನರ ಸೇವಕರು ಮತ್ತು ಸೇವೆಯ ಕಿರೀಟವನ್ನು ಹೊರಗಣ ಯಾವ ಶಕ್ತಿಯೂ ಕಸಿದುಕೊಂಡು ಹೋಗಲಾರದು.

— ಅಮೃತ ಕೌರ

ಅಮೇರಿಕೆಯಿಂದ

(೭ ನೇ ಪುಟದಿಂದ)

ಹಾರದಿದ್ದರೆ ಇದೊಂದು ನೀತಿನಿಯತ ಜಗತ್ತೇ ಅಲ್ಲವೆಂದು ಹೇಳಬೇಕಾಗುತ್ತದೆ. ಅದುದರಿಂದ ಭೂಮಿಯ ಆಕರ್ಷಣಶಕ್ತಿಯು ಹೇಗೆ ಅನುಲ್ಲಂಘ್ಯವೋ ಹಾಗೇ ದೇವರ ನಿಯಮಗಳಾದರೂ ಅನುಲ್ಲಂಘ್ಯವೆಂಬ ನಮ್ಮ ನಂಬುಗೆಗೆ ಆ ದುಃಖಾನುಭೂತಿಯೇ ಸಾಕ್ಷಿಯೆನಿಸುತ್ತಿದೆ.

"ದೇವರು ನಿಮ್ಮನ್ನು ಆಶೀರ್ವದಿಸಲಿ, ಉಳಿಸಲಿ. ದಯವಿಟ್ಟು ನಿಮ್ಮ ಅಧ್ಯೈರ್ಯವನ್ನು ಪುನರ್ವಿಮರ್ಶಿಸಿ ಭಾರತಕ್ಕಾಗಿಯೂ ವಿಶ್ವ ಜಗತ್ತಿಗಾಗಿಯೂ ಬದುಕಿಕೊಂಡಿರಿ. ರಾಷ್ಟ್ರರಾಷ್ಟ್ರಗಳಲ್ಲಿ ಮತ್ತು ಪಕ್ಷ ಪಕ್ಷಗಳಲ್ಲಿ ರಾಜಕೀಯಾಧಿಕಾರ ವರ್ಗಾಯಿಸಲ್ಪಡುವಾಗ ನಾನು ಕಳೆದ ಕಾಗದದಲ್ಲಿ ಬರೆದಂತೆ ಹಿಂಸಾಚಾರ ನಡೆಯುವುದು ಸಾಮಾನ್ಯವಾದುದು. ೧೭೭೬ ರಲ್ಲಿ ಅಮೇರಿಕೆಯ೧೩ ವಸಾಹತುಗಳು ಬ್ರಿಟನ್ನಿನ ಸಂಬಂಧವನ್ನು ಕಡಿದುಕೊಂಡು ಹೊರಬಿದ್ದಾಗ ನಮ್ಮಲ್ಲೂ ಹೀಗೇ ಕಾಳಗ ಕಲಹಗಳು ನಡೆದವು. ಅದನ್ನು "ಷೇದಂಗೆ"ಯೆಂದು ಕರೆದರು. ಪಾಶ್ಚಾತ್ಯ ಪ್ರಪಂಚದಲ್ಲಿ ಇಂತಹ ಸಂಗತಿಗಳು ನಡೆದ ಬಗ್ಗೆ ಇತಿಹಾಸವು ಪುರಾವೆ ಕೊಡುತ್ತದೆ. ಇಂದು ಭಾರತದಲ್ಲಿ ಪಾಶ್ಚಾತ್ಯ ಭಾವನೆಗಳಿಗೇನೂ ಕಡಿಮೆಯಿಲ್ಲ! ಅವನ್ನೇ ಅದು ಅಚರಿಸುತ್ತದೆ. ಮತ್ತೊಂದು ಯುದ್ಧ ಬಂದೊಡನೆ ಈ ಪಾಶ್ಚಾತ್ಯ ಭಾವನೆಗಳ ಹಾವಳಿ ಇತಿಶ್ರೀಯಾಗುತ್ತದೆಂದೂ ಭಾರತೀಯರು ಆಧ್ಯಾತ್ಮಿಕ ಪಾಶ್ಚಾತ್ಯ ಸಂಸ್ಕೃತಿಯು ಮನುಷ್ಯನನ್ನಲ್ಲಿಯ ತನಕ ಒಯ್ಯುತ್ತದೆಯೆಂಬದನ್ನು ನಿಃಸಂದೇಹವಾಗಿ ತಿಳಿಯುವರೆಂದೂ ನನ್ನ ವಿಶ್ವಾಸ."

ಶ್ರೀ ಗ್ರೆಗ್ಗರು ಎತ್ತಿಕೊಂಡ ಹೊಸದಿಲ್ಲಿಯ ಸುದ್ದಿಯು ಸಂಪೂರ್ಣ ನಿಜವಿರುತ್ತದೆ. ಅಹಿಂಸಾವಾದಿಯಾಗಿರಬೇಕಾದರೆ ಅಗತ್ಯವಾದ ಇಂದ್ರಿಯನಿಗ್ರಹ ಮತ್ತು ಅನಾಸಕ್ತಿಯನ್ನು ಬೇಕಾದಷ್ಟು ಸಾಧಿಸಿಕೊಳ್ಳದುದೇ ನನ್ನ ಆ ನಿರಾಶೆಗೆ ಕಾರಣ. ಒಂದುದಿನ ಅಗತ್ಯವಾದ ಅನಾಸಕ್ತಿಯನ್ನು ನಾನು ಸಾಧಿಸಿಲ್ಲವೆಂಬುದು ನನಗುಂಟಾದ ನಷ್ಟದಿಂದ ತಿಳಿದುಬಂದಿತು. ಸೇವಾಜೀವನನಡೆಸದ ಯಾವನಿಗೂ ಬದುಕುವ ಹಕ್ಕಿಲ್ಲ. ಗೀತೋಕ್ತ ಅನಾಸಕ್ತಿಯನ್ನು ಸಾಧಿಸಿಕೊಳ್ಳದ ಯಾವನೂ ಸಂಪೂರ್ಣ ಸೇವೆಯನ್ನು ಸಲ್ಲಿಸಲಾರನು.

ತಪ್ಪುಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವುದು ಅತ್ಯಾವಶ್ಯಕವಾದುದು. ತಪ್ಪುಗಳಿಂದ ಮುಕ್ತನಾಗಲು ಮನುಷ್ಯನು ಅಗ ಹೆಚ್ಚು ... ನಾಗುತ್ತಾನೆ. ಅವುಗಳಿಂದ ಮುಕ್ತನಾಗಲು ನಾನು ಸತತ ಪ್ರಯತ್ನಮಾಡುತ್ತಿದ್ದೇನೆ. ಅದರಿಂದ ನನ್ನ ಕಳೆದ ಭರವಸೆ ಪುನಃ ಸಿಕ್ಕೀತೆಂಬುದೇ ಉದ್ದೇಶ. ಹರಿಜನದ ವಾಚಕರು ಇದನ್ನು ಗಮನಿಸಲಿ. ತನ್ನ ಸಹಜೀವಿಗಳ ಸೇವೆಗೆ ತನ್ನ ಜೀವನವನ್ನು ಮೀಸಲಾಗಿಟ್ಟ ಪ್ರತಿಯೊಬ್ಬನಿಗೂ ಭರವಸೆ ಇರುವುದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇದೊಂದು ಸೋಮಾರಿಯ ಕನಸೆಂದು ಯಾರೂ ತಿಳಿಯಬೇಕಾಗಿಲ್ಲ ನಾನು ಮತ್ತು ನನ್ನ ಸಹಸಾಧಕರು ಸಾಧಿಸಲಸಮರ್ಥರಾದೆವೆಂಬುದು ಅದು ವ್ಯರ್ಥವೆಂಬುದಕ್ಕೆ ಪ್ರಮಾಣವಾಗಲಾರದು.

ಹಿಂಸೆಯ ಆಧಾರದ ಮೇಲೆ ನಿಂತ ಸಮಾಜದಲ್ಲಿ ನನಗೆ ಸ್ಥಾನವಿಲ್ಲವೆಂಬುದಕ್ಕೂ ಉಕ್ತ ನಿರಾಶೆಗೂ ಏನೂ ಸಂಬಂಧವಿಲ್ಲ. "ಉಕ್ತ" ಎಂದು ನಾನು ಬುದ್ಧಿಪೂರ್ವಕವಾಗಿ ಉಪಯೋಗಿಸುವ ಕಾರಣವೇನಂದರೆ, ನೈರಾಶ್ಯದ ಭಾವವನ್ನು ನನ್ನಲ್ಲಿರಿಸಿಕೊಳ್ಳಲು ನನಗೆ ಇಷ್ಟವಿಲ್ಲ. ಸುದ್ದಿ ಪ್ರಕಟವಾದಾಗ ಯಾವುದು ನಿಜವಾಗಿತ್ತೋ ಅದು ಈಗಲೂ ಅಷ್ಟೇ ಪ್ರಮಾಣದಲ್ಲಿ ನಿಜವಿರಬೇಕೆಂಬ ಅಗತ್ಯವಿಲ್ಲ.

ಕಲಹ ಕಾದಾಟಗಳ ಸಮಾಜದಲ್ಲಿ ಶಾಂತಚಿತ್ತನಾದ ಮನುಷ್ಯನಿಗೆ ಸ್ಥಾನವಿಲ್ಲವೆಂಬುದನ್ನು ಎಲ್ಲರೂ ಚೆನ್ನಾಗಿ ತಿಳಿಯತಕ್ಕದ್ದು. ಅದರೂ ಅವನು ೧೨೫ ವರ್ಷಗಳ ವರೆಗೆ ಬದುಕಬಹುದು ಮತ್ತು ಸತತಪ್ರಯತ್ನದಿಂದ ಅಲ್ಲಿ ತನಗೊಂದು ಸ್ಥಾನಮಾಡಿಕೊಳ್ಳುವ ಭರವಸೆಯನ್ನಿಟ್ಟುಕೊಳ್ಳಬಹುದು. ಅದಲ್ಲದೆ ನನ್ನ ಎರಡನೆಯ ಮಾತಿಗೆ ಬೇರೆಯ ಅರ್ಥವಿಲ್ಲ. ನಾನು ಅಂತಹ ಸಮಾಜದಲ್ಲಿದ್ದೇನೆ, ಅದರೆ ಅಂತಹ ಅಲೊ ಚನೆಯುಳ್ಳಲ್ಲ ಆ ಮಾತು ಅದಕ್ಕಿರುವ ನನ್ನ ವಿರೋಧವನ್ನು ಸ್ಥಾಪಿಸುತ್ತದೆ.

ಕಳೆದ ೩೦ ವರ್ಷಗಳ ಅಹಿಂಸಾತ್ಮಕ ಪ್ರಯತ್ನವು ವ್ಯರ್ಥವಾಯಿತೋ? ಈ ಪುಟವಿಭಾಗಗಳಲ್ಲಿ ಅಗಲೇ ನಾನು ಅದರ ಸ್ಥಾನವನ್ನು ಚರ್ಚಿಸಿದ್ದೇನೆ. ಭಾರತದ ಹಳ್ಳಿಗಳನ್ನು ಹಿಂಸೆಯು ಹೊಕ್ಕಿಲ್ಲವೆಂದು ನಂಬಲಾಗಿದೆ, ಅದು ಹೇಗಾದರೂ ಇರಲಿ, "ಹಿಂಸೆಯು (ಮನುಷ್ಯರ ಮರ್ನಿಶಿ) ಒಂದು ನಿರ್ದಿಷ್ಟ ಕಾಲದಲ್ಲಿ ನಿಲ್ಲದೆ ಹೋದರೆ ಬದುಕುವುದನ್ನೂ ಮತ್ತುಳಿದ ನಮ್ಮ ಯಥಾಶಕ್ತಿ ಸೇವೆ ಸಲ್ಲಿಸುವುದನ್ನೂ ನಿಲ್ಲಿಸುತ್ತೇವೆಂದು ನಾವು ದೇವರಿಗೆ ಹೇಳಲಾರೆವು" ಎಂಬ ಶ್ರೀ ಗ್ರೆಗ್ಗರ ಎಚ್ಚರಿಕೆಯ ಮಾತಿಗೆ ನನ್ನ ಸಂಪೂರ್ಣ ಸಮ್ಮತಿಯಿದೆ. ಉಕ್ತಸುದ್ದಿ ನನ್ನ ಮಾತುಗಳನ್ನು ವಿಸಂಗತಮಾಡಿ ಪ್ರಕಟಿಸಿರುವುದೇ ಶ್ರೀ ಗ್ರೆಗ್ಗರ ಸಂದೇಹಕ್ಕೆ ಕಾರಣವಾಯಿತೆಂದು ನನ್ನ ಆ ಶಂಕೆ ದೇವರನ್ನು ಹಾಗೆ ಅಥವಾ ಹೀಗೆಂದು ನಿರ್ಣಯಿಸಲು ನಾನು ಅಸಮರ್ಥನೆಂದು ನನ್ನ ನಂಬಿಗೆ.

— ಮೋ. ಕ. ಗಾಂಧಿ

ಆ ರೋ ಗ್ಯ ಶಿ ಕ್ಷ ಣ

ಮೊನ್ನೆ ಮೂವರು "ಸೆವೆಂತ್ ಡೇ ಅಡ್ವೆಂಟಿಸ್ಟ್" (ಕ್ರಿಸ್ತನು ಭಕ್ತರುದ್ಧಾರಕ್ಕಾಗಿ ಪುನಃ ಅವತರಿಸುವನೆಂಬ ಶ್ರದ್ಧೆಯುಳ್ಳ ಕ್ರೈಸ್ತಪಂಗಡ ಗುಂಪಿನ ಮೂವರು ಗೆಳೆಯರು.) ಗಾಂಧಿಯವರಿಗೆ "ಅಧ್ಯಾತ್ಮಿಕ ಭಾವನಾಚಿಕಿತ್ಸೆ" (The Ministry of Healing) ಎಂಬ ಪುಸ್ತಕವನ್ನು ತಂದೊಪ್ಪಿಸಿದರು.

ಆ ಪುಸ್ತಕದಲ್ಲಿ ಗಾಂಧಿಯವರ ನಿಸರ್ಗಚಿಕಿತ್ಸೆಗೆ ಹೊಂದುವ ಹಲವಾರು ಅಂಶಗಳಿವೆ. ಹರಿಜನದ ವಾಚಕರಿಗೆ ಈ ಕೆಳಗಿನ ಅಂಶಗಳಲ್ಲಿ ಹೊಸದೇನೂ ಕಾಣಲಾರದು. ಅದರೆ ಪುನರುಕ್ತಿಯಾದರೆ ದೋಷವಿಲ್ಲ.

"ನಿಜವಾದ ವೈದ್ಯನು ಒಬ್ಬ ಶಿಕ್ಷಕನು. ಅವನು ದೈಹಿಕ ಮತ್ತು ನೈತಿಕ ಸಂಪತ್ತಿನ ರಕ್ಷಕನಾಗಿ ನಿಲ್ಲುತ್ತಾನೆ. ರೋಗಿಗಳಿಗೆ ಸರಿಯಾದ ಚಿಕಿತ್ಸೆ ಮಾಡುವ ಕ್ರಮವನ್ನು ಹೇಳಿಕೊಡುವುದಲ್ಲದೆ ಸರಿಯಾಗಿ ಬಾಳುವ ಅಭ್ಯಾಸವನ್ನೂ ಸರಿಯಾದ ತತ್ವಜ್ಞಾನವನ್ನು ಹರಡುವದನ್ನೂ ಕಲಿಸುವದು ಅವನ ಪ್ರಯತ್ನಕ್ಕೆ ಸೇರಿದುದು." ನಾಗರಿಕ ಸುಖಸಾಧನಗಳು ಎಷ್ಟೇ ಹೆಚ್ಚಾಗಿದ್ದರೂ ಅರೋಗ್ಯ ಪದ್ಧತಿ ಮತ್ತು ಚಿಕಿತ್ಸಾ ಕ್ರಮಗಳು ಎಷ್ಟೇ ಮುಂಬರಿದಿದ್ದರೂ ದೈಹಿಕವಾದ ಸಹನಶಕ್ತಿಯಲ್ಲಿ ಬಹಳ ಇಳಿತಾಯ ಉಂಟಾಗಿದೆಯೆಂದು ಗ್ರಂಥಕರ್ತನು ವ್ಯಸನಪಟ್ಟಿದ್ದಾನೆ. "ನಮ್ಮ ಕೃತಕ ನಾಗರಿಕತೆಯು ಸರಿಯಾದ ತತ್ವಗಳನ್ನು ನಾಶಗೊಳಿಸುವ ದುರಭ್ಯಾಸಗಳನ್ನು ಪ್ರೋತ್ಸಾಹಿಸುತ್ತದೆ. ಪದ್ಧತಿ ಮತ್ತು ವಿಲಾಸಬುದ್ಧಿಗಳು ಪ್ರಕೃತಿಯೊಡನೆ ಯುದ್ಧಕ್ಕೆ ನಿಂತಿವೆ."

ವಿಷಮಯವಾದ ಔಷಧಗಳ ಉಪಯೋಗವನ್ನು ಚೆನ್ನಾಗಿ ಹಳಿಯಲಾಗಿದೆ. ಅರೋಗ್ಯ ಲಾಭ ಮಾಡಿಕೊಡುವುದು ಔಷಧಗಳಲ್ಲಿಲ್ಲವೆಂದೂ ಪ್ರಕೃತಿಯಲ್ಲಿದೆಯೆಂದೂ ವೈದ್ಯನು ಹೇಳಿಕೊಡಬೇಕು. "ಶುದ್ಧವಾದ ಗಾಳಿ, ಸೂರ್ಯನ ಬೆಳಕು, ಮಿತಾಹಾರ, ಮಿತಭೋಗಗಳು, ವಿಶ್ರಾಂತಿ, ವ್ಯಾಯಾಮ, ಸರಿಯಾದ ಆಹಾರ, ನೀರಿನ ಉಪಯೋಗ, ದೈವೀಶಕ್ತಿಯಲ್ಲಿ ಶ್ರದ್ಧೆ– ಇವೇ ನಿಜವಾದ ವ್ಯಾಧಿನಿವಾರಕಗಳು."

ಪ್ರತಿಯೊಬ್ಬನೂ ಪ್ರಕೃತಿಯ ವ್ಯಾಧಿನಿವಾರಕ ವಸ್ತುಗಳ ಬಳಕೆಯನ್ನು ತಿಳಿಯಬೇಕು. ಅವಳ ವ್ಯಾಧಿ ನಿವಾರಣ ಮತ್ತು ಆರೋಗ್ಯವರ್ಧನಗಳ ಗತಿಯು ಬಹಳ ಮಂದವಾಗಿ ತೋರಬಹುದು, ಅಪಾಯಕರವಾದ ದುರಭ್ಯಾಸಗಳನ್ನು ಬಿಟ್ಟರೆ ಕೊನೆಯಲ್ಲಿ ಪ್ರಕೃತಿಯು ತನ್ನ ಕೆಲಸವನ್ನು ಚೆನ್ನಾಗಿಯೂ ಬುದ್ಧಿವಂತಿಕೆಯಿಂದಲೂ ಮಾಡುವಳೆಂಬುದು ಗೊತ್ತಾಗುತ್ತದೆ.

ವ್ಯಾಧಿನಿವಾರಣಕ್ಕಿಂತ ವ್ಯಾಧಿ ಬರದಂತೆ ಮುಂಜಾಗ್ರತೆ ವಹಿಸುವುದೇ ಮೇಲು. ಆದುದರಿಂದ "ತನಗಾಗಿ ಮತ್ತು ಮಾನವಜಾತಿಗಾಗಿ ಜೀವನದ ನಿಯಮಗಳ ಪರಿಚಯಮಾಡಿಕೊಂಡು ಪ್ರತಿಯೊಬ್ಬ ಪಾದ್ರಿಯೂ ಅದರಂತೆ ಅನುಸರಿಸುವುದು ತನ್ನ ಕರ್ತವ್ಯವೆಂದು ತಿಳಿಯತಕ್ಕದ್ದು. ಆರೋಗ್ಯವು ಆಕಸ್ಮಿಕತೆಯ ಮೇಲೆ ಅವಲಂಬಿಸಿಲ್ಲ; ಅದು ನಿಯಮಾನುಸರಣದ ಫಲ" ಆ ನಿಯಮವೆಂದರೆ ದೈವನಿಯಮ" ವೆಂದು ಗ್ರಂಥಕರ್ತನು ಖಂಡಿತೋಕ್ತಿಯಿಂದ ಹೇಳುತ್ತಾನೆ. ಅದರ ತತ್ವಗಳು ... ದೇವರು ಹೇಗೋ ಹಾಗೇ ನಿತ್ಯ ಮತ್ತು ಅನಿವಾರ್ಯಗಳಾಗಿವೆ.

ಆತ್ಮಸಂಯಮನವನ್ನು ಅಭ್ಯಸಿಸುವುದು ಮನುಷ್ಯನ ಮೊದಲನೆಯ ಕೆಲಸ. ಆ ಶಕ್ತಿ ಉದಯವಾಯಿತೆಂದರೆ ಅದರಿಂದ ತೃಷ್ಣೆ ನಾಶವಾಗಿ ಸ್ವಾತಂತ್ರ್ಯ ಕೈವಶವಾಗುತ್ತದೆ. ಆದರೆ "ದೈವೀಶಕ್ತಿಯ ವಿನಾ ಯಾವ ನಿಜವಾದ ಸುಧಾರಣೆಯೂ ಸಾಧ್ಯವಾಗದು."

ಹೊಗೆಸೊಪ್ಪು ಮತ್ತು ಮದ್ಯಗಳ ಉಪಯೋಗದಿಂದ ದೇಹ ಮತ್ತು ಆತ್ಮಗಳ ಮೇಲಾಗುವ ದುಷ್ಪರಿಣಾಮಗಳನ್ನು ನಡುವೆ ಗ್ರಂಥಕರ್ತನು ವಿಸ್ತರಿಸಿ ಹೇಳಿದ್ದಾನೆ. ಪುಸ್ತಕವನ್ನೇನೊ ಪಾಶ್ಚಾತ್ಯರಿಗಾಗಿ ಬರೆದುದಾದರೂ ಹೊಗೆಸೊಪ್ಪಿನ ಸೇವನೆ ಮತ್ತು ಮದ್ಯಪಾನಗಳು ನಮ್ಮ ದೇಶದಲ್ಲಿಯೂ ಹೊಡೆದೋಡಿಸಬೇಕಾದ ದುರಭ್ಯಾಸಗಳು. ಅತಿ ಚಿಕ್ಕ ಹುಡುಗರು ಕೂಡ ಇಂದು ಬೀದಿಯಲ್ಲಿ ಬಿದ್ದಿರುವ ಸಿಗರೇಟಿನ ತುಂಡುಗಳನ್ನು ಹೆಕ್ಕುವುದನ್ನೂ ಸಿಗದಿದ್ದರೆ 'ಒಂದು ಬಿಲ್ಲಿ ಕೊಡಿ' ಎಂದು ಕೇಳುವುದರ ಬದಲು 'ಒಂದು ಸಿಗರೇಟು ಕೊಡಿ' ಎಂದು ಕೇಳುವುದನ್ನೂ ಕಂಡರೆ ಬಹಳ ವ್ಯಥೆಯುಂಟಾಗುತ್ತದೆ.

ಆಹಾರ, ಜಲಪಾನ, ಉಡುಗೆ ಮತ್ತು ಕೆಲಸ ಕಾರ್ಯಗಳಲ್ಲಿ ಅಕ್ರಮವಿರುವುದೇ ರೋಗಗಳಿಗೆ ಕಾರಣ. "ದೇವರು ನಮಗೆ ನಿಶ್ಚಿತ ಪ್ರಮಾಣದ ಪ್ರಾಣಶಕ್ತಿಯನ್ನಿತ್ತಿದ್ದಾನೆ; ಜೀವನದ ನಾನಾ ಕಾರ್ಯಗಳ ನಿರ್ವಹಣಕ್ಕಾಗಿ ನಮಗೆ ಬೇರೆ ಬೇರೆ ಅಂಗಗಳನ್ನು ಕೊಟ್ಟಿದ್ದಾನೆ ಮತ್ತು ಆ ಅಂಗಗಳು ಐಕ್ಯದಿಂದ ಕೆಲಸಮಾಡಬೇಕೆಂದು ಅವನ ಮನಸಿದೆ. ಜೀವವನ್ನು ಎಚ್ಚರಿಕೆಯಿಂದ ಕಾಪಾಡಿ ದೇಹದ ಸೂಕ್ಷ್ಮ ಯಂತ್ರಗಳನ್ನು ಸರಿಯಾದ ರೀತಿಯಲ್ಲಿಟ್ಟುಕೊಂಡಿದ್ದರೆ ಆರೋಗ್ಯವೇ ನಮಗೆ ಸಿಗುವ ಫಲ. ಪ್ರಾಣಶಕ್ತಿ ಬಹುಬೇಗ ವ್ಯಯವಾಗಿ ಹೋದರೆ, ಸದ್ಯದ ಉಪಯೋಗಕ್ಕಾಗಿ ಆ ಶಕ್ತಿಯಿಂದ ನರನಾಡಿಗಳು ಕಡತೆಗೆದುಕೊಳ್ಳುವಂತಾದರೆ ಒಂದು ಅವಯವಕ್ಕೆ ಅಪಾಯ ಸಂಭವಿಸಿದೊಡನೆ ಎಲ್ಲ ಅವಯವಗಳಿಗೂ ಅದು ತಟ್ಟುವಂತಾಗುತ್ತದೆ.

ಅಮಿತಾಹಾರ ಭಕ್ಷಣವನ್ನು ಬಿಡಬೇಕು. ಒಂದೆರಡು ಊಟಗಳನ್ನು ಬಿಡುವುದು, ಕೆಲವು ದಿವಸಗಳಿಗೊಮ್ಮೆ ಫಲಾಹಾರ ಮಾಡುವುದು ಅಥವಾ ಸ್ವಲ್ಪ ಕಾಲ ನಿರಾಹಾರದಿಂದಿರುವುದು ಎಷ್ಟೋ ಸಲ ಅರೋಗ್ಯ ಸುಧಾರಣೆಯನ್ನು ತಂದಿವೆ. "ಆತ್ಮತ್ಯಾಗದ ಮಾರ್ಗವೇ ಆರೋಗ್ಯ ಸಾಧನಕ್ಕೆ ಮಾರ್ಗ."

ವಿಶ್ರಾಂತಿ, ನಿಶ್ಚಿಂತತ್ವ, ಮಿತಭೋಜನಗಳು ಕೆಲಸಮಾಡಿ ದಣಿದವರಿಗೆ ಒಳ್ಳೆಯ ಚಿಕಿತ್ಸೆ. "ಶುದ್ಧವಾದ ನೀರೆಂಬುದು ದೇವರು ಕೊಟ್ಟ ಅತ್ಯುತ್ತಮವಾದ ವರ." ಅದನ್ನು ಬೇಕಾದ ಹಾಗೆ ಕುಡಿಯಬೇಕು; ರಕ್ತ ಸಂಚಾರವನ್ನು ಸರಿಯಾಗಿಡಲು ಅದರಿಂದ ಯುಕ್ತವಾಗಿ ಸ್ನಾನ ಮಾಡುವುದು ಅತ್ಯುತ್ತಮವಾದ ಉಪಾಯ. ತಣ್ಣೀರಿನ ಸ್ನಾನವು ಒಂದು ಪೌಷ್ಟಿಕವೇ ಸರಿ. ಬಿಸಿನೀರು ದೇಹದಲ್ಲಿರುವ ರಂಧ್ರಗಳನ್ನು ತೆರೆಯಿಸಿ ಅಶುದ್ಧ ದ್ರವ್ಯಗಳು ಹೊರಗೆ ಹೋಗುವಂತೆ ಮಾಡುತ್ತದೆ. ಎರಡೂ ನರಗಳಿಗೆ ಸೌಖ್ಯ ಕೊಡುತ್ತವೆ. ಸರಿಯಾಗಿ ಜಲಚಿಕಿತ್ಸೆ ನಡೆಸುವುದಕ್ಕೆ ಕೆಲಸ ಹೆಚ್ಚು ಬೀಳುತ್ತದೆಂದು ಜನರು ಅದನ್ನು ಹೆಚ್ಚಾಗಿ ಮೆಚ್ಚುವುದಿಲ್ಲವೆಂದು ಗ್ರಂಥಕರ್ತನು ದೂರುತ್ತಾನೆ.

ವ್ಯಾಯಾಮದಿಂದಾಗುವ ಪ್ರಯೋಜನವಂತೂ ಅಷ್ಟಿಷ್ಟಲ್ಲ. ನಿರುದ್ಯೋಗವು ರೋಗದ ಬೀಜ. ಅಂಗಹೀನನಿಗಾದರೂ ಎಲ್ಲ ಕೆಲಸವನ್ನೂ ನಿಲ್ಲಿಸುವ ಅಗತ್ಯ ಉಂಟಾಗುವುದಿಲ್ಲ. ದುಡಿದು ಜೀರ್ಣರಾದವರಿಗಾದರೂ ಸಂಪೂರ್ಣ ದೇಹಶ್ರಮದ ಕಾರ್ಯವನ್ನು ಬಿಟ್ಟುಬಿಡುವಂತೆ ಹೇಳಬಾರದು. ಶ್ವಾಸಕೋಶಗಳು ಸರಿಯಾಗಿ ಕೆಲಸ ಮಾಡುವಂತೆಯೂ ಎಲ್ಲ ಮಾಂಸಖಂಡಗಳೂ ಚಲಿಸುವಂತೆಯೂ ಮಾಡುವ ವಿಹಾರವೇ ಅತ್ಯುತ್ತಮವಾದ ವ್ಯಾಯಾಮವೆಂದು ಗ್ರಂಥಕರ್ತನು ಹೇಳುತ್ತಾನೆ.

ದೇಹದ ಮೇಲೆ ಮನಸ್ಸು ಪರಿಣಾಮ ಮಾಡುವುದನ್ನು ಒತ್ತಿ ಹೇಳಲಾಗಿದೆ. "ಧೈರ್ಯ, ಭರವಸೆ, ಶ್ರದ್ಧೆ, ಸಹಾನುಭೂತಿ, ಪ್ರೇಮಗಳು ಅರೋಗ್ಯವನ್ನು ಸುಧಾರಿಸಿ ಚಿರಾಯುವನ್ನಾಗಿ ಮಾಡುತ್ತವೆ. ಒಂದು ತೃಪ್ತಮನಸ್ಸು, ಸಂತುಷ್ಟ ಮನೋಭಾವ–ಇವು ಶರೀರಕ್ಕೆ ಆರೋಗ್ಯವನ್ನೂ ಆತ್ಮಕ್ಕೆ ಬಲವನ್ನೂ ಕೊಡುತ್ತವೆ."

ಆದುದರಿಂದ "ವೈದ್ಯನು ಮಾನುಷದಿಂದ ದೈವೀಶಕ್ತಿಯ ಕಡೆಗೆ ಜನರು ಕಣ್ಣೆತ್ತುವಂತೆ ಬೋಧಿಸಬೇಕು"– ಎಂದು ಗ್ರಂಥಕರ್ತನು ಸಾರುತ್ತಾನೆ. ವೈದ್ಯರ ಮೇಲೆ ಅವಲಂಬಿಸಬೇಡಿರೆಂದೂ ನಾಮಸ್ಮರಣ ಮಾತ್ರದಿಂದ ಯಾವನು ಸಂಪೂರ್ಣ ರಕ್ಷಣೆಯನ್ನು ಕೊಡಬಲ್ಲನೊ ಅಂತಹ ದೇವರನ್ನು ಅವಲಂಬಿಸಬೇಕೆಂದೂ ಅವನು ರೋಗಿಗಳಿಗೆ ಉಪದೇಶಿಸಬೇಕು."

"ನಾವು ಪುನಃ ಪುನಃ ಹೇಳುತ್ತಿದ್ದರೆ ನಮ್ಮ ವಿಚಾರ ಮತ್ತು ಭಾವನೆಗಳು ಬಲಪಡುತ್ತವೆಯೆಂಬುದೊಂದು ಪ್ರಕೃತಿ ನಿಯಮ."

ಗಾಂಧಿಯವರು ಪದೇ ಪದೇ ಬರೆದ ಮತ್ತು ಹೇಳಿದ ರಾಮನಾಮದ ರೋಗನಿವಾರಣ ಶಕ್ತಿಯನ್ನಲ್ಲದೆ ಇದು ಮತ್ತೇನನ್ನು ಸೂಚಿಸುತ್ತದೆ?

—ಅಮೃತ ಕೌರ

ವಿಜ್ಞಾನಿಯೊಬ್ಬನ ಭವಿಷ್ಯ ಸತ್ಯವಾಗಿ ಪರಿಣಮಿಸಿದ್ದು

೧೯೩೦ ರ ಮಾರ್ಚ ೧೨ ರಲ್ಲಿ ಗಾಂಧೀಜಿಯವರು ಸಾಬರ್ಮತಿಯನ್ನು ಬಿಟ್ಟು ದಾಂಡಿಯಲ್ಲಿ ಉಪ್ಪಿನ ಕಾಯದೆಯನ್ನು ಮುರಿಯಲು ಹೊರಟಂದಿನಿಂದ ನಮ್ಮ ಕಣ್ಣಿಗೆ ಉಪ್ಪಿನ ವಿತರಣ ಸರಕಾರದ ಅಧೀನವಾಗಿದ್ದುದು ಪರಕೀಯ ರಾಜ್ಯಾಡಳಿತದ ಕುರುಹಾಗಿಯೂ ಉಚಿತವಾಗಿ ಉಪ್ಪು ದೊರಕುವುದು ಸ್ವರಾಜ್ಯದ ಕುರುಹಾಗಿಯೂ ಕಾಣಿಸತೊಡಗಿತು. ಉಪ್ಪಿನ ತೆರಿಗೆ ನ್ಯಾಯವಾದದ್ದಲ್ಲವೆಂಬುದನ್ನು ದಾಂಡಿಯ ಸತ್ಯಾಗ್ರಹವು ಜಗತ್ತಿಗೆ ತೋರಿಸಿ ಕೊಟ್ಟಿತು. ಬ್ರಿಟಿಶ ಪತ್ರಿಕೆಗಳಲ್ಲಿ ಪ್ರಕಟನೆಗಾಗಿ ಸುಪ್ರಸಿದ್ಧ ಜೀವಶಾಸ್ತ್ರಜ್ಞನಾದ ಪ್ರೊ. ಜೆ. ಬಿ ಹಾಲ್ಡೇನರು ಈ ವಿಷಯವಾಗಿ ಅನೇಕ ಪ್ರಬಂಧಗಳನ್ನು ಬರೆದರು.

ಬಹಳ ಜನರಿಗೆ ಇಂಗ್ಲಂಡಿನಲ್ಲಿ ಉಪ್ಪು ಬಹಳ ದೌಲತ್ತಿನ ವಸ್ತುವಾಗಿದೆಯೆಂದೂ ಅದರೆ ಇದಕ್ಕೆ ಇಂಗ್ಲಂಡಿನಲ್ಲಿ ಎಷ್ಟೋ ಅಪವಾದಗಳಿವೆಯೆಂದೂ ಅವೇ ಹಿಂದುಸ್ತಾನದಲ್ಲಿ ನಿಯಮಗಳಾಗುವುದರಿಂದ ಅವು ಬಹಳ ಕುತೂಹಲಕರವಾಗಿವೆಯೆಂದೂ ಅವರು ಅಭಿಪ್ರಾಯಪಟ್ಟರು.

ಇದ್ದಿಲು ಗಣಿ ಕೆಲಸಗಾರರ ಊಟವನ್ನು ಪ್ರಾಯೋಗಿಕವಾಗಿ ಪರಿಶೀಲಿಸಿದ ಪ್ರೊ. ಮಾಸ್‌ರವರು ಆಳವಾದ ಮತ್ತು ಬಹಳ ಉಷ್ಣವಾದ ಗಣಿಗಳಲ್ಲಿ ಕೆಲಸ ಮಾಡುವವರು ಹೆಚ್ಚಾಗಿ ಉಪ್ಪುಹಾಕಿ ಒಣಗಿಸಿದ ಹಂದಿಯ ಮಾಂಸ ಮತ್ತು ಮೀನುಗಳನ್ನು ತಿನ್ನುತ್ತಾರೆಂದು ಸಂಶೋಧಿಸಿದರು. ಮತ್ತು ಆ ಕೆಲಸಗಾರರು ಮೇಲುಪ್ಪು ಹಾಕಿಕೊಳ್ಳುತ್ತಾರಲ್ಲದೆ ಮದ್ಯಕ್ಕೆ ಕೂಡ ಉಪ್ಪು ಹಾಕಿದರೆ ಮತ್ತಷ್ಟು ಉತ್ಸಾಹದಿಂದ ಕುಡಿಯುತ್ತಾರಂತೆ. ಬೆವರಿನಲ್ಲಿ ಕಳೆದು ಹೋದ ಉಪ್ಪಿನ ಅಂಶವನ್ನು ತುಂಬಿಕೊಳ್ಳುವದಕ್ಕಾಗಿಯೇ ಅವರು ಹೀಗೆ ಉಪ್ಪು ಹಾಕಿದ ಪದಾರ್ಥಗಳಲ್ಲಿ ಹೆಚ್ಚು ಆಸಕ್ತಿಯುಳ್ಳವರಾಗಿದ್ದಾರೆಂದು ಪ್ರೊ. ಮಾಸ್‌ರವರು ತೋರಿಸಿಕೊಟ್ಟರು.

ಗಂಟೆಗೆ ೯ ಸೇರಿನಷ್ಟು ಬೆವರು ಸುರಿಯುವದುಂಟೆಂದೂ ಅದರಿಂದ ಕೆಲಸದ ಒಂದು ಸರದಿಯಲ್ಲಿ ೧೮ ರತಲಿನಷ್ಟು ಗಣಿಯ ಕೆಲಸಗಾರನ ತೂಕ ಕಡಿಮೆಯಾಗಬಹುದೆಂದೂ ೨॥ ತೊಲೆ ಉಪ್ಪು ಕೂಡಾ ಮೈಯಿಂದ ಹೊರಬೀಳುವದೆಂದೂ ಆಂಗ್ಲ ತಜ್ಞನೊಬ್ಬನು ಹೇಳುತ್ತಾನೆ. ಊಟದಲ್ಲಿ ಉಪ್ಪು ಕಡಿಮೆಯಾದರೆ ಶರೀರದಲ್ಲಿ ದೌರ್ಬಲ್ಯ ಮತ್ತು ಒಂದು ವಿಧದ ಮಾಂಸಖಂಡಗಳ ಅಪೂರ್ಣ ಬೆಳವಣಿಗೆ ಇವು ಸಂಭವಿಸುವವು.

ಹಿಂದುಸ್ತಾನದಲ್ಲಿ ಬೇಸಿಗೆಯಲ್ಲಿ ದಿನಕ್ಕೆ ೨೦ ತಾಸುಗಳು ಒಬ್ಬನು ಬೆವರು ಸುರಿಸುತ್ತಾನೆ. ಇದರಿಂದ ಕಳೆದುಕೊಂಡ ಉಪ್ಪಿನಂಶವನ್ನು ತುಂಬಿಕೊಳ್ಳಲು ೨॥ ತೊಲೆಗಳಷ್ಟು ಉಪ್ಪು ತಿನ್ನಬೇಕಾಗುತ್ತದೆ. ಹೀಗೆ ಉಪ್ಪು ಊಟದ ಒಂದು ಮುಖ್ಯವಾದ ಅಂಗ; ಆದುದರಿಂದ ಇಂಗ್ಲಂಡಿನಲ್ಲಿ ಗೋದಿಯ ಮೇಲೆ ತೆರಿಗೆ ಹೇರಿದರೆ ಎಷ್ಟು ಅನ್ಯಾಯವಾಗುವುದೋ ಅದಕ್ಕಿಂತಲೂ ಹೆಚ್ಚಾಗಿ ಹಿಂದುಸ್ತಾನದಲ್ಲಿ ಉಪ್ಪಿನ ಮೇಲೆ ತೆರಿಗೆ ಹಾಕಿದ್ದು ಅನ್ಯಾಯವೆಂದು ಹಾಲ್ಡೇನರು ಹೇಳಿದರು. ಅದು ಜನರ ಆರೋಗ್ಯಕ್ಕೆ ವಿಘಾತಕವಾದುದು. ಉಪ್ಪಿನ ತೆರಿಗೆಯನ್ನು ತೆಗೆದುಹಾಕಿದರೆ ಸರಕಾರದ ಉತ್ಪನ್ನ ಕಡಿಮೆಯಾಗುವುದೆಂಬುದು ನಿಜವಾದರೂ ಅರ್ಥಿಕ ಪ್ರಶ್ನೆಯಷ್ಟೇ ಜೀವನಶಾಸ್ತ್ರದ ಪ್ರಶ್ನೆಯೂ ಮುಖ್ಯವಾದದ್ದೆಂದು ಗಣಿಸಲ್ಪಟ್ಟಿದೆ. ಬಡ ಜನರಿಗೆ ಬಹಳ ಉಪದ್ರವಕಾರಿಯಾದುದರಿಂದ ಉಪ್ಪಿನ ತೆರಿಗೆಯನ್ನು ತೆಗೆದುಹಾಕದಿರುವುದು ಸ್ವರಾಜ್ಯವನ್ನು ಸಮರ್ಥಿಸುವ ಜೀವಶಾಸ್ತ್ರದ ಒಂದು ವಾದ. ಅದನ್ನು ತೆಗೆದುಹಾಕಬೇಕೆಂದು ಗಾಂಧೀಜಿಯವರು ಹೂಡಿದ ಚಳವಳಿಯು ಜೀವಶಾಸ್ತ್ರದ ಪ್ರಕಾರ ಸಮರ್ಥನೀಯವಾದದ್ದು. ಸ್ವತಂತ್ರ ಹಿಂದುಸ್ತಾನವು ತನ್ನ ಮೊದಲನೆಯ ಕರ್ತವ್ಯವಾಗಿ ಉಪ್ಪಿನ ತೆರಿಗೆಯನ್ನು ತೆಗೆದುಹಾಕುವುದೆಂದು ನಾನು ನಂಬುತ್ತೇನೆ" ಎಂದು ಪ್ರೊ. ಹಾಲ್ಡೇನರು ಉದ್ಗರಿಸಿದರು.

ಹಿಂದುಸ್ತಾನದ ಚರಿತ್ರೆಯಲ್ಲಿ ಎಂದೂ ಮರೆಯಲಾಗದ ದಿನವಾದ ತಾ. ೨-೪-೪೬ ರಲ್ಲಿ ನೆಹರೂ ಸರಕಾರವು ಪ್ರೊ.ಹೆಸರರ ಮೇಲಿನ ಬಯಕೆಯನ್ನು ಪೂರೈಸಿತು. —ಪಿ. ಜಿ. ಪಿ

ರಜಪುತಸ್ತಾನದಲ್ಲಿರುವ ಎಲ್ಲ ಸಂಸ್ಥಾನಿಕರು ಸಭೆ ಸೇರಿ ರಾಜಸ್ತಾನ ಒಕ್ಕೂಟವನ್ನು ಸಂಸ್ಥಾಪಿಸಬೇಕೆಂದು ನಿರ್ಣಯಿಸಿದರು. ರೆಸಿಡೆಂಟರ ಅಧಿಕಾರವನ್ನು ವಹಿಸಿಕೊಳ್ಳುವದಕ್ಕಾಗಿ ಮೂವರ ಒಂದು ಕಮಿಟಿಯನ್ನು ನಿಯಮಿಸಲಾಯಿತು.

ಅಹಿಂಸೆ

(೨೫—೬—೧೯೪೭ ನೇ ದಿನ ಪ್ರಾರ್ಥನೋತ್ತರ ಸಭೆಗಾಗಿ ಗಾಂಧೀಜಿಯವರು ಬರೆದು ಕೊಟ್ಟ ಸಂದೇಶದಿಂದ — ಸು. ನಯ್ಯರ)

ಅನೇಕ ಭಾಗಗಳಿಂದ ಬಂದ ಪತ್ರಗಳಲ್ಲಿ ಕೇಳಲ್ಪಟ್ಟ ಒಂದು ಪ್ರಶ್ನೆಗೆ ಉತ್ತರಕೊಡದೇ ಕೆಂದು ಪ್ರಯತ್ನ ಮಾಡುತ್ತಿರುವೆ.

ರಾಜಕೀಯ ಧ್ಯೇಯಸಾಧನೆಗಾಗಿ ರಾಜಕೀಯ ಪಕ್ಷೋಪಪಕ್ಷಗಳಲ್ಲಿಯ ನಿಮ್ಮ ಜನರಲ್ಲಿ ಹಿಂಸಾಚಾರ ಹೆಚ್ಚುತ್ತಿರುವುದಕ್ಕೆ ನೀವೇನನ್ನು ಬಲ್ಲಿರಿ? ಬ್ರಿಟಿಶ ಅಧಿಕಾರವನ್ನು ಕೊನೆಗಾಣಿಸಲು ಕಳೆದ ಮೂವತ್ತು ವರುಷಗಳಿಂದ ಆಚರಿಸುತ್ತ ಬಂದ ಅಹಿಂಸೆಯ ಪರಿಣಾಮ ಇದೇ ಬಗೆಯದೆ? ನಿಮ್ಮ ಅಹಿಂಸಾಮಂತ್ರ ಈಗಲೂ ಪರಿಣಾಮಕರವಾಗಿದೆಂದು ನಿಮ್ಮ ಅಭಿಪ್ರಾಯವೆ? ನನಗೆ ಬಂದ ಪತ್ರಗಳಲ್ಲಿಯ ಭಾವನೆಗಳನ್ನು ನನ್ನ ಶಬ್ದಗಳಲ್ಲಿ ಕ್ರೋಡೀಕರಿಸಿದ್ದೇನೆ.

ಇದಕ್ಕೆ ಉತ್ತರ ಕೊಡದೇಹೋದರೆ ನನ್ನ ಅಸಮರ್ಥತೆಯನ್ನು ಒಪ್ಪಿಕೊಳ್ಳುತ್ತೇನೆ ಅದರೆ ಅಹಿಂಸೆಯ ಅಸಮರ್ಥತೆಯನ್ನಲ್ಲ. ಕಳೆದ ಮೂವತ್ತು ವರುಷಗಳಿಂದ ಆಚರಿಸುತ್ತ ಬಂದ ಅಹಿಂಸೆಯು ಕೇವಲ ಅಶಕ್ತರ ಅಹಿಂಸೆಯಾಗಿತ್ತೆಂಬುದಾಗಿ ನಾನು ಈ ಮೊದಲು ಹೇಳಿದ್ದೇನೆ. ನನ್ನೀ ಉತ್ತರ ಸಾಕಷ್ಟು ಸಮಾಧಾನಕರವಾಗಿದೆಯೊ ಇಲ್ಲವೊ ಎಂಬುದನ್ನು ನಿರ್ಣಯಿಸುವದು ಎರಡನೆಯವರ ಕೆಲಸ. ಬದಲಾದ ಪರಿಸ್ಥಿತಿಯಲ್ಲಿ ಇಂಥ ಅಹಿಂಸೆ ಕಾರ್ಯಕ್ಷಮವಾಗಲಾರದೆಂಬುದೂ ಒಪ್ಪತಕ್ಕ ಸಂಗತಿಯಾಗಿದೆ. ಸಶಕ್ತರ ಅಹಿಂಸೆಯ ಅನುಭವ ಹಿಂದುಸ್ತಾನದ ಜನರಿಗೆ ಇರುವದಿಲ್ಲ. ಸಶಕ್ತರ ಅಹಿಂಸೆ ಜಗತ್ತಿನಲ್ಲಿ ಅತ್ಯಂತ ಪ್ರಬಲ ಶಕ್ತಿಯೆಂಬುದನ್ನು ಪುನಃ ಪುನಃ ಪ್ರತಿಪಾದಿಸುವದರಿಂದ ಯಾವ ಪ್ರಯೋಜನವೂ ಆಗದು. ಸತ್ಯಸ್ಥಾಪನೆಗೆ ಸತತ ಮತ್ತು ವ್ಯಾಪಕವಾದ ಪ್ರಯೋಗದ ಅವಶ್ಯಕತೆಯಿದೆ. ಇದಕ್ಕಾಗಿ ನಾನು ಶಕ್ತಿಮೀರಿ ಪರಿಶ್ರಮಪಡುತ್ತೇನೆ. ನನ್ನ ಈ ಪರಿಶ್ರಮಶಕ್ತಿ ಬಹಳ ಕಡಮೆ ತರಗತಿಯದಾಗಿದ್ದರೆ ಮಾಡುವುದೇನು? ನಾನೇನು ಮೂರ್ಖನಲ್ಲವಷ್ಟೇ. ನಿರರ್ಥಕ ಮಾರ್ಗದಲ್ಲಿ ನನ್ನನ್ನನುಸರಿಸಿರೆಂದು ಜನತೆಗೆ ನಾನೇಕೆ ಹೇಳಬೇಕು? ಇವೆಲ್ಲ ಉಚಿತ ಪ್ರಶ್ನೆಗಳು. ನನ್ನ ಉತ್ತರವೂ ತೀರ ಸುಲಭವಾಗಿದೆ. ನನ್ನನ್ನನುಸರಿಸಿರೆಂದು ನಾನು ಯಾರಿಗೂ ಹೇಳುವುದಿಲ್ಲ. ಪ್ರತಿಯೊಬ್ಬ ತನ್ನ ಅಂತರಾತ್ಮನನ್ನೇ ಕೇಳಿಕೊಂಡು ನಡೆಯಬೇಕು. ಅದನ್ನನುಸರಿಸುವ ಇಚ್ಛೆ ಇಲ್ಲದಿದ್ದವರು ತಮಗೆ ಸೂಕ್ತ ಎನಿಸಿದುದನ್ನು ಮಾಡಬಲ್ಲರು. ಯಾರೊಬ್ಬರೂ ಕುರಿಗಳಂತೆ ಎರಡನೆಯವರ ಅನುಕರಣ ಮಾಡಬಾರದು.

ಇನ್ನೊಂದು ಹೆಚ್ಚು ವಿಚಾರಯುತ ಪ್ರಶ್ನೆಯಿದ್ದು ಅದನ್ನು ಕೇಳಲಾಗುತ್ತದೆ. ಹಿಂದುಸ್ತಾನವು ಅತ್ತದಾರಿಯನ್ನು ಹಿಡಿಯ ಹತ್ತಿದೆಂದು ನಿಮಗೆ ಖಾತ್ರಿಯಾಗಿದ್ದರೆ ತಪ್ಪು ಹಾದಿ ಹಿಡಿಯುವವರೊಡನೆ ನೀವೇಕೆ ಸಹಕರಿಸುವಿರಿ? ನೀವೊಬ್ಬರೆ ನಿಮ್ಮ ದಾರಿಯನ್ನು ಅನುಸರಿಸುವದಿಲ್ಲೇಕೆ? ನಿಮ್ಮ ಮಾರ್ಗ ಸರಿಯಾಗಿದ್ದರೆ ನಿಮ್ಮ ಹಳೆಯ ಗೆಳೆಯರು ಮತ್ತು ಅನುಯಾಯಿಗಳು ನಿಮ್ಮನ್ನು ಅನುಸರಿಸಿಯೆ ಬಿಡುವರು. ಎಂಬುದೇ ಆ ಪ್ರಶ್ನೆ. ಅತ್ಯಂತ ನ್ಯಾಯ್ಯವಾದ ಪ್ರಶ್ನೆಯಿದೆಂದು ಹೇಳಬಹುದು. ಇದರ ವಿರುದ್ಧ ನಾನೇನೂ ಪ್ರತಿಪಾದಿಸಲಾರೆ. ಮೊದಲಿನಷ್ಟೆ ನನ್ನ ಶ್ರದ್ಧೆ ಪ್ರಬಲವಾಗಿದೆಂದಿಷ್ಟೇ ನಾನು ಹೇಳಬಲ್ಲೆ. ನನ್ನ ತಂತ್ರವು ಕದಾಚಿತ್ ಸದೋಷವಾಗಿರುವ ಸಂಭವವಿದೆ. ಇಂಥ, ಕೊಡಕಿನ ಪ್ರಶ್ನೆಗಳಲ್ಲಿ ಹಳೆಯ ಮತ್ತು ಪರಿಣಾಮಕರವೆಂದು ಗೊತ್ತಾದ ಪರಂಪರೆಗಳು ನಮಗೆ ಮಾರ್ಗದರ್ಶಕವಾಗಿವೆ. ಯಾರೂ ಯಂತ್ರಗಳಂತೆ ಮಾತ್ರ ನಡೆಯಬಾರದು. ಆದುದರಿಂದ ನನ್ನನ್ನು ಪ್ರಶ್ನಿಸುವವರೆಲ್ಲ ನನ್ನಂತೆ ತಾಳ್ಮೆಯಿಂದಿರಬೇಕು ಇಷ್ಟೇ ಅಲ್ಲ ಇಕ್ಕಟ್ಟಿನ ಮತ್ತು ನೇರವಾದ ಅಹಿಂಸಾಮಾರ್ಗದ ಹೊರತು ಬಳಲುತ್ತಿರುವ ಜಗತ್ತಿಗೆ ಬೇರೆ ಯಾವ ಅತೋತ್ತರಗಳೂ ಇರುವುದಿಲ್ಲೆಂದು ನನ್ನಂತೆ ಅವರೂ ವಿಶ್ವಾಸವನ್ನು ತಾಳಬೇಕೆಂದು ನಾನು ಹೇಳಬಲ್ಲೆ. ನನ್ನಂತಹ ಕೋಟ್ಯವಧಿ ಜನರು ತಮ್ಮ ಜೀವಮಾನಗಳಲ್ಲಿ ಈ ಸತ್ಯವನ್ನು ಸಿದ್ಧಮಾಡಿ ತೋರಿಸಲು ಸಮರ್ಥರಾಗಲಿಕ್ಕಿಲ್ಲ; ಅದು ಅವರ ಪರಾಜಯವೇ ಹೊರತು ಶ್ರೀಕಾಲಾಬಾಧಿತ ಈ ತತ್ವದ ಪರಾಜಯವೆಂದಿಗೂ ಅಲ್ಲ.

ಸಶಕ್ತರ ಅಹಿಂಸೆ

ಬ್ರಿಟಿಶರೊಂದಿಗೆ ಹೋರಾಡಲು ಮಾರ್ಗ ತೋರಿಸಿದಂತೆ ಜಾತೀಯತೆಯನ್ನು, ಅಹಿಂಸಾತ್ಮಕವಾಗಿ ಹೋರಾಡುವ ರೀತಿಯನ್ನು ತೋರಿಸಲು ಗಾಂಧೀಜಿ ಶಕ್ತರಾಗಿಲ್ಲೆಂಬುದಾಗಿ ರಾಷ್ಟ್ರಪತಿಗಳು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ತಮ್ಮ ಉಪಸಂಹಾರದ ಭಾಷಣದಲ್ಲಿ ಹೇಳಿದರು. ತಾವೀಗ ಅಂಧಃಕಾರದಲ್ಲಿ ಅಲೆದಾಡುತ್ತಿರುವೆ, ನವಖಾಲಿ ಮತ್ತು ಬಿಹಾರದಲ್ಲಿಯ ತನ್ನ ಕಾರ್ಯದಿಂದ ಇಡೀ ಹಿಂದುಸ್ತಾನಕ್ಕಾಗಿಯೆ ಹಿಂದು ಮುಸಲ್ಮಾನ ಪ್ರಶ್ನೆಯನ್ನು ಬಿಡಿಸುತ್ತಿರುವೆ ಎಂದು ಗಾಂಧೀಜಿ ಹೇಳಿದ್ದರೂ ದೊಡ್ಡ ಪ್ರಮಾಣದಲ್ಲಿ ಈ ತಂತ್ರವನ್ನು ಎಂತು ಕಾರ್ಯಕ್ಷಮ ಮಾಡಬೇಕೆಂಬುದು ತಮಗೆ ತೋರದಾಗಿದೆಂದು ಅಧ್ಯಕ್ಷರು ನುಡಿದರು. ಇಂದು ಗಾಂಧೀಜಿಯನ್ನನುಸರಿಸದಿರುವದಕ್ಕೆ ಇದೇ ಕಾರಣವೆಂದೂ ಹಿಂದುಸ್ತಾನದ ವಿಭಜನೆಗೆ ಒಪ್ಪಿಗೆ ಕೊಡುವದಕ್ಕೂ ಇದೇ ಕಾರಣವೆಂದೂ ಅಧ್ಯಕ್ಷರು ಹೇಳಿದರು.

ಗಾಂಧೀಜಿಯವರು ಇದಕ್ಕೆ ಉತ್ತರಿಸಿದ್ದು, ಅಂಧಃಕಾರದಲ್ಲಿ ಅಲೆದಾಡುತ್ತಿರುವೆನೆಂದು ತಾವು ಹೇಳಿದುದರ ಅರ್ಥ ತಮ್ಮ ಅಭಿಪ್ರಾಯದಂತೆ ಜನರು ನಡೆಯುವಂತೆ ಮಾಡದೇಹೋದರೆ ಏನು ಮಾಡಬೇಕೆಂದು ತಮಗೆ ತೋರದಾಗಿದೆಂದಿರುವದು. ಬ್ರಿಟಿಶರೊಡನೆ ನಡೆಸಿದ ಹೋರಾಟದಲ್ಲಿ ಅಹಿಂಸೆ ಎಷ್ಟು ಪರಿಣಾಮಕರ ಶಸ್ತ್ರವೆಂದು ಸಿದ್ಧವಾಗಿದೆಯೊ ಜಾತೀಯತೆಯನ್ನು ಹೊಡೆದು ಹಾಕುವದರಲ್ಲಿಯೂ ಅದು ಅಷ್ಟೇ ಪರಿಣಾಮಕರವಾಗಿದೆಂಬಲ್ಲಿ ಸಂದೇಹವಿಲ್ಲ. ಬೇರೆ ಯಾವ ಬಗೆಯಿಂದಲೂ ಬ್ರಿಟಿಶರ ಶಸ್ತ್ರಾಸ್ತ್ರಗಳನ್ನೆದುರಿಸುವದು ಶಕ್ಯವಿಲ್ಲೆಂದು ಗೊತ್ತಾದ್ದರಿಂದ ಜನರು ತಮ್ಮನ್ನು ಅನುಸರಿಸಿದ್ದುಂಟು. ಅದು ಅಶಕ್ತರ ಅಹಿಂಸೆ. ಜಾತೀಯತೆಯ ಹೋರಾಟದಲ್ಲಿ ಅದು ಪರಿಣಾಮಕರವಾಗದು. ಅದನ್ನು ಹೊಡೆದು ಹಾಕಲು ಸಶಕ್ತರ ವಿಶುದ್ಧವಾದ ಅಹಿಂಸಾಸ್ತ್ರದ ಅವಶ್ಯಕತೆಯುಂಟು.

ಪ್ರಾರ್ಥನಾ ಸಭೆಯಲ್ಲಿ ಮಾತಾಡುತ್ತ ಗಾಂಧೀಜಿ ಹೇಳಿದರು. ಅಶಕ್ತರ ಅಹಿಂಸೆಯ ಬದಲು ಸಶಕ್ತರ ಮತ್ತು ಸಮರ್ಥರ ಅಹಿಂಸೆಯ ಪ್ರಚಾರ ಮಾಡುವಲ್ಲಿ ತಾವು ಶಕ್ತರಾಗದಿದ್ದುದನ್ನು ಒಪ್ಪುತ್ತೇನಾದರೂ ಆ ಅನುಪಮ ಸದ್ಗುಣವನ್ನು ಹೇಗೆ ಸಂಪಾದಿಸಿಕೊಳ್ಳಬೇಕೆಂಬುದು ತಮಗೆ ಗೊತ್ತಿಲ್ಲೆಂದು ಅದರ ಅರ್ಥವಲ್ಲೆಂದು ತಿಳಿಸಿದರು. ಪ್ರತಿಯೊಬ್ಬ ಮಾನವನಲ್ಲಿ ಪರಮಾತ್ಮ ಇರುವನೆಂಬುದರ ಅರಿವು ಇರತಕ್ಕದ್ದು ಅವಶ್ಯಕ. ಈ ಜ್ಞಾನವನ್ನು ಸಂಪಾದಿಸುವದಕ್ಕಾಗಿ ಮಂದಿರಕ್ಕೆ ಹೋಗುವದಲ್ಲ, ಹೋಗುವ ಅವಶ್ಯಕತೆಯಿಲ್ಲ. ದಿನಾಲು ಕೆಲವೊಂದು ನಿರ್ದಿಷ್ಟ ರೀತಿಯಿಂದ ಪರಮಾತ್ಮನ ನಾಮೋಚ್ಚಾರಣೆ ಮಾಡುವದು ಅವಶ್ಯವಿಲ್ಲ. ಹಿಂದುಸ್ತಾನದಲ್ಲಿಯ ಕೋಟ್ಯನುಕೋಟಿ ಜನರು ನಿತ್ಯವೂ ರಾಮ, ಅಲ್ಲಾ, ಖುದಾ, ಹುರಾ, ಮಜದಾ, ಜೆಹೋವಾ ಮೊದಲಾದ ನಾಮಗಳಿಂದ ಒಂದೇ ಕಾಲಕ್ಕೆ ಪರಮಾತ್ಮನ ನಾಮೋಚ್ಚಾರಮಾಡಿದರೆಂದು ತಿಳಿಯುವಾ, ಆದರೆ ಈ ರೀತಿ ನಾಮೋಚ್ಚಾರ ಮಾಡುವಾಗ ಕುದುಕತನ, ಘಟಿಂಗತನ, ಜೂಜಾಟ, ಪೇಟೆಯಲ್ಲಿಯ ಜೂಜಾಟ, ಕಳ್ಳಪೇಟೆ ಮೊದಲಾದುವು ಯಥಾಪ್ರಕಾರ ನಡೆದರೆ ಆ ರಾಮನಾಮೋಚ್ಚಾರವು ನಿರರ್ಥಕ ಮತ್ತು ಅಕೀರ್ತಿಕರವಾದ ಪ್ರಯತ್ನವೆನ್ನೆ. ಕುಟಿಲಾತ್ಮನಿಗೆ ಸರ್ವ ಪರಿಶುದ್ಧ ಪರಮಾತ್ಮನ ಜ್ಞಾನವೆಂದೂ ಆಗಲಾರದು. ಆದುದರಿಂದ ಸಶಕ್ತರ ಅಹಿಂಸೆಯ ಪಾಠ ಹೇಳಿಕೊಡುವ ಕಾರ್ಯಕ್ರಮವಿರಲಿಲ್ಲೆಂದು ಹೇಳುವದಕ್ಕಿಂತ ಆ ಬಗೆಯ ಅಹಿಂಸೆಯ ಪಾಠ ಕಲಿಯಲು ಹಿಂದುಸ್ತಾನ ಸಿದ್ಧವಿರಲಿಲ್ಲ ಎಂದು ಹೇಳುವದು (ಅದು ಸತ್ಯವಾಗಿದ್ದರೆ) ಹೆಚ್ಚು ಸತ್ಯವಾಗಿದೆ. ಅಶಕ್ತರ ಅಹಿಂಸೆಯ ಕಾರ್ಯಕ್ರಮವೆಷ್ಟು ಆಕರ್ಷಕವಾಗಿದ್ದಿತೊ ಅಷ್ಟು ಇದೀಗ ಉಲ್ಲೇಖಿಸಿದ ಸಶಕ್ತರ ಅಹಿಂಸಾಕಾರ್ಯಕ್ರಮ ಆಕರ್ಷಕವಾಗಿರಲಿಲ್ಲೆಂದು ಹೇಳುವದು ಅತ್ಯಂತ ನ್ಯಾಯ್ಯವಾಗಿದೆ, ಉಚಿತವಾಗಿದೆ. ದಿನಾಲು ಪ್ರಾರ್ಥನಾ ಸಭೆಗಳಲ್ಲಿಯ ತಮ್ಮ ಸಂದೇಶವನ್ನು ಕೇಳುವವರಾದರೂ ತಮ್ಮ ಜೀವನದಲ್ಲಿ ಸಶಕ್ತರ ಅಹಿಂಸೆಯನ್ನು ಅಳವಡಿಸಿಕೊಳ್ಳುವದಾರಿಯನ್ನು ಕಂಡುಕೊಳ್ಳುವಲ್ಲಿ ಧುರೀಣರಾಗುವರೆಂದು ಆಸೆಯಾಗಿದೆ.

ಹೊಸದಿಲ್ಲಿ —ಸುಶೀಲಾ ನಯ್ಯರ

೨೨—೬—೧೯೪೭

ಹರಿದ್ವಾರದ ನಿರಾಶ್ರಿತರಲ್ಲಿ

ಸರಹದ್ದು ಪ್ರಾಂತದಿಂದ ಅನೇಕರು ಮತ್ತು ಪಂಜಾಬದಿಂದ ಹಲವರು ನಿರಾಶ್ರಿತರು ಬಂದು ಭಂಗೀ ಕಾಲನಿಯಲ್ಲಿ ಮಹಾತ್ಮರನ್ನು ಕಂಡು ತಮ್ಮ ಕಷ್ಟಪರಂಪರೆಯನ್ನು ತೋಡಿಕೊಂಡರು. ಹರಿದ್ವಾರದಲ್ಲಿಯ ಶಿಬಿರವನ್ನು ಸಂದರ್ಶಿಸಬೇಕೆಂದು ಅವರು ಮಹಾತ್ಮರನ್ನು ಒತ್ತಾಯ ಪಡಿಸಿದರು. ಕಾರ್ಯ ನಿಮಿತ್ತ ದಿಲ್ಲಿಯಲ್ಲಿರಬೇಕಾದ್ದರಿಂದ ತಮ್ಮ ಪ್ರತಿನಿಧಿಯಾಗಿ ಗಾಂಧೀಜಿ, ಪಂಡಿತ ಜವಾಹರಲಾಲಜಿಯವರೊಡನೆ ೨೧ ನೇ ತಾರೀಖು ಹರಿದ್ವಾರಕ್ಕೆ ಹೋದರು. ವೈದ್ಯಕೀಯ ಪರೀಕ್ಷೆಗಾಗಿ ನನ್ನನ್ನು ತಮ್ಮ ಸಂಗಡ ಕರೆದುಕೊಂಡು ಹೋದರು.

ಹರಿದ್ವಾರದಲ್ಲಿಯ ನಿರಾಶ್ರಿತರನ್ನು ಆಯಿದು ಆರು ಶಿಬಿರಗಳಲ್ಲಿಡಲಾಗಿದೆ., ಗಾಂಧೀಜಿ ಭೆಟ್ಟಿಯಿತ್ತಾಗ ಅವರ ಸಂಖ್ಯೆ ೩೨೦೦೦ ಇದ್ದಿತು. ನಾನು ಎಲ್ಲ ಶಿಬಿರಗಳನ್ನು ಸಂದರ್ಶಿಸಿದೆ. ಮಾರವಾಡಿ ಪರಿಹಾರ ಸಮಿತಿಯವರು ನಡೆಸುತ್ತಿರುವ ಮತ್ತು ಬಿರ್ಲಾ ಬಂಧುಗಳು ನಡೆಸುತ್ತಿರುವ ಶಿಬಿರಗಳನ್ನು ಬಿಟ್ಟರೆ ಉಳಿದ ಎಲ್ಲ ಶಿಬಿರಗಳ ಪರಿಸ್ಥಿತಿ ಸಮಾಧಾನಕರವಾಗಿರಲಿಲ್ಲ. ಈ ಎರಡು ಪರಿಹಾರ ಸಮಿತಿಗಳಾದರೊ ಬಹಳ ಕಡಮೆ ಜನರಿಗೆ ಪರಿಹಾರ ಕೊಡುತ್ತಿರುವವು. ಸ್ತ್ರೀ-ಪುರುಷರು ಮಕ್ಕಳು ಹೊಲಸಿನಲ್ಲಿಯೆ ಬಿದ್ದುಕೊಂಡಿರುವರು. ಅವರಿರತಕ್ಕ ಸ್ಥಳವಾದರೂ ತೀರ ಸಾಲದಷ್ಟು. ನೊಣಗಳು ಆ ಸ್ಥಳವನ್ನು ಮುತ್ತಿಕೊಂಡಿವೆ. ಸ್ವಚ್ಛತೆ ಮತ್ತು ವೈದ್ಯಕೀಯ ಸೌಕರ್ಯಗಳು ಬಹಳ ಕಡಮೆ. ಆ ೩೨೦೦೦ ನಿರಾಶ್ರಿತರಲ್ಲಿ ೪೦೦—೫೦೦ ಜನ ಗರ್ಭಿಣಿಸ್ತ್ರೀಯರಿರುವರೆಂದು ಹೇಳಲಾಗುತ್ತದೆ. ಅವರನ್ನು ಉಪಚರಿಸಲು ಯಾವದೇ ಬಗೆಯ ವ್ಯವಸ್ಥೆಯಿರಲಿಲ್ಲೆಂದು ನನಗೆ ತಿಳಿದಮಟ್ಟಿಗೆ ಮೇಲಿಂದ ಹೇಳಬಲ್ಲೆ.

ಕಾಲರಾ ಪಿಡುಗು ಹಬ್ಬಬಾರದೆಂದು ಶಿಬಿರಗಳಲ್ಲೆಲ್ಲ ಡಿ. ಡಿ. ಟಿಯನ್ನು ಹೊಡೆಸುವ ವ್ಯವಸ್ಥೆ ಇರತಕ್ಕದ್ದು ಮತ್ತು ಕಸಗೂಡಿಸುವ ವ್ಯವಸ್ಥೆಯೂ ಇನ್ನಷ್ಟು ಚೆನ್ನಾಗಿರತಕ್ಕದ್ದು. ನಿರಾಶ್ರಿತರಾದರೂ ತಮ್ಮ ತಮ್ಮಲ್ಲಿಯೆ ಸ್ವಚ್ಛತಾದಳಗಳನ್ನು ಮಾಡಿಕೊಳ್ಳಬೇಕು. ಶಿಬಿರಗಳಲ್ಲಿ ಅವಶ್ಯಕ ವ್ಯವಸ್ಥೆಯನ್ನು ಮಾಡಲು ನಿರಾಶ್ರಿತರ ಸಂಘಟನೆಯನ್ನು ಏಕೆ ಮಾಡಬಾರದೆಂಬದಕ್ಕೆ ಏನೂ ಕಾರಣಗಳಿಲ್ಲ.

ಹೊಸದಿಲ್ಲಿ ಸುಶೀಲಾ ನಯ್ಯರ

೨೨—೬—೧೯೪೭

ಮುಂಬಯಿಯಲ್ಲಿ ಪೋಲೀಸರ ಗೋಳೀಬಾರು

ರೇಲ್ವೆ ಕೂಲಿಕಾರರ ಮೇಲೆ

ಕೇಂದ್ರ ಸಂಬಳ ಸಮಿತಿಯವರು ರೇಲ್ವೆ ಕೆಲಸಗಾರರಿಗೆ ಗೊತ್ತುಪಡಿಸಿದ ಸಂಬಳದ ಪ್ರಮಾಣವನ್ನು ನಿಷೇಧಿಸುವದಕ್ಕಾಗಿ ೨೭ ನೇ ತಾರೀಖು ಮುಂಜಾನೆ ಮುಂಬಯಿಯಲ್ಲಿ ಜಿ. ಆಯ. ಪಿ. ಮತ್ತು ಬಿ. ಬಿ. ಸಿ. ಆಯ. ರೇಲ್ವೆಗಳ ನಾಲ್ಕು ವರ್ಕಶಾಪುಗಳಲ್ಲಿಯ ಸುಮಾರು ೨೫ ಸಾವಿರ ಕೂಲಿಕಾರರು ಸಂಪನ್ನು ಹೂಡಿ ಗಾಡಿಗಳ ಮೇಲೆ ಕಲ್ಲು ಮುಂತಾದ್ದನ್ನು ಒಗೆದದ್ದರ ಪರಿಣಾಮವಾಗಿ ಪೋಲೀಸರು ಗೋಳೀಬಾರು ಮಾಡಬೇಕಾಯಿತು. ಕೆಲಸಗಾರರು ಸಂಪು ಹೂಡಿ ವರ್ಕಶಾಪಗಳಿಂದ ಹೊರಬಿದ್ದು ಬರೆ ಹೋಗುವ ಗಾಡಿಗಳ ಮೇಲೆಲ್ಲ ಕಲ್ಲುಗಳನ್ನೆಸೆಯಹತ್ತಿದ್ದರಿಂದ ಗೋಳೀಬಾರು ಮಾಡಬೇಕಾಯಿತು. ೧೬ ಜನ ಕೆಲಸಗಾರರಿಗೆ ಮತ್ತು ಕೆಲ ಪೋಲೀಸ ಅಧಿಕಾರಿಗಳಿಗೆ ಗಾಯಗಳಾದವು. ಒಬ ಸತ್ತನು.

ಆಸ್ತಿಯ ಹಸ್ತಾಂತರ ಪ್ರತಿಬಂಧಕ ಆರ್ಡಿನನ್ಸು

ಮದ್ರಾಸಿ ಪ್ರಾಂತದಲ್ಲಿ

ಮದ್ರಾಸ ಗವರ್ನರರು ಮದ್ರಾಸ ಜಮೀನದಾರಿ, ಸಾರ್ವಜನಿಕ ಅರಣ್ಯ ಮತ್ತು ಖಾಸಗಿ ಭೂಮಿ ಹಸ್ತಾಂತರ ಪ್ರತಿಬಂಧಕ ಆರ್ಡಿನನ್ಸನ್ನು (೧೯೪೭) ೨೭ ನೇ ತಾರೀಖಿನ ದಿನ ಹೊರಡಿಸಿದ್ದಾರೆ. ಜಮೀನದಾರಿಯಲ್ಲಿ ಸಾರ್ವಜನಿಕ ಅರಣ್ಯ ಮತ್ತು ಭೂಮಿಗಳನ್ನು ಮನಸ್ಸಿಗೆ ಬಂದಂತೆ ಹಸ್ತಾಂತರಗೊಳಿಸುವದನ್ನು ಪ್ರತಿಬಂಧಿಸುವದೆ ಈ ಆರ್ಡಿನನ್ಸಿನ ಉದ್ದೇಶವಾಗಿದೆ. ಇಡೀ ಪ್ರಾಂತಕ್ಕೆಲ್ಲ ಇದು ಅನ್ವಯಿಸುವದು, ಈ ಆರ್ಡಿನನ್ಸಿನ ವಿರುದ್ಧ ಆಸ್ತಿಯನ್ನು ಹಸ್ತಾಂತರಗೊಳಿಸುವವನಿಗೆ ೨ ವರ್ಷ ಶಿಕ್ಷೆ ಮತ್ತು ೫೦೦೦ ರೂಪಾಯಿ ವರೆಗೆ ದಂಡವನ್ನು ವಿಧಿಸಲಾಗುವದು.

ಕಂದಾಯ ಮಂತ್ರಿಗಳಾದ ಶ್ರೀ ಕಳಾ ವೆಂಕಟರಾಯರು ಇದನ್ನು ಸ್ಪಷ್ಟೀಕರಿಸುತ್ತ ಜಮೀನದಾರಿಯಲ್ಲಿ ರೈತರನ್ನು ಹೊರಗೆ ಹಾಕುವದು, ಅರಣ್ಯಗಳನ್ನು ನಾಶಗೊಳಿಸುವದು ಮೊದಲಾದವುಗಳು ನಡೆದದ್ದರಿಂದ ಸರಕಾರದ ಸಲಹೆಯಿಂದ ಗವರ್ನರರು ಈ ಆರ್ಡಿನನ್ಸನ್ನು ಹೊರಡಿಸಬೇಕಾಯಿತು. ರೈತರು ದುರಾಗ್ರಹದಿಂದ ಹೊಲಗಳಲ್ಲಿ ಹೋಗಿ ಕೂಡ್ರುವದು ಮೊದಲಾದ್ದರ ಬಗ್ಗೆ ಸರಕಾರದವರು ಎಚ್ಚರಿಕೆ ಕೊಟ್ಟಿದ್ದಾರೆ. ಇಂಥ ಕೃತ್ಯಗಳನ್ನು ತಡೆಯಲು ಎಲ್ಲ ಬಗೆಯ ಉಪಾಯ ಕೈಕೊಳ್ಳಲಾಗುವದೆಂದೂ ಮಂತ್ರಿಗಳು ಹೇಳಿದರು.

ಮದ್ರಾಸಪ್ರಾಂತದಲ್ಲಿಯ ಆಹಾರ ಪರಿಸ್ಥಿತಿ

ಪ್ರಾಂತದಲ್ಲಿಯ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುತ್ತ ಮದ್ರಾಸ ಸರಕಾರದ ಜೂನ ೨೭ ರ ಪತ್ರಿಕಾವೃತ್ತಾಂತವೊಂದು ಇಡಿಯ ಪ್ರಾಂತದಲ್ಲಿಯ ಆಹಾರ ಪರಿಸ್ಥಿತಿ ಅತ್ಯಸ್ವಸ್ಥಕರವಿದೆಯೆಂದೂ ಧಾನ್ಯ ಸಂಗ್ರಹವನ್ನು ಉತ್ತಮಗೊಳಿಸದೆ ಹೋದರೆ ಅಥವಾ ಪ್ರಾಂತದ ಹೊರಗಿನಿಂದ ಹೆಚ್ಚು ಧಾನ್ಯ ಬರದೆ ಹೋದರೆ ಆಗಸ್ಟದಲ್ಲಿ ಒಂದು ಭಯಂಕರ ಉತ್ಪಾತ ಉಂಟಾಗುವದು ಖಂಡಿತವೆಂದೂ ಸಾರಿದೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

ಬರುವ ಜುಲೈ ೩ ಮತ್ತು ೪ ನೇ ತಾರೀಖು ಮೈಸೂರಿನಲ್ಲಿ ಕೂಡಲಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಾರ್ಯ ಸಮಿತಿ ಮತ್ತು ಸಾಧಾರಣ ಸಭೆಯನ್ನು ಕೆಲ ಅನಿವಾರ್ಯ ಕಾರಣಗಳ ಮೂಲಕ ತಾ ೯ ಮತ್ತು ೧೦ ಕ್ಕೆ ಬದಲಿಸಲಾಗಿದೆಂದು ಕಾರ್ಯದರ್ಶಿಗಳು ೨೭ ನೇ ತಾರೀಖಿಗೆ ಪ್ರಕಟನೆ ಹೊರಡಿಸಿದಾರೆ.

ಕರ್ನಾಟಕ

ಧಾರವಾಡ

ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಳದವರು ಬಿನ್ನವಿಸಿಕೊಂಡ ಪ್ರಕಾರ ಗದಗ ನಗರ ಸಭೆಯವರು ೬—೬—೪೭ ನೇ ದಿನ ಕೂಡಿದ ಸಾಧಾರಣ ಸಭೆಯಲ್ಲಿ ಶ್ರೀ ದುಂಡಪ್ಪ ದೂನವಿ ಹಿಂಗೆ ಅಸ್ಪತ್ರಿ ರಸ್ತೆಗೆ ಕಿತ್ತೂರ ಚೆನ್ನಮ್ಮ ರಾಣೀ ಬೀದಿ ಎಂದು ನಾಮಕರಣ ಮಾಡಿ ಅದರಂತೆ ಪ್ರಸಿದ್ಧಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಇದೇ ೨೦ ನೇ ತಾರೀಕಿನಲ್ಲಿ ಜಗದ್ಗುರುಗಂಗಾಧರ ವಾಣಿಜ್ಯ ಮಹಾವಿದ್ಯಾಲಯ ಸ್ಥಾಪಿತವಾಯಿತು. ಎಫ್ ವಾಯ ಕಾಮರ್ಸ ಮತ್ತು ಇಂಟರ್-ಕಾಮರ್ಸ ಎರಡು ವರ್ಗಗಳು ಈಗ ಪ್ರಾರಂಭವಾಗಿವೆ. ಎಫ್‌ವಾಯದಲ್ಲಿ ೧೨೫ ವಿದ್ಯಾರ್ಥಿಗಳಿಗೆ ಪ್ರವೇಶವಿದ್ದು ಈಗಾಗಲೆ ಎಲ್ಲ ಸ್ಥಳಗಳು ತುಂಬಿವೆ. ೨೫ ವಿದ್ಯಾರ್ಥಿಗಳಿಗಾಗಿ ಭೋಜನಾಲಯ ಮತ್ತು ವಸತಿಯು ಏರ್ಪಾಟದೆ. ಶ್ರೀ ಯಾದವರಾವ ಎಸ್ ಮಹಾಜನ ಇವರು ಪ್ರಿನ್ಸಿಪಾಲರು ಕರ್ನಾಟಕ ಲಿಂಗಾಯತ ಎಜ್ಯುಕೇಶನ ಸಂಸ್ಥೆಯವರು ಈ ವಿದ್ಯಾಲಯವನ್ನು ತೆರೆದಿರುವರು.

ಹುಬ್ಬಳ್ಳಿಯಲ್ಲಿಯ ಶ್ರೀ ಸತ್ಯಬೋಧವಾಚನಾಲಯವನ್ನು ಹೆಚ್ಚು ಉದಾತ್ತ ಹಾಗು ವಿಶಾಲದೃಷ್ಟಿಯಿಂದ ನಡೆಸಿ ಅದನ್ನು ಊರ್ಜಿತಗೊಳಿಸಲು. ಶ್ರೀ ವೆಂಕೋಬಾಚಾರ್ಯರ ಅಧ್ಯಕ್ಷತೆಯಲ್ಲಿ ೧೭ ಜನರದೊಂದು ಕಾರ್ಯಕಾರಿಸಮಿತಿಯನ್ನು ಆರಿಸಲಾಯಿತು. ಶ್ರೀ ಇನಾಮದಾರ ದೇಸಾಯಿ ದತ್ತಮೂರ್ತಿ ಮತ್ತು ಹೊಳಲಗುಂದಿಯವರು ಜತೆ ಕಾರ್ಯದರ್ಶಿಗಳಾದರು, ವಾಚನಾಲಯದ ವಿವಿಧ ಚಟುವಟಿಕೆಗಳ ಬಗ್ಗೆ ಕರಡು ತಯಾರುಮಾಡಲಾಗುವದು.

ಮುಂಗಾರಿ ಗೋದಿಗೆ ಹತ್ತುವರೋಗವನ್ನು ಪ್ರತಿಬಂಧಿಸುವದಕ್ಕಾಗಿ ಜೂನ ೧ ರಿಂದ ಸಪ್ಟಂಬರ ೩೦ ರ ಕೊನೆಯವರೆಗೆ ಮುಂಗಾರಿ ಗೋದಿ ಬಿತ್ತುವದನ್ನು ಸರಕಾರದವರು ನಿರ್ಬಂಧಿಸಿದ್ದಾರೆ

ಹಾನಗಲ ತಾಲೂಕಿನ ಚಿಕ್ಕೇರಿ, ಕಪ್ಪರಿಸ್ಯ ಕೊಪ್ಪ ಗ್ರಾಮಗಳ ಕುಲಕರ್ಣಿ ಶ್ರೀ ವ್ಯಾಸಾಚಾರ ಉಪಾಧ್ಯ ಇವರಿಗೆ ತಾಲೂಕಾಧಿಕಾರಿಗಳು ರೈತರ ತಗಾಯಿಬಾಂಡು ಬರೆಯಲು ಒತ್ತಾಯಪಡಿಸಿದರು. ಆ ಕೆಲಸ ತನ್ನದಲ್ಲೆಂದು ಕುಲಕರ್ಣಿ ಬರೆಯಲು ಒಪ್ಪದ್ದರಿಂದ ರಾಜೀನಾಮೆ ಬರೆಸಿಕೊಂಡು ಅದು ಮಂಜೂರಾದುದನ್ನು ಸಹ ತಿಳಿಸದೆ ಎರಡನೆಯವರಿಗೆ ಚಾರ್ಜಕೊಡಿಸಿರುವರೆಂದು ವತನದಾರ ಕುಲಕರ್ಣಿ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹುಬ್ಬಳ್ಳಿ ಹರಿಜನ ವಿದ್ಯಾವರ್ಧಕ ಸಂಘದ ಸಭೆ ಶ್ರೀ ಫಕೀರಪ್ಪ ಘೋಡಕೆಯವರ ಅಧ್ಯಕ್ಷತೆಯಲ್ಲಿ ಸೇರಿ ಸಂಘದ ಕಟ್ಟಡ ಮತ್ತು ಬೋರ್ಡಿಂಗಿನ ಕಟ್ಟಡಕ್ಕಾಗಿ ಸಾರ್ವಜನಿಕರಿಂದ ಧನಸಹಾಯವನ್ನು ಕೋರುವ ಗೊತ್ತುವಳಿಯಾಯಿತು.

ಜೋಗವಿದ್ಯುಚ್ಛಕ್ತಿಯನ್ನು ಕಾರವಾರಜಿಲ್ಲೆ ಹಾಗು ಹಾನಗಲ್ಲ ತಾಲೂಕಿನ ಮಾರ್ಗವಾಗಿ ಹುಬ್ಬಳ್ಳಿ ಗದಗ ಮೊದಲಾದ ನಗರಗಳಿಗೆ ಒಯ್ಯುವದರ ಸಂಬಂಧದ ವಿಚಾರಕ್ಕೆ ಶ್ರೀ ನರಸಿಂಗರಾವ ದೇಸಾಯಿ ಕಲ್ಲಾಪುರರ ಅಧ್ಯಕ್ಷತೆಯಲ್ಲಿ ಸೇರಿತ್ತು. ವಿದ್ಯುಚ್ಛಕ್ತಿ ಸಿಕ್ಕದ್ದಾದರೆ ತಾಲೂಕಿನಲ್ಲಿ ಸಾವಿರ ಎಕರೆಗಿಂತ ಹೆಚ್ಚು ಕಬ್ಬನ್ನು ೧೦ ಸಾವಿರಕ್ಕಿಂತ ಹೆಚ್ಚು ಭತ್ತವನ್ನು ಬೆಳೆಯಬಹುದು ಅದುದರಿಂದ ಹರಿಹರ ರಾಣೀಬೆನ್ನೂರ ಮಾರ್ಗಕ್ಕಿಂತ ಈ ಮಾರ್ಗದಿಂದ ಪೂರೈಸಬೇಕೆಂದು ಶ್ರೀ ಸಿಂಧೂರ ಸಿದ್ಧಪ್ಪನವರು ಮಾತಾಡಿದರು.

ಉತ್ತರ ಕರ್ನಾಟಕ ಸಂಸ್ಥಾನಗಳವತಿಯಿಂದ ಘಟನಾಸಮಿತಿಗೆ ಇಬ್ಬರು ಪ್ರತಿನಿಧಿಗಳು ಆರಿಸಲ್ಪಡುವದಿದ್ದು ಅವರಲ್ಲಿ ರಾಜರ ವತಿಯಿಂದ ಈಗಾಗಲೆ ಶ್ರೀ ಮಾಧವರಾವ ಅನೆಯವರು ಆರಿಸಲ್ಪಟ್ಟಿರುವರು. ಇನ್ನುಳಿದ ಒಂದು ಸ್ಥಳಕ್ಕೆ ಕನ್ನಡಿಗರನ್ನು ಆರಿಸುವದು ನ್ಯಾಯ್ಯವಾಗಿದ್ದರಿಂದ ಕನ್ನಡಿಗನನ್ನೇ ಆರಿಸಬೇಕು. ಹಾಗಾಗದಿದ್ದರೆ ಕನ್ನಡಿಗರಿಗೆ ಪ್ರಾತಿನಿಧ್ಯವೆ ಸಿಕ್ಕಂತಾಗುವದಿಲ್ಲೆಂದು ಮುಂತಾಗಿ ಕರ್ನಾಟಕ ಏಕೀಕರಣ ಸಂಘದ ಗೌರವ ಕಾರ್ಯದರ್ಶಿಗಳು ಪ್ರಕಟನೆಹೊರಡಿಸಿದ್ದಾರೆ.

ಇದೇ ಜುಲೈ ತಿಂಗಳಲ್ಲಿ ಗದಗ ತಾಲೂಕ ರೈತ ಪರಿಷತ್ತನ್ನು ಸೇರಿಸಬೇಕೆಂದು ಗೊತ್ತುಮಾಡಲಾಗಿದೆ

ಜಿಲ್ಲಾ ಲೋಕಲ್ ಬೋರ್ಡಿನವರು ಲೋಕಲ್ ಫಂಡನ್ನು ೩ ಆಣೆಗೇರಿಸಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಸರಕಾರದವರು ಸೂಚಿಸಿದ್ದು ಇದಕ್ಕೆ ೮ ಜಿಲ್ಲೆಗಳು ಈಗಾಗಲೆ ಒಪ್ಪಿವೆ. ಆದರೆ ಹಾಗೆ ಮಾಡದೆ ಬೇರೆ ಬಗೆಯಿಂದ ಹಣಕೂಡಿಸಬೇಕೆಂದು ಶ್ರೀ ನರಸಿಂಗರಾವ ದೇಸಾಯಿ ಕಲ್ಲಾಪುರರು ಸೂಚಿಸಿದ್ದಾರೆ ವ್ಯಾಪಾರಸ್ಥರ ಹಾಗು ಕಾರಖಾನೆದಾರರ ೫೦೦ ರೂ. ಉತ್ಪನ್ನದ ಮೇಲೆ ಕರ ಹಾಕಬೇಕು

ಬೆಳಗಾವಿ

ಮದ್ರಾಸ ಪ್ರಾಂತದ ಟೆಂಗಿನಕಾಯಿಗಳನ್ನು ತರಲು ಆಯಾತ ಅಪ್ಪಣೆಯ ಅವಶ್ಯಕತೆಯಿಲ್ಲೆಂದು ಬೆಳಗಾವಿ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರಕಟಿಸುತ್ತಾರೆ.

ಸವದತ್ತಿಯ ಮೋಟರ ಸ್ಟ್ಯಾಂಡಿನ ಹತ್ತಿರ ಮಸೀದಿಯಲ್ಲಿ ಕೊಳ್ಳದಾಟ ನಡೆಯುತ್ತಿದ್ದು ಪೋಲೀಸರು ಅತ್ತ ಗಮನ ಕೊಡದ್ದರಿಂದ ಹಾಗೆಯೇ ಸಾಗಿದೆಯೆಂದೂ ಇನ್ನುಮೇಲಾದರೂ ಅವರು ಅತ್ತ ಗಮನಿಸಬೇಕೆಂದೂ ಓರ್ವರು ತಿಳಿಸುತ್ತಾರೆ.

ಬೆಳಗಾವಿ ಜಿಲ್ಲಾ ಮ್ಯಾಜಿಸ್ಟ್ರೇಟರು ಹುಕುಮೊಂದನ್ನು ಹೊರಡಿಸಿ ಬೆಳಗಾವಿಯ ಮುನಸಿಪಾಲಟಿಯ ಹದ್ದಿನಲ್ಲಿಯೂ ಕ್ಯಾಂಟೋನಮೆಂಟನಲ್ಲಿಯೂ ಲಾಠಿ, ದೊಣ್ಣೆ, ಹದನಾದ ಯಾವದೇ ಬಗೆಯ ಶಸ್ತ್ರಗಳನ್ನು ಯಾರೂ ಧರಿಸಬಾರದೆಂದು ವಿಧಿಸಿರುವರು. ಇದಲ್ಲದೆ ಜಾತಿ ಜಾತಿಗಳಲ್ಲಿಯೂ ಪಕ್ಷ ಪಕ್ಷಗಳಲ್ಲಿಯೂ ವೈಮನಸ್ಸನ್ನು ಹುಟ್ಟಿಸುವಂಥ ಪ್ರಕ್ಷುಬ್ಧಗೊಳಿಸುವಂಥ ಯಾವದೇ ಬಗೆಯ ಚಿತ್ರ ಇಲ್ಲವೆ ಪಟಗಳನ್ನು ಪ್ರದರ್ಶಿಸಬಾರದೆಂದೂ ವಿಧಿಸಿದ್ದಾರೆ.

ಬೆಳಗಾವಿ ಮುನಸಿಪಾಲಿಟಿ ಮೆಂಬರರಿಬ್ಬರನ್ನು ಅಪಹರಿಸಿದ ಸಂಬಂಧವಲ್ಲಿ ಮ್ಯಾಜಿಸ್ಟ್ರೇಟರಲ್ಲಿ ಚಾರ್ಜಶೀಟು ಕಳಿಸಲಾಗಿದೆ. ಮುನಿಸಿಪಾಲಿಟಿ ಅಧ್ಯಕ್ಷರ ಮೂವರು ತಮ್ಮಂದಿರೂ ಮುನಸಿಪಲ್ ಸದಸ್ಯ ಶ್ರೀ ಶೇರೀಯವರು ಇದರಲ್ಲಿ ಆರೋಪಿಗಳಿರುವರು.

ಬೆಳವಡಿ ದೊಡಪಾಡ ನನಗುಂಡಿ ಕೊಪ್ಪದ ರಸ್ತೆ ಕೆಲಸ ೮—೫—೪೭ ರಿಂದ ಪ್ರಾರಂಭವಾಗಿದ್ದು ಒತ್ತರದಿಂದ ಸಾಗಿದೆ. ಈ ರಸ್ತೆ ಸಾಕಷ್ಟು ವಿಶಾಲವಾದ್ದರಿಂದ ಜನತೆಗೆ ಅನುಕೂಲವಾಗುವದು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯ ಬಡ ಹಳ್ಳಿಗರು ಹುಂಜದ ಪಂದ್ಯದಲ್ಲಿ ಬಹಳ ಹಣ ವೆಚ್ಚಮಾಡುತ್ತಿರುವದರಿಂದ ಸರಕಾರದವರು ಜೂಜಾಟ ಕಾಯದೆಯನ್ವಯ ಕಾರವಾರ ಅಂಕೋಲಾ ಕುಮಟಾ ಹೊನ್ನಾವರ ತಾಲೂಕ ಮತ್ತು ಭಟಕಳ ತಾಲೂಕುಗಳಲ್ಲಿ ಈ ಪಂದ್ಯವನ್ನು ನಿರ್ಬಂಧಿಸಿದ್ದಾರೆ.

ಒಂದು ಪೌಂಡು ನಾಲ್ಕುಔಂಸು ತೂಕವುಳ್ಳ ನಾಲ್ಕು ಬಾಂಬುಗಳಿದ್ದ ಒಂದು ಲೋಹಪೆಟ್ಟಿಗೆಯು ಅಂಕೋಲೆಯ ಹತ್ತಿರ ಸಮುದ್ರ ತೀರದಾಚೆ ೨೧ನೇ ತಾರೀಕು ಸಿಕ್ಕಿರುತ್ತದೆ. ಅದಕ್ಕೂ ಮೊದಲು ಎರಡು ದಿನಗಳ ಹಿಂದೆ ಅದೇ ಸ್ಥಳದ ಹತ್ತರ ಇನ್ನೊಂದು ಪೆಟ್ಟಿಗೆ ಸಿಕ್ಕಿದ್ದು ಎರಡೂ ಪೆಟ್ಟಿಗೆಗಳಲ್ಲಿಯ ಬಾಂಬುಗಳು ಒಂದೇ ಮಾದರಿಯವಿರುವವು. ಈ ಪೆಟ್ಟಿಗೆಗಳನ್ನು ಮುಂಬೈ ಹತ್ತಿರ ಒಗೆದಿರಬಹುದೆಂದೂ ತೆರೆಯು ಹೊಡೆತಕ್ಕೆ ಅಂಕೋಲೆಯ ವರೆಗೆ ಅವು ಬಂದಿರಬಹುದೆಂದೂ ನಂಬಲಾಗುತ್ತದೆ.

ಮುನಸಿಪಲ್ ಭಾಗಬಿಟ್ಟು ಉಳಿದ ಹಳ್ಳಿಗಳ ರೈತರ ಮೇಲೆ ೧ ರಿಂದ ೧೦ ರೂ. ವರೆಗೆ ಮನೆಪಟ್ಟಿ ಹಾಕಬೇಕು. ಅಂದರೆ ಬೇಕಾದ ಹಣಸಿಕ್ಕುವದೆಂದು ಮುಂತಾಗಿ ಅವರು ಸೂಚಿಸಿದ್ದಾರೆ.

ಜುಲೈ ೬...೭ ನೇ ತಾರೀಕಿಗೆ ಮುಂಡರಗಿ ಪೇಠಾ ಹರಿಜನ ಸಭೆ ಜರುಗಲಿದ್ದು ಮಂತ್ರಿವರ್ಯ ತಪಾಸೆಯವರು ಬರಲಿದ್ದಾರೆ.

೧೯೪೭—೪೭ ನೇ ಇಸ್ವಿಯ ಧಾನ್ಯ ಎತ್ತುವಳಿ ಬೇಡಿಕೆಗೆ ಒಟ್ಟು ಆಹಾರಬೆಳೆ ಕ್ಷೇತ್ರದ ಬದಲಾಗಿ ಆಆ ಹಳ್ಳಿಗಳಿಗೆ ಗೊತ್ತುಮಾಡಿದ ಆಹಾರಕ್ಕೆ ಬೆಳೆ ಕ್ಷೇತ್ರದ ಅಂಶವನ್ನು ತಳಹದಿಯೆಂದು ಹಿಡಿಯಲಾಗುವದೆಂದು ಸರಕಾರದ ಹುಕುಮು ಹೊರಟಿದೆ.

ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ತಮ್ಮ ಶಿವರಾಮಯ್ಯನವರ ಮಗಳು ಸೌ. ರಾಜೇಶ್ವರೀದೇವಿಯು ವಿದ್ಯುಚ್ಛಕ್ತಿ ವಿನಿಯೋಗ ಶಾಸ್ತ್ರದಲ್ಲಿ ಮೈಸೂರು ಸಂಸ್ಥಾನದ ಅಭ್ಯಾಸಪ್ರಕ್ರಿಯೆಯಲ್ಲಿ ಪಾರಂಗತಳಾಗಿ ಮುಂದೆ ಹೆಚ್ಚಿನ ಅಭ್ಯಾಸಕ್ಕಾಗಿ ೨೯ ಕ್ಕೆ ಮುಂಬಯಿಯಿಂದ ಅಮೇರಿಕೆಗೆ ಹಡಗ ಮಾರ್ಗವಾಗಿ ಪ್ರಯಾಣ ಬೆಳೆಸಿದಳು. ಧಾರವಾಡ ನಿಲ್ದಾಣದಲ್ಲಿ ಶ್ರೀ ಮುದುವೀಡು ಕೃಷ್ಣರಾಯರು ಮತ್ತು ಅವರ ಹೆಂಡತಿ ಶುಭಾಶೀರ್ವಾದದೊಡನೆ ಅವರನ್ನು ಬೀಳ್ಕೊಟ್ಟರು.

ವಿಜಾಪುರ

ಬಾಗಲಕೋಟೆ ಮುನಸಿಪಾಲಟಿ ಅಸ್ಪತ್ರೆಯ ಡಾಕ್ಟರ ಜೋಶಿಯವರಿಗೆ ಬೈಲಹೊಂಗಲಕ್ಕೆ ವರ್ಗವಾದ್ದರಿಂದ ಮೆಡಿಕಲ್ ಅಸೋಸಿಯೇಶನ್ನಿನವರು ಅವರನ್ನು ಬೀಳ್ಕೊಟ್ಟರು. ಆಗ ಅವರು ಅಸೋಸಿಯೇಶನಕ್ಕೆ ೫೦ ರೂ. ಕಾಣಿಕೆ ಕೊಟ್ಟರು.

ಬಾಗಲಕೋಟೆಯಲ್ಲಿ ೧೯...೨೦ ನೇ ತಾರೀಕು ಎರಡು ದಿನ ರಾತ್ರಿ ಹಳಪೇಟೆ ಮತ್ತು ವೆಂಕಟಪೇಟೆಯಲ್ಲಿ ಬಾಂಬಿನಂತಹ ಅರಿವೆಯ ಚೆಂಡು ಬಿದ್ದು ಭಯಂಕರ ಸಪ್ಪಳ ಕೇಳ ಬಂದಿತು. ನೆಲ ತೆಗ್ಗು ಬಿದ್ದಿದ್ದು ಯಾರಿಗೂ ಅಪಾಯವಾಗಿಲ್ಲ.

ಮುದ್ದೇಬಿಹಾಳ ಪಂಚಾಯತ ಕಮೀಟಿಯ ಸರಪಂಚರ ಚುನಾವಣೆ ಜರುಗಿ ಶ್ರೀ ರಾಮರಾವ ಕುಲಕರ್ಣಿಯವರು ಸರಪಂಚರಾಗಿ ಆರಿಸಿ ಬಂದರು.

ವಿಜಾಪುರ ಜಿಲ್ಹೆಯ ಕಾಂಗ್ರೆಸ್ ಕಾರ್ಯಕರ್ತರುರಾದ ಶ್ರೀ ಬಿ. ಟಿ ಮುರನಾಳ ಮತ್ತು ಶಿದ್ದಪ್ಪ ಮೂಳವಾಡರು ಹರಿಜನೋದ್ಧಾರ ಕಾರ್ಯಕ್ಕಾಗಿ ಬಾಗಲಕೋಟೆ ತಾಲೂಕಿನಲ್ಲಿ ಸಂಚರಿಸಿದರು.

ಮುಂಬಯಿ ಶಾಸನ ಸಭೆಯ ಸದಸ್ಯರಾದ ಶ್ರೀ ಮಗನಲಾಲ ಶಹಾ ಇವರು ತಮ್ಮ ಮತದಾರ ಕ್ಷೇತ್ರದಲ್ಲಿ ಅಂದರೆ ವಿಜಾಪುರ ಜಿಲ್ಹೆಯ ಉತ್ತರ ಭಾಗದಲ್ಲಿ ೨೩ ನೇ ತಾರೀಕಿನಿಂದ ಸಂಚಾರ ಪ್ರಾರಂಭಿಸಿದ್ದಾರೆ. ಹದಿನೈದು ದಿನಗಳು ಅವರು ಸಂಚರಿಸಿ ಜಾಗತಿಕ ಪರಿಸ್ಥಿತಿ ಹಿಂದುಸ್ತಾನದ ಮಜದೂರ ಸೇವಕ ಸಂಘ ಮೊದಲಾದ್ದರ ಬಗ್ಗೆ ಜನತೆಗೆ ತಿಳಿಸಿ ಹೇಳುವರು.

ಬಳ್ಳಾರಿ

ಬಳ್ಳಾರಿಯಲ್ಲಿ ೧೯ನೇ ಸಾಯಂಕಾಲ ಶ್ರೀ ಬಿ. ಗುರುರಾಜರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮದ್ಯಪ್ರತಿಬಂಧ ಕಾರ್ಯಕ್ರಮ ಸತ್ವರವಾಗಿ ನೆರವೇರಿಸಲು ಎಂ. ಸೋಮಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಪ್ರತಿಯೊಬ್ಬ ಮನುಷ್ಯನಿಗೆ ಕನಿಷ್ಠ ೧೨ ಔಂಸು ಸೀದಾ ಕೊಡಬೇಕೆಂದು ಕಲೆಕ್ಟರರನ್ನು ಬಿನ್ನವಿಸುವ ಗೊತ್ತುವಳಿಯೂ ಇದೇ ಸಭೆಯಲ್ಲಿ ಸ್ವೀಕೃತವಾಯಿತು.

ಬಳ್ಳಾರಿಯಲ್ಲಿ ಶ್ರೀ ಲೋಕೂರ ಸುಬ್ರಹ್ಮಣ್ಯರ ಅಧ್ಯಕ್ಷತೆಯಲ್ಲಿ ದಿ. ತಾರಾನಾಥ ಆಯುರ್ವೇದ ವಿದ್ಯಾಲಯದ ಸಮಿತಿ ಸಭೆ ಸೇರಿ ಶ್ರೀ ಮಾಜಾನಿ ಸೋಮಪ್ಪನವರು ಅಧ್ಯಕ್ಷರಾಗಿಯೂ ವೆಂಕಟರಮಣ ಮಾಲನ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಜುಲೈಮೂರನೇ ವಾರದಲ್ಲಿ ವಿದ್ಯಾಲಯ ಪ್ರಾರಂಭವಾಗುವದು. ಪ್ರಾರಂಭೋತ್ಸವಕ್ಕಾಗಿ ಮಂತ್ರಿವರ್ಯ ಎ. ಬಿ. ಶೆಟ್ಟರು ಅಥವಾ ಎಚ್ ಸೀತಾರಾಮ ರೆಡ್ಡಿಯವರು ಅಹ್ವಾನಿತರಾಗಿದ್ದಾರೆ.

ಕೊಲ್ಹಾಪುರ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಾಧವರಾವ ಬಾಗಲರು ೨೨ ಕ್ಕೆ ಮಹಾರಾಜರನ್ನು ಭೆಟ್ಟಿಯಾಗಿ ರಾಜ್ಯಘಟನೆಯಲ್ಲಿಯ ಲೋಪದೋಷಗಳನ್ನು ಚರ್ಚಿಸಿದರು. ಕೊಲ್ಹಾಪುರ ಘಟನಾ ಕಾನೂನಿಗೆ ತಿದ್ದುಪಡಿ ಸೂಚಿಸಿದರೆ ಅವನ್ನು ಮನ್ನಿಸಲಾಗುವದೆಂದು ಮಹಾರಾಜರು ಅಪ್ಪಣೆ ಕೊಡಿಸಿದರೆಂದು ತಿಳಿಯುತ್ತದೆ.

ಕನ್ನಡ ಸಂಸ್ಥಾನ

ಜುಲೈ ೨೦ ರಿಂದ ೫ ದಿವಸ [illegible]ಯಲ್ಲಿ ಸಂಗೀತ ಸಮ್ಮೇಲನ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಸಮಿತಿ ನೇಮಿಸಲಾಗಿದೆ. ಸಮ್ಮೇಲನಕ್ಕೆ ದಕ್ಷಿಣ ಹಿಂದುಸ್ತಾನದ ಪ್ರಮುಖ ಸಂಗೀತಗಾರರನ್ನು ಆಹ್ವಾನಿಸಲಾಗುವದು.

ರಾಯಬಾಗದಲ್ಲಿ ಪ್ರಸಿದ್ಧ ವೈದ್ಯರಾಗಿದ್ದ ಶ್ರೀ ಕೃಷ್ಣ ದೀಕ್ಷಿತ ರಾಯಬಾಗಕರರು [illegible] ೮೫ನೇ ವರ್ಷದಲ್ಲಿ ರಾಯಬಾಗದಲ್ಲಿ ಸ್ವರ್ಗಸ್ಥರಾದರು. ಅವರು ಹುಬ್ಬಳ್ಳಿಯಲ್ಲಿಯ ಪ್ರಸಿದ್ಧ ವೈದ್ಯರಾಗಿರುವ ಶ್ರೀ ಅನಂತಕೃಷ್ಣ ರಾಯಬಾಗಕರರ ತಂದೆಯವರಿವರು.

ಸೊಂಡೂರು ಪ್ರಜಾಮಂಡಳದ ಅಧ್ಯಕ್ಷರಾದ ಶ್ರೀ ಎಲ್. ಎಸ್. ಹಣಮಂತರಾಯರು ದಕ್ಷಿಣ ಸಂಸ್ಥಾನ ಹಾಗು ಮದ್ರಾಸ ಸಂಸ್ಥಾನಗಳು ಕೂಡಿ ಘಟನಾ ಸಮಿತಿಗೆ ಆರಿಸಲಿರುವ ಒಂದು ಸ್ಥಳಕ್ಕೆ ಹುರಿಯಾಳಾಗಿ ನಿಂತಿರುವರು.

ಶ್ರೀ ಬಿ. ಅರ್. ಪಟವರ್ಧನರು ಹಿರಿ ಮಿರಜ ಸಂಸ್ಥಾನದಲ್ಲಿ ಮಿರಜ ಜಿಲ್ಲಾ ಹಾಗು ಸೆಶನ್ಸ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ.


ಜಮಖಂಡಿಯ ಶ್ರೀ ಸಾಬಡೆಯವರ ಕೊಲೆಯ ಪ್ರಕರಣದಲ್ಲಿ ಶೋಧ ನಡೆಸಲು ಸಂಸ್ಥಾನ ಸರಕಾರದವರು ಎನ್. ವಿ. ಕುಲಕರ್ಣಿ ನಿವೃತ್ತ ಸಿ ಆಯ ಡಿ ಡಿ. ವಾಯ. ಎಸ್. ಪಿ. ಯವರನ್ನು ನೇಮಿಸಿದ್ದಾರೆ. ಪ್ರಜಾ ಪರಿಷತ್ತಿನ ಕಾರ್ಯಕಾರೀ ಮಂಡಳದ ಸಭೆ ಸೇರಿ ಇಂಥ ಗಂಭೀರ ಪರಿಸ್ಥಿತಿಯಲ್ಲಿ ದರಬಾರದವರ ಈ ಪ್ರಯತ್ನ ಸಮಾಧಾನಕರವೂ ಉಪಯುಕ್ತವಲ್ಲವೆಂದೂ ಅಭಿಪ್ರಾಯಪಟ್ಟಿದೆ.

ಶ್ರೀ ಮಸಾಳಕರರನ್ನು ಸಸ್ಪೆಂಡಮಾಡಲು ಸಂಸ್ಥಾನದ ಜನತೆ ಕೇಳಿಕೊಂಡಿದ್ದರೂ ತಾಂತ್ರಿಕ ಕಾರಣಗಳಿಗಾಗಿ ಹಾಗೆ ಮಾಡಲಿಕ್ಕಿಲ್ಲೆಂದು ಹೇಳಲಿಕ್ಕೆ ಬರುವದಿಲ್ಲೆಂದೂ ಅವರ ಮೇಲೆ ಇನ್ನೂ ಕೆಲ ಗಂಭೀರ ಸಂಶಯಗಳಿರುವದರಿಂದ ಅವರನ್ನು ಕೂಡಲೆ ಸಸ್ಪೆಂಡ ಮಾಡಬೇಕೆಂದೂ ಈ ಕಾರ್ಯಕಾರೀ ಮಂಡಳದವರು ನಿರ್ಣಯಿಸಿದರು. ಈ ಸಂಬಂಧದಲ್ಲಿ ಅವಶ್ಯಕ ಉಪಾಯ ಕೈಕೊಳ್ಳಲು ಶ್ರೀ ಪಿ. ಎ. ಪಟವರ್ಧನ, ಅಂದಾನೆಪ್ಪ ದೊಡ್ಡಮೇಟಿ, ಡಾ. ಹುಲ್ಯಾಳಕರ ಮತ್ತು ನಾನಾಸಾಹೇಬ ಮಸೂರಕರ ಇವರ ಮಂಡಳವನ್ನೊಂದು ನೇಮಿಸಲಾಯಿತು.

ಜಮಖಂಡಿ ಸಂಸ್ಥಾನದಲ್ಲಿ ಇತ್ತೀಚಿಗೆ ಕೊಲೆ, ಸುಲಿಗೆ, ದರೋಡೆ ನಡೆದದ್ದರಿಂದ ಗಂಡಾಂತರದ ಪರಿಸ್ಥಿತಿಯುಂಟಾಗಿದೆ. ಆತ್ಮ ಸಂರಕ್ಷಣೆಗಾಗಿ ಜನತೆ ಸರಕಾರವನ್ನೇ ಅವಲಂಬಿಸಿದೆ. ಊರು ಊರಿಗೆ ಸಂಘಟನೆಯನ್ನು ಮಾಡಬೇಕೆಂದೂ ಪರಿಷತ್ತಿನವರು ಕೇಳಿಕೊಂಡರು.

ಮಿರಜ ಶೇತಕರಿ ಕಾಮಗಾರ ಸಂಘದ ಶ್ರೀ ಜೆ. ಎಂ. ಚರವಡು ಇವರು ಕಾಳು ಪೂರೈಕೆ ಕಮೀಟಿಯ ಅಧ್ಯಕ್ಷ ಶ್ರೀ ವಿ. ವಿ. ಫಡಕೆ ಮಿರಜ ಸಂಸ್ಥಾನದ ದಿವಾಣರಾಗಿದ್ದ ಡಿ. ಎಸ್. ಗೋಖಲೆ, ಸ್ಟೇಟ ಎಂಜಿನಿಯರ ವಿ. ಪಿ. ಬೇಡೇಕರ, ಅ. ಕಂಟ್ರೋಲರ ಎಂ. ಎಚ್. ಆಠ್ಲೆ, ಪೂರೈಕೆ ಅಧಿಕಾರಿ ಅರ್. ಎನ್. ಜೋಶಿ ವ್ಯಾಪಾರಸ್ಥರಾದ ಅಬ್ದುಲ್ಲಾ ಇವರ ಮೇಲೆ ಸಂರಕ್ಷಣ ಕಾಯದೆಯನ್ವಯ ಖಟ್ಲೆ ಹಾಕಿದ್ದಾರೆ. ೪೨೦೦೦ ರೂಪಾಯಿ ತಕ್ಕೊಂಡು ೬೨೦ ಚೀಲ ಸಕ್ಕರೆಯನ್ನು ಕಳ್ಳಪೇಟೆಯಲ್ಲಿ ಮಾರಿದರೆಂದು ಅವರ ಮೇಲೆ ಅರೋಪ.

ಮಿರಜ ನಗರಕ್ಕೆ ನೀರಿನ ಪೂರೈಕೆಗಾಗಿ ಕೃಷ್ಣಾ ನದಿಯಿಂದ ಒಂದು ಯೋಜನೆ ಮಾಡಿದ್ದು ಅದಕ್ಕಾಗಿ ೧೨ ಲಕ್ಷ ರೂಪಾಯಿ ಸಾಲ ತೆಗೆಯುವರೆಂದು ತಿಳಿಯುತ್ತದೆ. ಇದಕ್ಕಾಗಿ ಡಿಬೆಂಚರ ತೆಗೆಯುವರು.



ಮುಂಬಯಿ

ಮುಂಬಯಿ ಸರಕಾರದವರು ಪ್ರೌಢ ಶಿಕ್ಷಣ ಪ್ರಸಾರಕ್ಕಾಗಿ ಶಿಕ್ಷಕರನ್ನು ತರಬೇತು ಮಾಡುವ ಸೂಚನೆಯನ್ನು ಮನ್ನಿಸಿ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವ ಯೋಜನೆ ನಡೆಸಿದ್ದಾರೆ.

ಮುಂಬಯಿ ಪ್ರಾಂತದವರು (ನಾಸಿಕ, ಅಹಮ್ಮದನಗರ, ಪುಣೆ, ಸಾತಾರೆ, ಸೊಲ್ಲಾಪುರ, ದೇಗಾಂವ ಜಿಲ್ಲೆಗಳು ಹೊರತು) ಬೆಲ್ಲ ತರಿಸಿಕೊಂಡು ಜಿಲ್ಲೆಯಲ್ಲಿ ಬೇಕಾದವರಿಗೆ ಬೇಕಾದಷ್ಟನ್ನು ನಿಯಂತ್ರಿತ ಧಾರಣೆಗೆ ಲೈಸೆನ್ಸ್ ತೆಗೆದುಕೊಂಡು ಮಾರಬಹುದೆಂದೂ ತಿಳಿದು ಬಂದಿದೆ.

ಮುಂಬಯಿ ಸರಕಾರವು ವಿಜಾಪೂರ ತಾಲೂಕಿನಲ್ಲಿಯ ಮುಕನಾಪೂರ ಮತ್ತು ಬಾಮಲ್ಲಿ ಹಳ್ಳಿಗಳಲ್ಲಿ ಹಾಗೂ ಬಾಗೇವಾಡಿ ತಾಲೂಕಿನ ಅಸಂಗಿಯಲ್ಲಿ ಕೆರೆಗಳ ಕಟ್ಟಡಕ್ಕಾಗಿ ೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ೩ ಕೆರೆಗಳಿಂದ ೩೦೦೦ ಎಕರೆ ಭೂಮಿಗೆ ನೀರು ಸಿಗುವುದು.

ಜೂನ ೧೫ ರ ರಾತ್ರಿ ೪ ಜನರು ಕೊಡಲಿ ಲಾಠಿಗಳೊಡನೆ ಪುಣೆಯ ತಳೇಗಾಂವದ ಭಾಡೆಯ ಬಳಿಯಲ್ಲಿ ಗುಡ್ಡದ ಮೇಲಿನ ಭಂಡಾರದಾರಾ ಗುಡಿಯಲ್ಲಿ ನುಗ್ಗಿ ಮಲಗಿದ್ದ ೧೬ ವರ್ಷದ ಹುಡುಗನನ್ನು ಕೊಂದು ಪೂಜಾರಿಯನ್ನು ಥಳಿಸಿ ಅಲ್ಲಿದ್ದ ಪಾತ್ರೆಪಡಗ, ವಸ್ತ್ರಬಟ್ಟೆಗಳನ್ನು ಕದ್ದೊಯ್ದರು.

ಮುಂಬಯಿ ಸರಕಾರದವರು ಅಗ್ರಣಿಯೆಂಬ ಮರಾಠೀ ದೈನಿಕ ಪತ್ರಿಕೆಗೆ ೩ ವಾರಗಳ ವರೆಗೆ ಜಾತೀಯ ಪರಿಸ್ಥಿತಿಗೆ ಸಂಬಂಧಿಸಿದ ಯಾವ ವಿಷಯವನ್ನೂ ಪ್ರಕಟಿಸಬಾರದೆಂದು ವಿಧಿಸಿದ್ದಾರೆ.

ತಾ. ೧೮ ರ ಸಾಯಂಕಾಲ ಅಹಮ್ಮದಾಬಾದದ ಅರಳೆ ಮತ್ತು ನೂಲಿನ ವಖಾರಕ್ಕೆ ಬೆಂಕಿ ಹತ್ತಿ ಬಹಳ ಹಾನಿಯಾಯಿತು. ಅದರಿಂದ ೨ ಲಕ್ಷ ರೂಪಾಯಿಯ ಅರಳೆ ಭಸ್ಮವಾಯಿತೆಂದು ಗೊತ್ತಾಗಿದೆ.

ದಕ್ಷಿಣ ಸಂಸ್ಥಾನಗಳ ಸಂಯುಕ್ತ ಹೈಕೋರ್ಟು ಅಗಸ್ಟ ತಿಂಗಳಲ್ಲಿ ವಿಸರ್ಜಿಸಲ್ಪಡುವುದು.

ತಾ. ೧೮ ರಲ್ಲಿ ಮುಂಬಯಿ ಸರಕಾರದ ಔದ್ಯೋಗಿಕ ಶಾಖೆಯ ಮಂತ್ರಿಗಳಾದ ಶ್ರೀ ತಪಾಸೆಯವರು ಪುಣೆಯಲ್ಲಿ ತಮಗಿತ್ತ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತ ಔದ್ಯೋಗಿಕ ಅಭಿವೃದ್ಧಿಯ ಬಗ್ಗೆ ಸರಕಾರದ ಧೋರಣವನ್ನು ವಿವರಿಸಿದರು.

ಕೇಂದ್ರ ಸರಕಾರದ ಮುಂಬಯಿಯ ಉತ್ಪನ್ನ ಕರ ಮತ್ತು ಸುಂಕದ ಶಾಖೆಯ ೧೯೦೦ ನೌಕರರು ಮಧ್ಯವರ್ತಿ ಸಂಬಳ ಸಮಿತಿಯು ಸೂಚಿಸಿದ ಸಂಬಳ ಪ್ರಮಾಣದ ನಿಷೇಧಾರ್ಥ ತಾ ೧೯ ರಲ್ಲಿ ಧರಣೆ ಸಂಪು ಹೂಡಿದರು.

ಭಾರತ ಸೇವಕ ಸಮಾಜದ ಕಾರ್ಯಕಾರಿ ಸಮಿತಿಯವರು ತಾ. ೧೯ ರಲ್ಲಿ ಪಂಡಿತ ಕುಂಝುರೂರವರ ಅಧ್ಯಕ್ಷತೆಯಲ್ಲಿ ಪುಣೆಯಲ್ಲಿ ಸಭೆ ಸೇರಿ ಭಾರತವನ್ನು ವಿಭಜಿಸುವ ಬ್ರಿಟಿಶ ಯೋಜನೆಯ ಬಗ್ಗೆ ವಿಷಾದ ವ್ಯಕ್ತಪಡಿಸಿ ಸ್ವಾಗತಿಸಿದ್ದಲ್ಲದೆ ನರೇಂದ್ರರು ಘಟನಾ ಸಮಿತಿಗೆ ಸೇರಬೇಕೆಂದು ಅಭಿಪ್ರಾಯಪಟ್ಟರು.

ಪ್ಯಾರಿಸದಲ್ಲಿ ಅಫಗಾಣ ರಾಯಭಾರಿಗಳಾಗಿರುವ ಸರದಾರ ಶಹಾ ವಲ್ಲಿಖಾನರು ಮುಂಬಯಿಯಲ್ಲಿ ಒಂದು ಸಂದರ್ಶನದಲ್ಲಿ ಹಿಂದುಸ್ತಾನದ ವಿರುದ್ಧ ಮುಸಲ್ಮಾನ ರಾಷ್ಟ್ರಗಳು ಒಟ್ಟುಗೂಡುವ ಸಂಭವವಿಲ್ಲೆಂದು ಹೇಳಿದರು.

ಮೊದಲೇ ನಿರ್ಧರಿಸಿದ ಪ್ರಕಾರ ಮುಂಬಯಿ ನಗರದ ೨೦೦೦ ಮಾಧ್ಯಮಿಕ ಶಿಕ್ಷಕರು ತಾ. ೨೧ ರಲ್ಲಿ ಒಂದು ದಿನದ ಮಟ್ಟಿಗೆ ಸಂಪು ಹೂಡಿದರು. ತತ್ಪರಿಣಾಮವಾಗಿ ೧೨೦೦೦೦ ವಿದ್ಯಾರ್ಥಿಗಳಿಗೆ ಅನಾಯಾಸವಾಗಿ ಬಿಡುವು ದೊರೆತಂತಾಯಿತು.

ಮುಂಬಯಿಯ ಕಾಳ್ಬಾದೇವಿ ಗೋಳೀಬಾರ ಖಟ್ಲೆಯ ವಿಚಾರಣೆಯಾಗಿ ಆರೋಪಿಗಳಾದ ಮಿರ್ಜಾ ಅಬ್ದುಲ್ ಮಜೀದ್ ಮತ್ತು ಗುಲಾಮ ಅಹಮ್ಮದರಿಗೆ ಮರಣದಂಡನೆ ವಿಧಿಸಲಾಯಿತು.

ಸಿಂಧ

"ಇನ್ನು ಜಿನ್ನಾರ ಮುಖಂಡತ್ವ ಹೋಗಬೇಕು. ವಿಕೃತ ಪಾಕಿಸ್ತಾನಕ್ಕೆ ಒಪ್ಪಿಕೊಂಡದ್ದು ಈಗಿನ ಲೀಗಿನ ಮುಖಂಡರ ದೌರ್ಬಲ್ಯದ್ಯೋತಕವಾಗಿದೆ. ಮುಸ್ಲಿಮರ ಗುರಿಯಾದ ಸ್ವತಂತ್ರ ಸಾಮ್ಯವಾದೀ ಪ್ರಜಾಸತ್ತಾತ್ಮಕ ಪಾಕಿಸ್ತಾನವನ್ನು ಜಿನ್ನಾರ ಮುಖಂಡತ್ವದಲ್ಲಿ ಸ್ಥಾಪಿಸಲು ಸಾಧ್ಯವಿಲ್ಲದುದರಿಂದ ಅವರ ಮುಖಂಡತ್ವವನ್ನು ಕಿತ್ತೊಗೆಯಲು ಎಲ್ಲರೂ ನೆರವಾಗಬೇಕು" ಎಂದು ನವಾಬಶಹಾ ಜಿಲ್ಲಾ ಮುಸ್ಲಿಂಲೀಗ ಕಾರ್ಯ ಸಮಿತಿಯವರು ಒಂದು ಗೊತ್ತುವಳಿ ಪಾಸು ಮಾಡಿದ್ದಾರೆ.

ತಾ. ೨೨ ರಲ್ಲಿ ಅಮೇರಿಕೆಯಿಂದ ೪೮೯೦ ಟನ್ ಗೋದಿಯು ಕರಾಚಿ ಬಂದರಿಗೆ ಬಂದಿಳಿದಿದೆ.

ಮದ್ರಾಸ

ಚಿಂಗಲ್‌ಪೇಟೆಯ ಕಲೆಕ್ಟರರಾದ ಶ್ರೀ ಟಿ. ಎಸ್. ರಾಮಚಂದ್ರನ್‌ರು ಮದ್ರಾಸ ನಗರದಿಂದ ೬೫ ಮೈಲು ದೂರದಲ್ಲಿರುವ ನಂಬಕ್ಕವನ್ನು ಆರೋಗ್ಯದ ವಿಶ್ರಾಮಧಾಮವಾಗಿ ಮಾಡಲು ಯೋಜನೆ ತಯಾರಿಸಿದ್ದಾರೆಂದು ತಿಳಿದುಬಂದಿದೆ.

ತಾ ೨೦ ರಲ್ಲಿ ಮದ್ರಾಸಿನ ಟ್ರಿಪ್ಲಿಕೇನಿನ "ಯಂಗ್ ಮೆನ್ಸ್ ಕ್ರೆಸೆಂಟ್ ಸೊಸಾಯಿಟಿ"ಯ ಆಶ್ರಯದಲ್ಲಿ ಸಾರ್ವಜನಿಕ ಸಭೆ ಜರುಗಿ ಇತ್ತೀಚೆಗೆ ಮದ್ರಾಸ ಸರಕಾರದವರು ಕಾಲೇಜು ಫೀಯನ್ನು ಹೆಚ್ಚಿಸುವ ಸೂಚನೆ ತಂದಿರುವದನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳಲಾಯಿತು.

ಮದ್ರಾಸಿನ ಮೇಲ್ಮನೆಯ ಅಧ್ಯಕ್ಷರಾದ ಶ್ರೀ ಆರ್. ಬಿ. ರಾಮಕೃಷ್ಣರಾಜು ಅವರಿಗೆ ಇಂಗ್ಲೆಂಡಿನ ಕೆಳಮನೆಯ ಅಧ್ಯಕ್ಷರು ಅಭಿನಂದನೆಯನ್ನೂ ಪಾರ್ಲಿಮೆಂಟ ಪದ್ಧತಿಯ ವಿವರಣ ಪತ್ರಿಕೆಯನ್ನು ತಮ್ಮ ಸಹಿಯೊಡನೆಯೂ ಕಳುಹಿಸಿದ್ದಾರೆ.

ಮದ್ರಾಸ ಸರಕಾರವು ೩೦ ಆರೋಗ್ಯ ಕೇಂದ್ರಗಳನ್ನು ಈ ವರ್ಷ ಪಾಲ್ಘಾಟ, ತೆನಾಲಿ, ತಿರುವಣ್ಣಾಮಲೈ, ನಂದ್ಯಾಲ, ಈರೋಡೆ ಮೊದಲಾದ ಸ್ಥಳಗಳಲ್ಲಿ ಸ್ಥಾಪಿಸಲಿರುವರಂತೆ. ಇದು ಅವರ ಪಂಚವಾರ್ಷಿಕ ಯೋಜನೆಯ ಒಂದು ಅಂಗವೆಂದು ಹೇಳಲಾಗಿದೆ.

ಜೂನ ೧೯ ರಲ್ಲಿ ಅನಂತಪುರದಲ್ಲಿ ನೆರೆದ ಗೆಝೆಟೆಡ್ ಅಲ್ಲದ ಸರಕಾರೀ ನೌಕರರು ಸಭೆ ಸೇರಿ ಕೇಂದ್ರ ವೇತನ ಸಮಿತಿಯ ಸಲಹೆಗಳನ್ನು ಸಂಪೂರ್ಣವಾಗಿ ಅನ್ವಯಿಸಬೇಕೆಂದು ಸರಕಾರವನ್ನು ಪ್ರಾರ್ಥಿಸುವ ಗೊತ್ತುವಳಿಯನ್ನು ಅಂಗೀಕರಿಸಿದರು.

ಮದನಪಲ್ಲಿಯ ಖಾದಿ ತರಬೇತಿಯ ಶಾಲೆ ಮತ್ತು ಗ್ರಾಮೋದ್ಧಾರ ಶಾಲೆಗಳಿಗೆ ತಾ. ೨೦ ರಲ್ಲಿ ಶ್ರೀ ಟಿ. ಪ್ರಕಾಶಂರವರು ಭೆಟ್ಟಿಯಿತ್ತರು.

ಸೇಲಂ ಟೌನ್ ಕಾಂಗ್ರೆಸ ಕಮಿಟಿಯು ಜೂನ ೧೭ ರಲ್ಲಿ ಸಭೆ ಸೇರಿ ಅ. ಭಾ. ಕಾಂ. ಕಮಿಟಿಯು ಬ್ರಿಟಿಶ ಯೋಜನೆಯ ಸ್ವೀಕಾರದ ಗೊತ್ತುವಳಿಯನ್ನು ಸ್ವಾಗತಿಸುವ ಮತ್ತು ಹೈದರಾಬಾದ ತ್ರಾವಣಕೋರಗಳಂತಹ ಸಂಸ್ಥಾನಗಳ ಹಿನ್ನಡೆಯ ವರ್ತನೆಯನ್ನು ಖಂಡಿಸುವ ಠರಾವನ್ನು ಪಾಸುಮಾಡಿತು.

ಕಳ್ಳಪೇಟೆಯ ನಿರ್ಮೂಲನದ ಪೋಲೀಸರು ತಿರುಚುನಗರದ ಬಬ್ಬ ದೊಡ್ಡ ಜಮೀನುದಾರನ್ನು ಕಳ್ಳಪೇಟೆಗೊಯ್ಯುತ್ತಿದ್ದ ೨೦೦ ಚೀಲ ಆಹಾರ ಧಾನ್ಯವನ್ನು ಹಿಡಿದು ಅವನನ್ನು ವಿಚಾರಣೆಗೆ ಗುರಿಪಡಿಸಿರುವರು.

ಮದ್ರಾಸ ಸರಕಾರದ ಸ್ಥಾಯಿ ಸಮಿತಿಯು ಕೈಮಗ್ಗದ ನೇಕಾರರನ್ನು ಪರಸ್ಪರ ಸಹಾಯಕ ಸಂಘದೊಳಗೆ ತರುವ ಸಲಹೆಯನ್ನು ವಿಚಾರಿಸಲಿದೆಯೆಂದು ತಿಳಿದುಬರುತ್ತದೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

ಕಾರ್ಯಕಾರಿ ಮಂಡಳ ಹಾಗು ವಿಶೇಷ ಸಾಧಾರಣ ಸಭೆಗಳು

ಹುಬ್ಬಳ್ಳಿ—ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ವೆಂಕಟೇಶ ಮಾಗಡಿಯವರು ಈ ರೀತಿ ಪ್ರಕಟಿಸುತ್ತಾರೆ.

ತಾ. ೩—೭—೪೭ ಮಧ್ಯಾಹ್ನ ೨ ಗಂಟೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಳದ ಸಭೆಯು ಮೈಸೂರು ಜಿಲ್ಲಾ ಕಾಂಗ್ರೆಸ ಸಮಿತಿಯ ಕಚೇರಿಯಲ್ಲಿ ಮೈಸೂರಲ್ಲಿ ಕೂಡುವದು. ಕಾರ್ಯಕಾರಿ ಮಂಡಳದ ಎಲ್ಲ ಸದಸ್ಯರು ಬರಬೇಕಾಗಿ ವಿನಂತಿಯಿದೆ.

ತಾ. ೪-೭-೪೭ ಸಂಜೆಯ ೩ ಗಂಟೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ವಿಶೇಷ ಸಾಧಾರಣ ಸಭೆಯು ಮೈಸೂರಜಿಲ್ಲಾ ಕಾಂಗ್ರೆಸ ಸಮಿತಿಯ ಕಚೇರಿಯಲ್ಲಿ ಮೈಸೂರಲ್ಲಿ ಕೂಡುವದು. ಕ. ಪ್ರಾ. ಕಾಂ. ಕಮಿಟಿಯ ಸದಸ್ಯರೆಲ್ಲರು ಬರಬೇಕಾಗಿ ವಿನಂತಿಯಿದೆ.

ಹೊಸದಿಲ್ಲಿ

ಸೈನ್ಯದ ವಿಭಜನೆಯು ಜಾತೀಯ ತಳಹದಿಯ ಮೇಲೆ ಆಗದೆ ಪ್ರಾದೇಶಿಕ ತಳಹದಿಯ ಮೇಲೆ ಆಗುವದಾದರೂ ಸ್ವಯಂ ನಿರ್ಣಯವನ್ನೇ ಮುಖ್ಯ ತತ್ವವನ್ನಾಗಿಟ್ಟುಕೊಳ್ಳಲಾಗುವುದೆಂದು ತಾ. ೧೬ ರಲ್ಲಿ ವೈಸರಾಯರ ಭವನದಲ್ಲಿ ನಡೆದ ಸಂರಕ್ಷಣಾ ಮಂತ್ರಿಗಳ ಮತ್ತು ಇತರ ಸೈನ್ಯಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಯಿತೆಂದು ತಿಳಿದು ಬರುತ್ತದೆ.

"ಭಾವೀ ಪಾಕಿಸ್ತಾನವು ರದ್ದಾಗುವ ವರೆಗೆ ತಾವು ಉಪವಾಸ ಮಾಡಲಿರುವುದಾಗಿ ಓರ್ವ ದಂಪತಿಗಳು ತಿಳಿಸಿದ್ದಾರೆ. ಅವರಿಗೆ ಸಾರ್ವಜನಿಕ ಉಪವಾಸದ ಶಾಸ್ತ್ರ ಗೊತ್ತಿಲ್ಲೆಂದು ಹೇಳಬೇಕಾಗುತ್ತದೆ. ಈ ತರಹದ ಉಪವಾಸ ತಪ್ಪು"—ಎಂದು ಮಹಾತ್ಮಾ ಗಾಂಧಿಯವರು ತಾ.೧೭ರಲ್ಲಿ ಹೊಸದಿಲ್ಲಿಯಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ಹೇಳಿದರು.

ಮುನ್ಸೋಟಿ ಹಾಗೂ ಮುನ್ನಡೆಗಳ ಒಂದು ನಿಶ್ಚಿತ ಧೋರಣೆಯೇ ತನ್ನ ತಟಸ್ಥ ವೃತ್ತಿಗೆ ಕಾರಣವಾಗಿದೆಯೆಂದೂ ತನ್ನ ನಿಜವಾದ ಸಾಮರ್ಥ್ಯವಿಲ್ಲದೆ ಉದಾತ್ತೋದ್ದೇಶಗಳ ಪ್ರಕಟನೆಯಿಂದ ವೀರಪಕ್ಷವೆನಿಸಿಕೊಳ್ಳುವುದು ಬೇಡವೆಂದೂ ಸಮತಾವಾದೀ ಪಕ್ಷವು ಅ. ಭಾ. ಕಾ. ಸಮಿತಿಯ ಸಭೆಯಲ್ಲಿ ಮೌಂಟ್‌ಬ್ಯಾಟನ್ನರ ಯೋಜನೆಯ ಸ್ವೀಕಾರದ ಗೊತ್ತುವಳಿಯ ಬಗ್ಗೆ ತಾಟಸ್ಥ್ಯ ವಹಿಸಿದ್ದಕ್ಕೆ ಕಾರಣ ಕೊಟ್ಟು ಸಮತಾವಾದೀ ಧುರೀಣರಾದ ಶ್ರೀ ರಾಮ ಮನೋಹರ ಲೋಹಿಯಾರವರು ತಾ. ೧೭ ರಲ್ಲಿ ಪ್ರಕಟನೆ ಹೊರಡಿಸಿದರು.

ಗಡಿನಾಡು ಪ್ರಾಂತದ ಗವರ್ನರರ ರಜೆಯ ಅರ್ಜಿಯನ್ನು ವೈಸರಾಯರು ಮಾನ್ಯ ಮಾಡಿದರೆಂದೂ ಅವರ ಬದಲು ಸರ್ ಜಾನ್ ಲಾಕಹಾರ್ಟರು ತಾತ್ಕಾಲಿಕ ಗವರ್ನರರಾಗುವರೆಂದೂ ತಿಳಿದು ಬಂದಿದೆ.

ಹಿಂದುಸ್ತಾನದಲ್ಲಿಯ ಈಗಿನ ಆಹಾರ ಪರಿಸ್ಥಿತಿ ಬಹಳ ಗಂಡಾಂತರದ್ದಾಗಿದೆಯೆಂದೂ ಕಳೆದ ೩ ವರ್ಷಗಳಲ್ಲಿ ಎಂದೂ ಇಷ್ಟು ಕೆಟ್ಟದ್ದಿಲ್ಲೆಂದೂ ಉತ್ತರಾರ್ಧಗೋಲದಿಂದ ಗೋದಿ ಬರುವ ವರೆಗೆ ಅಂದರೆ ಸಪ್ಟಂಬರದ ವರೆಗೆ ಇದೇ ಪರಿಸ್ಥಿತಿ ಉಳಿಯುವದೆಂದೂ ಆಹಾರ ಶಾಖೆಯ ವಕ್ತಾರರೊಬ್ಬರು ತಾ. ೧೭ ರಲ್ಲಿ ಹೇಳಿದರು.

ಇದೇ ಅಗಸ್ಟದಲ್ಲಿ ಮಸಾಹತು ಸರಕಾರ ಸ್ಥಾಪಿತವಾದ ನಂತರ ಪಂ. ಜವಾಹರರು ವೈಸರಾಯರ ಕಾರ್ಯಕಾರೀ ಮಂಡಲದ ಉಪಾಧ್ಯಕ್ಷ ಪದವಿಯನ್ನು ಬಿಟ್ಟುಕೊಟ್ಟು ಹಿಂದುಸ್ತಾನದ ಮುಖ್ಯ ಮಂತ್ರಿಗಳಾಗುವರೆಂದು ತಿಳಿದು ಬಂದಿದೆ.

ಹಿಂದುಸ್ತಾನ ಸರಕಾರದ ಸೊತ್ತು ಹಾಗೂ ಹೊಣೆಗಳನ್ನು ಭಾವೀ ಸರಕಾರದ್ವಯದ ನಡುವೆ ಹಂಚುವ ಸಂಬಂಧದಲ್ಲಿ ಈಗ ೧೦ ತಜ್ಞ ಸಮಿತಿಗಳು ಮಂತ್ರಿಮಂಡಲದ ವಿಭಜನೆಯ ಸಮಿತಿಯ ನೇತೃತ್ವದಲ್ಲಿ ಕೆಲಸ ನಡೆಸಿರುವುವು.

ಬಂಗಾಲ

ಆಚಾರ್ಯ ಮತ್ತು ಶ್ರೀಮತಿ ಕೃಪಲಾನಿಯವರು ತಾ. ೧೮ ರಲ್ಲಿ ಕಲಕತ್ತೆಗೆ ತೆರಳಿದರು.

ಕಲಕತ್ತಾ ಪೂರ್ವ ಸಾಮಾನ್ಯ ಮತದಾರ ಸಂಘದಿಂದ ಬಂಗಾಲ ಶಾಸನ ಸಭೆಗೆ ನಡೆದ ಉಪಚುನಾವಣೆಯಲ್ಲಿ ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಾದ ಕಾಲಿಪಾದ ಮುಕರ್ಜಿಯವರು ಆರಿಸಿ ಬಂದರು.

ಬಂಗಾಲದ ಈಗಿನ ಮಂತ್ರಿಮಂಡಲವನ್ನು ವಿಸರ್ಜಿಸಿ ೨ ಪ್ರಾದೇಶಿಕ ಮಂತ್ರಿಮಂಡಲಗಳನ್ನು ರಚಿಸಬೇಕೆಂದು ಶ್ರೀ ಕಿರಣಶಂಕರ ರಾಯರು ಗವರ್ನರರಿಗೆ ಪತ್ರ ಬರೆದಿರುವರು.

ಬಂಗಾಲ ಶಾಸನ ಸಭೆಯ ಮುಸ್ಲಿಮೇತರ ಪ್ರದೇಶಗಳ ಪ್ರತಿನಿಧಿಗಳು ಜೂನ ೨೦ ರಲ್ಲಿ ಬಂಗಾಲವು ವಿಭಕ್ತವಾಗಬೇಕೆಂದು ನಿರ್ಣಯಿಸಿದರು.

ಆಸಾಮ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ಕಲಕತ್ತೆಯಲ್ಲಿ ತಾ. ೧೯ ರಲ್ಲಿ ಆಚಾರ್ಯ ಕೃಪಲಾನಿಯವರನ್ನು ಕಂಡು ಸಿಲ್ಹೆಟ ಮತಗಣನೆಯ ಬಗ್ಗೆ ಚರ್ಚೆ ಮಾಡಿದರು.

ಬಂಗಾಲವು ವಿಭಾಗಿಸಲ್ಪಡಬೇಕೆಂದು ನಿರ್ಧಾರವಾಗಿರುವುದರಿಂದ ಸದ್ಯದ ಘಟನಾ ಸಮಿತಿ ಮತ್ತು ಪಾಕಿಸ್ತಾನದ ಘಟನಾ ಸಮಿತಿಗಳಿಗೆ ಹೊಸ ಪ್ರತಿನಿಧಿಗಳನ್ನಾರಿಸಿ ಕಳುಹಲು ಅನುಕ್ರಮವಾಗಿ ಪಶ್ಚಿಮ ಮತ್ತು ಪೂರ್ವ ಬಂಗಾಲ ಭಾಗಗಳ ಶಾಸನ ಸಭಾಸದಸ್ಯರಿಗೆ ಬಂಗಾಲ ಗವರ್ನರರು ಆದೇಶ ಮಾಡಿದ್ದಾರೆ.

ಶ್ರೀ ಕಿರಣಶಂಕರ ರಾಯರು ತಾ. ೨೧ ರ ಸಂಜೆ ಬಂಗಾಲ ಗವರ್ನರರನ್ನು ಕಂಡು ವಂಗಭಂಗದಿಂದುದ್ಭವಿಸುವ ಸಮಸ್ಯೆಗಳನ್ನು ಚರ್ಚಿಸಿದರು.

ಪಶ್ಚಿಮ ಬಂಗಾಲ ಶಾಸನ ಸಭಾಪಕ್ಷವು ಕಾಂಗ್ರೆಸ ಕಾರ್ಯಸಮಿತಿಯ ಸದಸ್ಯರಾದ ಡಾ ಪ್ರಫುಲ್ಲಚಂದ್ರ ಘೋಷರನ್ನು ಧುರೀಣರನ್ನಾಗಿ ಆರಿಸಿತು.

ಹಿಂದೀ ಕ್ರಿಶ್ಚಿಯನ ಸಾರ್ವಜನಿಕ ಸಭೆಯಲ್ಲಿ ತಾ. ೨೨ ರಲ್ಲಿ ಉಕ್ತ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಫ್ರಾಂಕ ಅಂಥೋನಿಯವರು ಕಾಂಗ್ರೆಸ್ಸು ಹಿಂದೀ ಕ್ರಿಶ್ಚಿಯನ್‌ರೊಡನೆ ಅಸಭ್ಯವಾಗಿಲ್ಲವೆಂದು ಹೇಳಿದರು.

ಶ್ರೀ ಅತುಲಚಂದ್ರ ಗುಪ್ತರವರ ಅಧ್ಯಕ್ಷತೆಯಲ್ಲಿ ಬಂಗಾಲದಲ್ಲೊಂದು ಕೇಂದ್ರ ಗಡಿ ನಿರ್ಣಯ ಸಮಿತಿಯು ಸ್ಥಾಪಿತವಾಗಿದೆಯೆಂದು ಕಾಂಗ್ರೆಸ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಜೂನ ೨೩ ರಲ್ಲಿ ಸಾರಿದರು.

ಪಂಜಾಬ

ಗುಜರಾನವಾಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ನಿರಂಜನದಾಸರು ಕಲ್ಲಿನಿಂದ ತಲೆಗೆ ಸಂಭವಿಸಿದ ಗಾಯದಿಂದ ತಾ.೧೭ರ ಮುಂಜಾನೆ ಲಾಹೋರಿನಲ್ಲಿ ಮರಣ ಹೊಂದಿದರು. ಲಾಲಾ ಭೀಮಸೇನಸಾಚಾರ ಮೊದಲಾದವರು ಸ್ಮಶಾನಯಾತ್ರೆಗೆ ಬಂದಿದ್ದರು.

ಪಂಜಾಬ ಶಾಸನ ಸಭೆಯಲ್ಲಿಯ ಕಾಂಗ್ರೆಸ, ಲೀಗ ಮತ್ತು ಪಾಂಥಿಕ ಪಕ್ಷಗಳ ಧುರೀಣರಾದ ಲಾಲಾ ಭೀಮಸೇನಸಾಚಾರ, ಖಾನ ಇಪ್ತೀಕರ ಹುಸೇನ ಖಾನ ಮತ್ತು ಸ್ವರ್ಣಸಿಂಗರು ಜೂನ ೧೮ ರಲ್ಲಿ ಎರಡು ಸಲ ಲಾಹೋರಿನಲ್ಲಿ ಸಭೆ ಸೇರಿ ಕೇಂದ್ರದಲ್ಲಿ ರಚಿತವಾಗುವಂಥ ವರಿಷ್ಠ ಅಧಿಕಾರ ಸಮಿತಿಯನ್ನು ರಚಿಸುವ ಸಂಬಂಧದಲ್ಲಿ ವಿಚಾರ ಮಾಡಿ ನಿರ್ಣಯವನ್ನು ಗವರ್ನರರಿಗೆ ಕಳುಹಿದರು.

ಪಂಜಾಬ ರಾಷ್ಟ್ರೀಯ ಬ್ಯಾಂಕಿನ ಕೇಂದ್ರ ಕಚೇರಿ ದಿಲ್ಲಿಗೆ ಸ್ಥಳಾಂತರಿಸಲ್ಪಡುವದೆಂದು ತಿಳಿದುಬಂದಿದೆ.

ಜೂನ ೧೮ ರಲ್ಲಿ ಲಾಹೋರಿನ ಬಾಗವಾಪುರದ ಹಳ್ಳೆ ಪೇಟೆಯಲ್ಲಿ ಎರಡು ದೇಶೀಯ ಬಾಂಬುಗಳ ಒಗೆತದಿಂದ ಒಬ್ಬನಿಗೆ ಗಾಯವಾಯಿತು. ಮತ್ತು ಓಡಿಹೋಗುತಿದ್ದ ಇಬ್ಬರನ್ನು ಹಿಡಿದು ಪೋಲೀಸರು ಶೋಧ ನಡೆಸಿದಾಗ ಅವರಲ್ಲಿ ೫ ಬಾಂಬುಗಳು ಸಿಕ್ಕಿದವು.

೧೯ ನೆಯ ತಾರೀಕಿನಲ್ಲಿ ಲಾಹೋರ ನಿಲ್ದಾಣದ ಬಳಿ ಸ್ಫೋಟವಾಗಿ ೭ ಜನರಿಗೆ ಗಾಯವಾಗಿದೆ. ಅಲ್ಲೇ ಒಬ್ಬನು ಇರಿಯಲ್ಪಟ್ಟನು. ಇನ್ನೊಬ್ಬನನ್ನು ಬುಲ್ ರೋಡಿನಲ್ಲಿ ಇರಿಯಲಾಯಿತು. ಪೋಲೀಸರು ಗಾಯಗೊಂಡವರನ್ನು ಚಿಕಿತ್ಸಾಲಯಕ್ಕೊಯ್ದರು.

ಲಾಹೋರ ನಗರದಲ್ಲಿ ತಾ. ೨೨ ರ ದಿನ ಅಗ್ನಿದೇವನ ತಾಂಡವನಡೆದು ನಿತ್ಯದ ವ್ಯವಹಾರಗಳೆಲ್ಲ ನಿಂತುಹೋದುವು. ಪೋಲೀಸರು ಗುಂಡುಹಾರಿಸಿ ಪರಿಸ್ಥಿತಿಯನ್ನು ಹದಕ್ಕೆ ತಂದರು.

೨೩ ರಲ್ಲಿ ಸದ್ಯದ ಘಟನಾ ಸಮಿತಿಯನ್ನು ಸೇರಬಾರದೆಂದು ಪಂಜಾಬ ಶಾಸನ ಸಭೆಯು ಲಾಹೋರದಲ್ಲಿ ಸೇರಿದಾಗ ನಿರ್ಧರಿಸಿತು. ಪೂರ್ವ ಪಂಜಾಬದ ಪ್ರತಿನಿಧಿಗಳು ಬಳಿಕ ಪ್ರತ್ಯೇಕವಾಗಿ ಕೂಡಿ ಪಂಜಾಬ ವಿಭಜನೆಯಾಗಬೇಕೆಂದು ನಿರ್ಣಯಿಸಿದರು.

ಪಂಜಾಬ ಶಾಸನ ಸಭೆಯಲ್ಲಿಯ ಲೀಗ, ಕಾಂಗ್ರೆಸ, ಪಾಂಥಿಕ ಪಕ್ಷಗಳ ಧುರೀಣರು ತಾ. ೨೩ ರಲ್ಲಿ ಲಾಹೋರಿನಲ್ಲಿ ಕೂಡಿ ಪ್ರಾಂತದಲ್ಲಿ ಶಾಂತಿಸ್ಥಾಪನೆ ಮಾಡಲು ಪ್ರತ್ಯೇಕವಾಗಿ ಪ್ರಕಟನೆ ಹೊರಡಿಸಿದರು.

ಪಾಕಿಸ್ತಾನ ಸಾಮಂತ ಸರಕಾರಕ್ಕೆ ಲೀಗ ವರಿಷ್ಠರು ಕರಾಚಿಯನ್ನು ರಾಜಧಾನಿಯನ್ನಾಗಿ ಆರಿಸಿರುವರೆಂದೂ ಪಾಕಿಸ್ತಾನ ಕಚೇರಿ ಹಾಗೂ ಅವರ ನೌಕರರಿಗಾಗಿ ಕೆಲವು ಕಟ್ಟಡಗಳನ್ನು ವಶಪಡಿಸಿಕೊಳ್ಳಲು ಸಿಂಧ ಸರಕಾರವು ಒಂದು ಸಮಿತಿಯನ್ನೇರ್ಪಡಿಸಿರುವರೆಂದೂ ತಿಳಿದು ಬಂದಿದೆ.

ನಾಲ್ಕು ಮಾತು — ರಂಗನಾಥ ದಿವಾಕರ

ಪ್ರಾಂತೀಕರಣ

ಭಾಷಾನುಗುಣ ಪ್ರಾಂತೀಕರಣದ ಪ್ರಶ್ನೆಗೆ ಈಗ ಮತ್ತಷ್ಟು ಕಳೆಕಟ್ಟಿದಂತಾಗಿದೆ. ಎಲ್ಲವೂ ಯಥಾಕ್ರಮವಾಗಿದರೆ, ಹಿಂದುಸ್ತಾನದ ಡೊಮಿನಿಯನ್ ಸರಕಾರ ಸ್ಥಾಪನವಾದೊಡನೆ ಅಂದರೆ ಇದೇ ಅಗಸ್ಟ ೧೫ರ ನಂತರ ಬೇಕಾದಾಗ ಆ ಸರಕಾರವು ಒಂದು ಸಮಿತಿಯನ್ನು ನೇಮಿಸುವದು. ಆ ಸಮಿತಿಯು ಆಂಧ್ರ, ಕರ್ನಾಟಕ, ಕೇರಲ, ಮಹಾರಾಷ್ಟ್ರ ಇತ್ಯಾದಿ ಪ್ರಾಂತಗಳು ಭಾಷೆ, ಸಂಸ್ಕೃತಿ, ಸಾನ್ನಿಧ್ಯ, ಆಡಳಿತದ ಅನುಕೂಲ, ಆರ್ಥಿಕ ಬಲ, ಉತ್ಪನ್ನದ ಸಾಕಲ್ಯ, ಅಲ್ಪಸಂಖ್ಯಾಕರ ಹಿತರಕ್ಷಣೆ ಈ ದೃಷ್ಟಿಯಿಂದ ಪ್ರತ್ಯೇಕ ಪ್ರಾಂತವಾಗಲು ಯೋಗ್ಯವಿರುವವೂ ಇಲ್ಲವೂ ಎಂಬುದನ್ನು ವಿಮರ್ಶಿಸುವದು. ಅವು ಯೋಗ್ಯವಿದ್ದುದಾದರೆ ಅಕ್ಟೋಬರ ತಿಂಗಳಲ್ಲಿ ಘಟನಾ ಸಮಿತಿಯಲ್ಲಿ ಸ್ವೀಕರಿಸಲಾಗುವ ಹಿಂದುಸ್ತಾನದ ಘಟನೆಯಲ್ಲಿ ಈ ಪ್ರಾಂತಗಳು ಪ್ರತ್ಯೇಕ ಪ್ರಾಂತಗಳೆಂದು ಉಲ್ಲೇಖಿಸಲಾಗುವವು. ಬಳಿಕ ಹೊಸ ಘಟನೆ ಅಮಲಿನಲ್ಲಿ ಬರುವಷ್ಟರಲ್ಲಿ ಸೀಮಾ ಸಮಿತಿ, ಮುಂತಾದ ಅವಶ್ಯಕ ಸಮಿತಿಗಳು ನೇಮಿಸಲ್ಪಟ್ಟು ಹೊಸ ಚುನಾವಣೆಗಳು ಪ್ರತ್ಯೇಕಿಸಲ್ಪಟ್ಟ ಭಾಷಾನುಗುಣ ಪ್ರಾಂತಗಳಲ್ಲಿ ನಡೆಯುವವು. ಈ ದೃಷ್ಟಿಯಿಂದ ನೋಡಿದರೆ ಈಗ ಕನ್ನಡಿಗರ ಮೇಲೆ ಬಹಳ ದೊಡ್ಡದೊಂದು ಹೊಣೆ ಬಂದುಬಿದ್ದಿದೆ ಎಂದು ಹೇಳಲು ಅಡ್ಡಿ ಇಲ್ಲ. ಅದೇನೆಂದರೆ, ಮೇಲೆ ಕಾಣಿಸಲಾದ ಎಲ್ಲ ದೃಷ್ಟಿಯಿಂದಲೂ ಕರ್ನಾಟಕವು ಇಂದು ಸರ್ವಾಂಗ ಪರಿಪೂರ್ಣ ಪ್ರಾಂತವಾಗಬಲ್ಲದು ಎಂದು ಸಿದ್ಧಗೊಳಿಸುವದು.

x x x

ಇದನ್ನು ಎಷ್ಟೋ ಸಾರೆ ಸಿದ್ಧ ಮಾಡಿದ್ದೇವೆ; ಮತ್ತೆ ಮತ್ತೆ ಸಿದ್ಧಮಾಡತಕ್ಕದ್ದೇನು, ಎಂದು ಹಲವು ಮಿತ್ರರು ಕೇಳುತಿರುವರು. ಆದರೆ ಈ ತೆರೆಗೆ ಚಳವಳಿ ಮಾಡುವ ದೃಷ್ಟಿಯಿಂದ ಹಾಗೂ ಆ ಪೂರ್ತಿ ಮಾತ್ರ ನಾವು ಕೆಲಸ ಮಾಡಿದ್ದೇವೆ. ಇನ್ನು ಸ್ಥಾಪಿತವಾಗುವ ನಿರೀಕ್ಷಕ ಸಮಿತಿಯ ಎದುರು ಅದು ಸಾಕಿಲ್ಲ. ಸಮಿತಿಯವರು ಎಲ್ಲ ವಿವರಗಳನ್ನು ಅಭ್ಯಸಿಸಿದವರು ಹಾಗೂ ಆಡಳಿತಾದಿ ವಿಷಯಗಳಲ್ಲಿ ನುರಿತವರು ಇರುವರು. ಆದುದರಿಂದ ವಿಶೇಷತಃ ಆಡಳಿತ, ಆರ್ಥಿಕ ಬೆಳವಣಿಗೆ, ಹಾಗೂ ಆರ್ಥಿಕ ಭದ್ರತೆ ಈ ವಿಷಯಗಳನ್ನು ಕುರಿತು ವಿಶೇಷ ವಿಮರ್ಶಕ ದೃಷ್ಟಿಯಿಂದ ಅಭ್ಯಾಸ ಮಾಡಿ ಅದರ ಮಂಡನವನ್ನು ಮನದಟ್ಟಾಗಿ ಮಾಡುವಂಥವರು ಈಗ ಬೇಕು. ಉದಾಹರಣಾರ್ಥವಾಗಿ ಸಮಿತಿಯವರು, ನಿಮ್ಮ ಆಡಳಿತದ ಕೇಂದ್ರವೆಲ್ಲಿ ಎಂಬ ಪ್ರಶ್ನೆಯೊಂದನ್ನು ಕೇಳಬಹುದು. ನಾವು ಯಾವದೊಂದು ಊರಿನ ಹೆಸರು ಹೇಳಿದರೆ ಅದು ಕೇಂದ್ರವಾಗಲು ಯೋಗ್ಯವು ಎಂಬುದನ್ನು ಸಿದ್ಧ ಮಾಡುವ ಹೊಣೆ ನಮ್ಮ ಮೇಲೆ. ಈ ಪ್ರಶ್ನೆಯನ್ನು ನಾವು ಈ ವರೆಗೆ ನಿರ್ಣಯಿಸುವ ದೃಷ್ಟಿಯಿಂದ ವಿಚಾರಿಸಿಲ್ಲ. ಆದುದರಿಂದ ಈ ಬಗೆಯ ಪ್ರಶ್ನೆಗಳನ್ನು ಚೆನ್ನಾಗಿ ವಿಚಾರಿಸಿ, ಆ ಬಗ್ಗೆ ವಿಮರ್ಶಕ ದೃಷ್ಟಿಯಿಂದ ಸಮಿತಿಯವರು ಕೇಳಬಹುದಾದ ಪ್ರತಿ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಡಬಲ್ಲ ನಿಪುಣರ ಒಂದು ಸಣ್ಣ ಅಧಿಕೃತ ಮಂಡಳಿವು ಅವಶ್ಯವು. ಅಂತಹದನ್ನು ನೇಮಿಸಲು ಹಾಗೂ ಹಣ, ಮುಂತಾದ ಮಹತ್ವದ ಪ್ರಶ್ನೆಗಳನ್ನು ಚರ್ಚಿಸಲು ಕರ್ನಾಟಕದಲ್ಲಿಯ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಬೆಂಗಳೂರಲ್ಲಿ ಇದೇ ಜುಲೈ ೬ನೇ ತಾರೀಖಿಗೆ ಕರೆದುದು ಬಹಳ ಸಮಾಧಾನದ ಸಂಗತಿ. ಈ ಕೆಲಸವು ಎಷ್ಟು ಬೇಗನೆ ಆದೀತೊ ಅಷ್ಟು ಬೇಗನೆ ಆಗಲಿಕ್ಕೆ ಬೇಕು.

x x x x

ಈ ಸಂದರ್ಭದಲ್ಲಿ ಆಂಧ್ರ ಹಾಗೂ ಮಹಾರಾಷ್ಟ್ರದವರ ಪ್ರಶ್ನೆ ಬಹಳ ಸುಲಭವಿದೆ. ಆದರೆ ಕರ್ನಾಟಕ ಹಾಗೂ ಕೇರಲ ಈ ಪ್ರಾಂತಗಳ ಪ್ರಶ್ನೆ ಸ್ವಲ್ಪ ಬಿಗಿಯಾದೆ. ಆದುದರಿಂದ ದುರ್ಲಕ್ಷ ಮಾಡದೆ ನಮ್ಮ ಪಕ್ಷವನ್ನು ಚನ್ನಾಗಿ ಸಿದ್ಧಮಾಡಿ ತೋರಿಸುವ ಎಲ್ಲ ಪೂರ್ವತಯಾರಿಯನ್ನು ನಾವು ಮಾಡಿಕೊಂಡು ಕೂಡುವದು ಅತ್ಯವಶ್ಯವು.

ಮೈಸೂರು

ಅನೇಕ ವಿಷಯಗಳಲ್ಲಿ ಮುಂಬರಿದ ಮೈಸೂರು ಘಟನಾತ್ಮಕ ಬದಲಾವಣೆಗಳ ಆಯಾತ ಸಮಯದಲ್ಲಿ ಬಹಳ ಹಿಂದೆ ಬಿದ್ದು ಕರ್ನಾಟಕದ ಹೆಸರನ್ನೆ ಹಿಂದೆಹಾಕಿತು. ಇದು ದುರ್ದೈವದ ಸಂಗತಿ. ತಮ್ಮ ಜಡತ್ವವನ್ನು ಝಾಡಿಸಿ, ಸ್ವಲ್ಪ ದೂರದೃಷ್ಟಿ ಇಟ್ಟು, ಮೈಸೂರ ಸೀಮೆಯ ಸುತ್ತಲು ನೋಡಿ, ಅಖಿಲ ಕರ್ನಾಟಕದತ್ತ ಕಣ್ಣು ಚಾಚಿ ಶ್ರೀಮನ್ಮಹಾರಾಜರು ಈಗ ವರ್ತಿಸಿದ್ದರೆ ಮೈಸೂರಿನ ಉದ್ಧಾರವಷ್ಟೇ ಅಲ್ಲ ಕರ್ನಾಟಕದ ಉದ್ಧಾರವಾಗುತಿತ್ತು. ಅದೇಕೆ, ಹಿಂದುಸ್ತಾನದ ಉದ್ಧಾರಕ್ಕೂ ಸಹಾಯಮಾಡಿದಂತಾಗುತಿತ್ತು. ನಿಜವಾಗಿ ನಾಳೆ ಮಾಡುವದನ್ನೆ ಈ ಹೊತ್ತು ಮಾಡಿದ್ದರೆ ಕೆಲಸವಾಗುತಿತ್ತು. ತಮ್ಮ ಪ್ರಜೆಗಳಿಗೆ ಪೂರ್ಣಜವಾಬ್ದಾರ ರಾಜ್ಯಪದ್ಧತಿಯನ್ನು ಕೊಡುವದು ಮಹಾರಾಜರಿಗೆ ಬಿಡಲಾರದ ಕರ್ತವ್ಯ ಎಂಬುದನ್ನು ಅವರು ಪಕ್ಕಾ ತಿಳಿದಿರಬೇಕು. ಅದನ್ನೆ ಇಷ್ಟರಲ್ಲಿ ಕೊಟ್ಟುಬಿಟ್ಟಿದ್ದರೆ ಮೈಸೂರಿನ ಪ್ರತಿಯೊಬ್ಬನು ಎದೆಚಾಚಿ ನಡೆಯಬಹುದಾಗಿತ್ತು. ಬ್ರಿಟಿಶ್ ಕರ್ನಾಟಕ ಹಾಗೂ ಮೈಸೂರು ಸಂಸ್ಥಾನ ಈ ಭೇದವನ್ನು ಅಳಿಸಿ ತತ್ಕಾಲ ಒಂದೇ ಪ್ರಾಂತವನು ಮಾಡಿಬಿಡಲು ಹಾದಿಯಾಗುತ್ತಿತ್ತು. ದಕ್ಷಿಣ ಹಿಂದುಸ್ತಾನದಲ್ಲಿ ಒಂದು ಒಳ್ಳೆ ಸರ್ವಾಂಗ ಸುಂದರ, ಬಲಿಷ್ಠ ಪ್ರಾಂತವು ಇದೇ ೧೯೪೮ರಿಂದ ಅಸ್ತಿತ್ವದಲ್ಲಿ ಬರುತಿತ್ತು. ೧೩೫೦ರಲ್ಲಿ ಕಳೆಗುಂದಿದ ಕರ್ನಾಟಕಕ್ಕೆ ಪುನಃ ಕಳೆಕಟ್ಟಿದ ಶ್ರೇಯಸ್ಸು ಕರ್ನಾಟಕ ಸಿಂಹಾಸನಾಧೀಶ್ವರರಿಗೆಯೆ ಬರುತಿತ್ತು. ಆದರೆ ಈಗ ಮಹಾರಾಜರೆಂದರೆ ರಾಹುಗ್ರಸ್ತ ಚಂದ್ರಮನಂತೆ ನಿಷ್ಪ್ರಭರಿದ್ದಂತೆ ತೋರುವದು. ಇನ್ನೂ ಸಮಯವು ಪೂರಾ ಸಂದುಹೋಗಿಲ್ಲ. ತಡವಾದ್ದಾದರೂ ಮೈಸೂರು ಘಟನಾ ಸಮಿತಿಯಲ್ಲಿ ಸೇರಿದ್ದು ಒಂದು ಸಮಾಧಾನದ ಸಂಗತಿ. ಆದರೆ ಅದು ಸಾಕಿಲ್ಲ. ಸರ್ವಥಾ ಸಾಕಿಲ್ಲ. ವಿಮಾನ ಮಾರ್ಗವಾಗಿ ದ್ರುತಗತಿಯಿಂದ ಜಗತ್ತು ಸಾಗುತ್ತಿರುವಾಗ ಒಂದು ಚಕ್ಕಡಿಯಲ್ಲಿ ಕುಳಿತು ಹೋಗುವದು ಮೈಸೂರಿನಂಥ ಮುಂಬರಿದ ಸಂಸ್ಥಾನಕ್ಕೆ ಸಲ್ಲದು. ಪೂರ್ಣ ಹೊಣೆಗಾರ ರಾಜ್ಯಪದ್ಧತಿಯನ್ನು ಸ್ಥಾಪಿಸಿ ಮೈಸೂರನ್ನು ಮುಂದೆ ತಂದು ಅಖಂಡ ಕರ್ನಾಟಕ ಪ್ರಾಂತೀಕರಣಕ್ಕೆ ಎಡೆಮಾಡಿಗೊಡುವ ಹೊಣೆಯು ಮೈಸೂರ ಸರಕಾರದ ಮೇಲೆ ಇದೆ.

ಅರಗಚ್ಚಿನ ಕೆಲಸ

ಮೈಸೂರು ಅಥವಾ ಇತರ ಸಂಸ್ಥಾನಗಳು ಇಲ್ಲವೆ ಸಂಸ್ಥಾನಗಳ ಭಾಗ ಇವುಗಳನ್ನು ಬಿಟ್ಟು ಈಗ ಬ್ರಿಟಿಶ್ ಕರ್ನಾಟಕದ್ದಷ್ಟೆ ಒಂದು ಪ್ರಾಂತವಾದರೂ ಅದು ಅರಗಚ್ಚಿನ ಕೆಲಸವೇ ಆದಂತೆ. ಅದರಿಂದ ಏಕತಂತ್ರ ಅಥವಾ ಅಖಂಡ ಕರ್ನಾಟಕದ ಗುರಿಯು ಸಾಧಿಸಿದಂತಾಗಲಾರದು. ಏಕತಂತ್ರ ಕರ್ನಾಟಕವು ಅಸ್ತಿತ್ವದಲ್ಲಿ ಬರಲು ಇನ್ನೂ ಮುಖ್ಯ ಅಡಚಣೆಯೆಂದರೆ ಸದ್ಯಕ್ಕೆ ಸಂಸ್ಥಾನಗಳಲ್ಲಿ ರೂಢವಿದ್ದ ನಿರಂಕುಶ ಪ್ರಭುತ್ವ. ಎಲ್ಲ ಸಂಸ್ಥಾನಗಳಲ್ಲಿಯ ಕನ್ನಡ ಪ್ರಜೆಗಳು ಇಡೀ ಕರ್ನಾಟಕ ಪ್ರಾಂತವೊಂದೇ ಆಗಿ ತಾವೆಲ್ಲರೂ ಅದರಲ್ಲಿಯ ನಾಗರಿಕರಾಗಬೇಕೆಂದು ಎಷ್ಟೇ ಹಾತೊರೆದರೂ ಆಯಾ ಸಂಸ್ಥಾನಾಧೀಶ್ವರರು ತಮ್ಮ ತಮ್ಮ ನಿರಂಕುಶ ಅಧಿಕಾರವನ್ನೆ ಇನ್ನೂ ಹಳೆಯ ಕಾಲದ ಸುಲ್ತಾನರಂತೆ ನಡೆಸುತ್ತಿರುವರು. ಅವರೆಲ್ಲರೂ ಪ್ರಜೆಗಳಿಗೆ ಹೊಣೆಗಾರ ರಾಜ್ಯಪದ್ಧತಿಕೊಟ್ಟಕ್ಷಣವೆ ಆಯಾ ಸಂಸ್ಥಾನದ ಜನರು ಒಂದೇ ಕರ್ನಾಟಕದಲ್ಲಿ ಸೇರಲು ಸಿದ್ಧರಾಗುವರೆಂಬಲ್ಲಿ ಸಂಶಯವಿಲ್ಲ. ಇದರಿಂದ ಸಂಸ್ಥಾನಿಕರಿಗೂ ಯಾವ ಬಾಧಕವಿಲ್ಲ. ಸಣ್ಣ ಸಂಸ್ಥಾನಿಕರ ಪರಿಸ್ಥಿತಿಯಂತೂ ಈಗ ಕರುಣಾಜನಕವಿರುವದು. ಅತ್ತ ಬ್ರಿಟಿಶರ ರಕ್ಷಣೆ ತಪ್ಪಿತು. ಇತ್ತ ಸ್ವಸಂರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯವಿಲ್ಲ. ಪ್ರಜೆಗಳಲ್ಲಿಯ ಜಾಗ್ರತಿ, ಕ್ಷೋಭ ಬೆಳೆಯುತ್ತಿವೆ. ಇವನ್ನೆಲ್ಲ ತಡೆಯಲು ಒಂದೇ ಹಾದಿ—ಹೊಣೆಗಾರ ರಾಜ್ಯಪದ್ಧತಿಯನ್ನು ತಾವಾಗಿ ಸ್ವೇಚ್ಛೆಯಿಂದ ದಯಪಾಲಿಸಿ ಬಿಡುವದು. ಅದು ಸಂಸ್ಥಾನಿಕರಿಗೆ ಹಿತಕರ, ಕರ್ನಾಟಕಕ್ಕೆ ಬಹಳ ಉಪಯುಕ್ತ. ಹಾಗೆ ಆಗಿ ಅಖಂಡ ಕರ್ನಾಟಕವು ಏಕತಂತ್ರ ಪ್ರಜಾರಾಜ್ಯವಾದಾಗಲೆ ಕನ್ನಡಿಗರ ಕನಸು ನನಸಾದಂತೆ. ಅಲ್ಲಿಯ ವರೆಗೆ ಅರಗಚ್ಚು.

ಕಾಂಗ್ರೆಸ್ಸಿನ ಹೊಸಘಟನೆ!?

'ಬಂತು, ಬಂತು, ಬಂದೇಬಿಟ್ಟಿತು' ಎನ್ನುವಷ್ಟರಲ್ಲಿ 'ಹೋಯಿತು ಹೋಗೇ ಬಿಟ್ಟಿತು' ಎನ್ನುವಂತೆ ಆಯಿತು ಈ ಕಾಂಗ್ರೆಸ್ಸಿನ ಹೊಸ ಘಟನೆಯ ಕಥೆ! ೧೯೪೭ರ ಅಕ್ಟೋಬರದಿಂದ ಈ ಹೊಸ ಘಟನೆಯ ಮಾತು ನಡೆಯುತ್ತ ಬಂದಿತು. ಆಗ ಎ. ಆಯ್. ಸೀ. ಸೀ ಯವರು ಮೊದಲನೆ ಕಮಿಟಿಯನ್ನು ಏರ್ಪಡಿಸಿದರು. ಮುಂದೆ ಮತ್ತೆರಡು ಸಾರೆ ಆ ಕಮಿಟಿಯಲ್ಲಿ ಬದಲಾವಣೆಗಳಾದವು. ಅದರ ವರದಿಯು ಕರಡು ಹೋದ ಎಪ್ರಿಲದಲ್ಲಿ ಸಿದ್ಧವಾಯಿತು. ಆದರೆ ಅದು ಇನ್ನೂ ಅಮಲಿನಲ್ಲಿ ಬರುವದಂತೂ ದೂರವೆ ಉಳಿಯಿತು. ವಿಚಾರಕ್ಕಾ ಬರುವದು ದುರುಪಾಸ್ತವು. ಕಾಂಗ್ರೆಸ್ ಘಟನೆಯಾಗಲಿ, ಸಂಸ್ಥೆಯಾಗಲಿ ಸುಧಾರಿಸುವದು, ಅದರಲ್ಲಿಯ ಕೊಳೆ ಹೋಗುವದು ಎಂದು ಬಹುಜನರು ಆಸೆ ಪಟ್ಟಿದ್ದರು. ಆ ಆಸೆ ಬಯಲಾಯಿತು. ಆದರೆ ಇದ್ದಕ್ಕಿದ್ದ ಹಾಗೆ ಕಾಂಗ್ರೆಸ ಕೆಲಸವು ಹೆಚ್ಚು ಪರಿಶುದ್ಧ ತಳಹದಿಯ ಮೇಲೆ ನಡೆಯದೆ ಹೋದರೆ ಮುಂಬರುವ ಸ್ವರಾಜ್ಯದ ದೊಡ್ಡ ಭಾರವನ್ನು ಹೊರಲು ನಾವು ಸಮರ್ಥರಾಗುವದು ಅಸಾಧ್ಯವು. ಯೋಗ್ಯಾಯೋಗ್ಯತೆಯ ವಿಚಾರವಿಲ್ಲದೆ ಅಧಿಕಾರದಾನ ಹಾಗೂ ಅಧಿಕಾರಗ್ರಹಣ ಅಧಿಕಾರಲೋಲುಪತೆ, ಜಾತೀಯತೆ, ವಾಮಮಾರ್ಗಗಳ ಅವಲಂಬನ ಇತ್ಯಾದಿ ಇವೇ ಕಾಂಗ್ರೆಸ್ಸಿನಲ್ಲಿಯ ಈಗಿನ ಕೊಳೆಯ ಮುಖ್ಯ ಕಾರಣಗಳು. ಗಾಂಧೀಜಿಯವರು ನಮ್ಮಲ್ಲಿಯ ಅನೇಕ ದೋಷಗಳನ್ನು ಅನೇಕ ಸಾರೆ ಸ್ಪಷ್ಟಗೊಳಿಸಿರುವರು. ಅವುಗಳನ್ನು ಹೋಗಲಾಡಿಸಲು ನಾವೆಲ್ಲರು ಹೆಣಗುವದು. ಅತ್ಯವಶ್ಯ ಅದಕ್ಕಾಗಿ ಘಟನೆಯನ್ನೆ ಬದಲಾಯಿಸಬೇಕು ಎಂಬ ವಿಧಿಯಿಲ್ಲ. ಘಟನೆಯಲ್ಲಿ ಬದಲಾವಣೆಯಾದರೆ ಈ ಮಾತು ಸ್ವಲ್ಪ ಸುಲಭವಾಗುವದೆಂಬಲ್ಲಿ ಸಂಶಯವಿಲ್ಲ. ಆದರೆ ಯಾವದೇ ಘಟನೆಯು ನಮ್ಮ ಮಟ್ಟನ್ನು ಎತ್ತರಿಸಲಾರದು ಅಥವಾ ನಮ್ಮ ಸ್ವಭಾವಗತ ದುರ್ಗುಣಗಳನ್ನು ಹೋಗಲಾಡಿಸಲಾರದು. ಸಾಕಷ್ಟು ನಿಃಸ್ವಾರ್ಥ, ನಿಃಸ್ಪೃಹತೆ, ಗುಣಗ್ರಹಣ ಹಾಗೂ ಸಮಾನಭಾವ ಇವುಗಳನ್ನು ನಾವು ನೆಲೆಗೊಳಿಸಲೆತ್ನಿಸಿದರೆ ಯಾವ ಸಂಸ್ಥೆಯಾದರೂ ಸುಧಾರಿಸಬಲ್ಲದು.

x x x

ಹೊಸಘಟನೆಯ ವಿಚಾರವಿಲ್ಲವೆಂದ ಬಳಿಕ ಹಳೆಯ ಘಟನೆಯೆ ಅಸ್ತಿತ್ವದಲ್ಲಿರುವದು ಕ್ರಮಪ್ರಾಪ್ತ. ಕಾಂಗ್ರೆಸ್ಸು ಇನ್ನು ಸ್ವರಾಜ್ಯಪ್ರಾಪ್ತಿಯ ನಂತರ ಇರುವದೇ ಹೋಗುವದೇ, ಅದರ ಸ್ವರೂಪವೇನಾಗುವದೋ ಏನೊ, ಎಂಬ ಮುಂತಾದ ಸಂಶಯಗಳ ಮೂಲಕ ಹಲವರು ಕಾಂಗ್ರೆಸ್ಸಿನತ್ತ ದುರ್ಲಕ್ಷಮಾಡುವ ಸಂಭವವಿದೆ. ಆದರೆ ಹಾಗೆ ಮಾಡುವದು ಸರ್ವಥಾ ತಪ್ಪು. ಒಂದಿಲ್ಲೊಂದು ಸ್ವರೂಪದಲ್ಲಿ ಕಾಂಗ್ರೆಸ್ಸು ಇರುವದು ಖಂಡಿತವೆಂದೇ ಹೇಳಬಹುದು. ಆದುದರಿಂದ ಪ್ರತಿಯೊಬ್ಬರು ಕಾಂಗ್ರೆಸ್ಸಿನ ಸಭಾಸದರಾಗುವದು ಅತ್ಯವಶ್ಯ. ಸ್ವಾತಂತ್ರ್ಯವನ್ನು ಪ್ರಾಪ್ತಮಾಡಿಕೊಳ್ಳುವ ಕೆಲಸವು ಮುಗಿದಿದ್ದರೂ ರಾಷ್ಟ್ರನಿರ್ಮಾಣದ ಮಹಾಕಾರ್ಯವು ಇನ್ನೂ ಬೇಕಾದಷ್ಟು ಆಗತಕ್ಕದ್ದಿದೆ. ಆ ಕೆಲಸದಲ್ಲಿ ಕಾಂಗ್ರೆಸ್ಸು ತನ್ನ ಭಾಗವನ್ನೆತ್ತೀರಬೇಕಾಗುವದು. ಆದುದರಿಂದ ಎಲ್ಲರೂ ಸಭಾಸದರಾಗಿ ಕಾಂಗ್ರೆಸ್ಸಿನ ಬಲವನ್ನು ಎಂದಿನಂತೆ ಬೆಳೆಸುವದು ಅವಶ್ಯವು.


ಆತ್ಮಸಂರಕ್ಷಣೆ

ಬರಬರುತ್ತ ಆತ್ಮಸಂರಕ್ಷಣೆಯ ಪ್ರಶ್ನೆಯು ಬಹಳ ಮಹತ್ವದ್ದಾಗುತ್ತ ನಡೆದಿದೆ. ಅಲ್ಲಲ್ಲಿ ಗುಂಡರ ಸಣ್ಣ ಪುಟ್ಟ ರಾಜ್ಯಗಳೆ ಸ್ಥಾಪನವಾಗತೊಡಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು! ಸಾತಾರೆಯಲ್ಲಿ ಅದರ ಪರಮಾವಧಿಯಾದುದು ಕಂಡು ಬಂದಿತು. ಆದರೆ ಸಣ್ಣ ಪ್ರಮಾಣದಲ್ಲಿ ಎಲ್ಲಕಡೆಗೂ ಆ ವೃತ್ತಿ ಹಲವರಲ್ಲಿ ಕಂಡು ಬರುವದು. ಹೆದರಿಸಿ ಬೆದರಿಸಿ, ಹೊಡೆದು ಬಡಿದು, ಕಡೆಗೆ ಕೊಂದುಹಾಕಿಯಾದರೂ ತಮ್ಮ ಆರ್ಥಿಕ ಇಲ್ಲವೆ ರಾಜಕೀಯ ದುರಾಶೆಗಳನ್ನು ಪೂರೈಸಿಕೊಳ್ಳಲು ಹಲವರು ಸಿದ್ಧವಾದಂತೆ ಕಾಣುವದು. ಇಂಥವರನ್ನು ತಡೆಯಲು ಅಲ್ಲಲ್ಲಿಯ ಸರಕಾರಗಳು ಸಮರ್ಥವಾಗಿಲ್ಲ. ಇಂಥ ಚಟುವಟಿಕೆಗಳಿಗೆ ಜಾತೀಯ ಸ್ವರೂಪ ಬಂದುಬಿಟ್ಟಿತೆಂದರಂತೂ ಮುಂದೆ ದೇವರೇ ಗತಿ. ಗಾಂಧೀ ಜಿನ್ನಾರವರು ಕಂಠಶೋಷಮಾಡಿ ಇಟ್ಟರೂ ಶಾಂತಿಸ್ಥಾಪನೆಗಾಗಿ ಬರಹ ಹೊರಗೆಡಹಿ ಎರಡು ತಿಂಗಳುಗಳಾಗಿ ಹೋದವು. ಪಾಕಿಸ್ತಾನವೂ ಪದರಿನಲ್ಲಿದಿತ್ತು. ಆದರೂ ಲಾಹೋರ ಅಮೃತಸರ ಮುಂತಾದ ಕಡೆಗೆ ಪೂರ್ವದಂತೆಯೆ ಅನಾಹುತಗಳು ನಡೆದಿವೆ. ಆ ದೂರಿನ ವಿಷಯವನ್ನು ನಾವು ಬಿಟ್ಟರೂ ಜಮಖಂಡಿಯಂಥ ದೊಡ್ಡ ಊರಲ್ಲಿ ಆದ ಸಾಬಡೆಯಂಥವರ ಕೊಲೆಯ ಪತ್ತೆ ಇನ್ನೂ ಇಲ್ಲ! ಇವುಗಳನೆಲ್ಲ ಲಕ್ಷಿಸಿದರೆ ಪೋಲೀಸರ ಮೇಲೆ ಇಲ್ಲವೆ ಸರಕಾರಗಳ ಮೇಲೆ ಸ್ವಸಂರಕ್ಷಣಕ್ಕಾಗಿ ಈ ಸಂದರ್ಭದಲ್ಲಿ ಅವಲಂಬಿಸಿದ್ದು ಉಪಯೋಗವಿಲ್ಲ, ಆತ್ಮರಕ್ಷಣೆಗಾಗಿ ಜನರೇ ರಕ್ಷಾದಲ ಮುಂತಾದವುಗಳನ್ನು ಮಾಡಿಕೊಳ್ಳಲಿಕ್ಕೆ ಬೇಕೆಂಬದು ಸಿದ್ಧವಾಗುವದು. ಅಹಿಂಸೆಯ ದಿವ್ಯಾಸ್ತ್ರದಿಂದ ಸ್ವಸಂರಕ್ಷಣಮಾಡಿಕೊಳ್ಳಬಲ್ಲ ಸಮರ್ಥರು ನಮ್ಮ ಸಮಾಜದಲ್ಲಿ ಸದ್ಯಕ್ಕಂತೂ ತೀರ ವಿರಳರು. ಹೀಗಿರುವಾಗ ಅಹಿಂಸೆಯ ಹೆಸರು ಹೇಳಿ ಪುಕ್ಕತನಕ್ಕೆ ಎಡೆಗೊಡುವದಾಗಲಿ ಅಸಹಾಯರಾಗಿ ಕೇವಲ ಕರುಣಾಸ್ಪದವಾದ ಭಯಸ್ಥಿತಿಯಲ್ಲಿರುವದಾಗಲಿ ಎಂದೂ ಸಮರ್ಥನೀಯವಾಗಿರಲಾರದು. ಗುಂಡಾರಾಜ್ಯವನ್ನು ನಡೆಯಗೊಡಲಿಕ್ಕಿಲ್ಲ ಎಂಬ ಸಾತ್ವಿಕ ಭಾವದಿಂದ ಪ್ರೇರಿತರಾದ ತರುಣರು ಸಮಾಜದಲ್ಲಿ ಮುಂದೆ ಬಂದು ರಕ್ಷಕ ದಲಗಳನ್ನು ನಿರ್ಮಾಣಮಾಡುವದು ಅತ್ಯವಶ್ಯವಿದ್ದಂತೆ ತೋರುವದು.

x x x

ಹೈದರಾಬಾದ

"ನಾವು ಸ್ವತಂತ್ರರಾಗಬಲ್ಲೆವು" ಎಂದು ನಿಜಾಮ ಸಾಹೇಬರು ಅತ್ತ ಘರ್ಜಿಸ ಹೊರಡಿಸಿರುವರು. 'ನಾವು ಹಿಂದುಸ್ತಾನದಲ್ಲಿಯೆ ಕೂಡಬೇಕು' ಎಂದು ನಿಜಾಮರ ಪ್ರಜೆಗಳು ಸಾರಿರುವರು. ಈ ಎರಡು ಶಕ್ತಿಗಳ ನಡುವೆ ಬೇಗನೆ ಸಂಘರ್ಷವು ನಡೆಯುವ ಸಂಭವವಿದೆ. ಜನರಿಗೆ ಒಂದೇ ಒಂದು ಮಾರ್ಗವಿರುವದು: ಹಿಂದುಸ್ತಾನದಲ್ಲಿ ಕಾಂಗ್ರೆಸ್ಸು ಯಾವ ಶಾಂತಿಯ ಮಾರ್ಗದಿಂದ ಸ್ವಾತಂತ್ರ್ಯವನ್ನು ದೊರಕಿಸಿತೊ ಅದೇ ಶಾಂತಿಯ ಮಾರ್ಗದಿಂದ ಹೈದರಾಬಾದ ಪ್ರಜೆಗಳು ತಮ್ಮಲ್ಲಿ ನಿಜಾಮರ ಛತ್ರದ ಕೆಳಗೆ ಪೂರ್ತ ಹೊಣೆಗಾರ ರಾಜ್ಯಪದ್ಧತಿಯನ್ನು ಸ್ಥಾಪಿಸಿಕೊಳ್ಳಲಿಕ್ಕೆಬೇಕು. ಅದಕ್ಕೆ ಮುಖ್ಯ ಬೇಕಾದುದು ವಿಶಾಲವಾದ ತಳಹದಿಯ ಮೇಲೆ ಪ್ರಚಂಡ ಜನಸಂಘಟನೆ. ಅದನ್ನು ನಿರ್ಭಯತೆಯಿಂದ ಮನೆ ಮನೆಗೆ ಹೋಗಿಯಾದರೂ ನಡೆಸಲಿಕ್ಕೆಬೇಕು. ಬಂದ ಕಷ್ಟನಷ್ಟಗಳನ್ನೆಲ್ಲ ಸಹಿಸಲಿಕ್ಕೆಬೇಕು. ಇದೊಂದೇ ಮಾರ್ಗವು. ಹೈದರಾಬಾದ ಸ್ಟೇಟ ಕಾಂಗ್ರೆಸ್ಸಿನ ಸಂದೇಶವಾದರೂ ಇದೇ.



ಮುಂಬಯಿ ಶೇರ ಪೇಟೆ

ತಾ. ೨೫.

ಈಗೊಂದು ವಾರದಿಂದ ಶೇರಪೇಟೆಯಲ್ಲಿ ಟಾಟಾ ಜಮಶೆದಪುರ ಉಕ್ಕಿನ ಕಾರಖಾನೆಯಲ್ಲಿ ಕೂಲಿಕಾರ ತೊಡಕಿನ ಸುದ್ದಿ ಹಬ್ಬಿ ಬೆಲೆಗಳು ದುರ್ಬಲವಾಗಿವೆ. ಟಾಟಾ ಸ್ಟೀಲ ಡೆಫರ್ಡ ೨೦೪೩—೮—೦ ರಿಂದ ೨೦೪೦—೦—೦ ಕ್ಕೇರಿ ೧೯೫೦-೦-೦ ಕ್ಕಿಳಿದವು. ಅರಳೆ ನಿರ್ಯಾತಕ್ಕೆ ತಾತ್ಕಾಲಿಕವಾಗಿ ಅಪ್ಪಣೆ ಕೊಟ್ಟ ಸರಕಾರ ಜಪಾನಿ ಗಿರಣಿ ಬಟ್ಟೆಗಳ ಆಯಾತದ ಸಂಭವವನ್ನು ಲಕ್ಷಿಸಿ ಬಟ್ಟೆಯ ಮೇಲಿನ ನಿಯಂತ್ರಣವನ್ನೂ ತೆಗೆದುಹಾಕಬಹುದೆಂಬ ಆಸೆಯಿಂದ ಗಿರಣಿ ಪಾಲುಗಳು ಲಾಭದಾಯಕವಾಗಬಹುದೆಂದು ಕೆಲವರಿಗನಿಸಿದ್ದರೂ ಅವುಗಳಲ್ಲಿಯೂ ಪ್ರಗತಿ ಕಾಣುವದಿಲ್ಲ. ಬಾಂಬೇ ಡಾಯಿಂಗ ೧೧೦೦-೦-೦ ರಿಂದ ೧೧೬೦—೦—೦ ಕ್ಕಿಳಿದು ೧೧೯೦-೦-೦ ಕ್ಕೇರಿ ತಿರುಗಿ ೧೧೬೫ ಕ್ಕೆ ಬಂತು. ಫಿನ್ಲೆ ೩೧೭—೦—೦ ರಿಂದ ೩೦೭-೦-೦ ಕ್ಕೂ ಕೊಹಿನೂರು ೬೫೦—೦—೦ ರಿಂದ ೬೪೫ ಕ್ಕೂ ಸ್ವದೇಶಿ ೬೫೫—೦—೦ ರಿಂದ ೬೩೨-೦-೦ ಕ್ಕಿಳಿದು ೬೪೮-೦-೦ ಕ್ಕೂ ಗೋಕಾಕ ೩೩೮ ರಿಂದ ೩೨೮—೦—೦ ಕ್ಕಿಳಿದು ೩೩೨-೦-೦ ಕ್ಕೂ ಬದಲಾದವು. ಇಂಡಿಯನ್ ಆಯರ್ನ ೨೭೩ ರಿಂದ ೨೬೮—೦—೦ ಕ್ಕಿಳಿಯಿತು. ಅಸೋ. ಸಿಮೆಂಟ್ಸ ೧೭೪—೦—೦ ರಿಂದ ೧೬೯-೦-೦ ಕ್ಕಿಳಿಯಿತು. ಬ್ಯಾಂಕುಗಳಲ್ಲಿ ರಿಝರ್ವ ೨೨೦-೮-೦ ರಿಂದ ೧೧೮—೧೨—೦ ಕ್ಕೆ, ಸೆಂಟ್ರಲ ೯೯-೮-೦ ರಿಂದ ೯೫—೮—೦ ಗೆ, ಇಂಪೀರಿಯಲ್ ಎಸ್.ಸಿ. ೨೨೬೦—೮—೦ ರಿಂದ ೨೨೭೫—೦—೦ ರ ವರೆಗೆ ಹೋಗಿ ೨೨೫೫—೦—೦ ಕ್ಕೆ ತಿರುಗಿದವು. ೩% ೧೯೪೮ ಸಾಲ ೧೦೦—೨—೦.

ಚಿನ್ನ—ಬೆಳ್ಳಿ

ಕಾಕೇವಾಡ ಬಂದರಗಳಿಗೆ ಚಿನ್ನ ಬೆಳ್ಳಿಯನ್ನು ಯಾವದೇ ರೂಪದಲ್ಲಿ ಕಳ್ಳತನದಿಂದ ಕಳಿಸುವದನ್ನು ತಡೆಯುವದಾಗಿ ಸರಕಾರ ಅಜ್ಞೆ ಹೊರಡಿಸಿತು. ಅಂತರ್ರಾಷ್ಟ್ರೀಯ ಹಣಕಾಸಿನ ಸಮಿತಿಯವರು ಚಿನ್ನ ಬೆಳ್ಳಿಗಳ ಬೆಲೆಯನ್ನು ಅಂತರ್ರಾಷ್ಟ್ರೀಯ ಪರಮಾವಧಿಗಿಂತ ಏರಿಸಗೊಡಬಾರದೆಂದು ಸೂಚಿಸಿದ್ದಾರೆ. ಅದರ ಇವೆರಡರಿಂದಲೂ ಚಿನ್ನದ ಮೇಲೆ ಪರಿಣಾಮವಾಗಲಿಲ್ಲ. ಬೆಳ್ಳಿ ಮಾತ್ರ ತುಸು ವಿಚಲಿತವಾಯಿತು. ತಯಾರಿ ಚಿನ್ನ ೧೧೫-೮-೦ ರ ವರೆಗಿದ್ದು ೧೧೫-೪-೦ ಕ್ಕಿಳಿಯಿತು ವಾಯಿದಾ ೧೧೫-೪-೦. ಬೆಳ್ಳಿ ತಯಾರಿ ೧೭೯-೪-೦ ರಿಂದ ೧೭೧-೮-೦ ಗಿಳಿದು ೧೭೪-೦-೦ ಕ್ಕೇರಿತು. ವಾಯಿದಾ ೧೭೪-೦-೦.

ಅರಳೆ ಪೇಟೆ

ಅರಳೆಗೆ ಗಿರಾಕಿಯಿದ್ದರೂ ನಗರಕ್ಕೆ ಬಂದ ಸಂಗ್ರಹ ವಿಪರೀತವಾಗಿ ಸ್ಥಳವಿಲ್ಲದಾಗಿದೆ. ಮಳೆ ಬರತೊಡಗಿದೆ. ಸೆಪ್ಟೆಂಬರ ಅರಳೆ ೪೪೭-೬-೦ ರಿಂದ ೪೪೬-೨-೦ ಕ್ಕಿಳಿದು ೪೪೯-೧೦-೦ ಕ್ಕೇರಿತು. ಗಿರಣಿಗಳು ಸಪ್ಲೆಯಲ್ಲಿ ಹೆಚ್ಚು ಅಸ್ಥೆ ತೋರಿಸುತ್ತಿವೆ.

ಎಣ್ಣೆ ಕಾಳು

ಶೇಂಗಾ	೧೬೨-೦-೦
ಅಗಸಿ	೨೮-೧೦-೦
ಅಗಸಿ ಎಣ್ಣೆ	೧೯-೧೪-೦

ಸಾಂಗಲಿ ಪೇಟೆ

ಅರಿಷಣ ಹೇರು	೧೦೦-೧೦೮
ಮೆಣಸಿನಕಾಯಿ ಹೇರು ,,	೧೦೦-೧೫೦
ಶೇಂಗಾ ಖಂಡಿ	೧೩೦

ಶಿವಮೊಗ್ಗ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೪೮-೫೨
,, ,, ೨	೪೫-೪೮
ಕೊರಸಾಲು	೪೦-೪೫
ರಾಜಾಅಲವು	೪೫-೪೮
ಸುಳಿ	೪೫—೪೮
ಬೆಟ್ಟೆ ವಂತಿ	೩೩-೩೪
ಬೆಟ್ಟೆ	೨೩-೨೮

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ. ೧	೨೭೦-೨೭೫
,, ನಂ. ೨	೨೫೫-೨೬೫
,, ನಂ. ೩	೨೪೦-೨೫೦
ಹಳೇ ಜಯವಂತ ಹತ್ತಿ	೨೭೫-೨೮೦
ಜಿನ ಹೊಸದು	೧೭೫-೧೮೫
ಜಿನ ಹಳೇದು	೧೮೨-೧೯೦
ಡಬಲರೋಲ	೧೭೦-೧೮೩
ಸಾಜಿನ	೧೮೦-೧೮೨

ಬೆಂಗಳೂರು-ಮೈಸೂರು

ಏದುಜನ ವಿದ್ಯಾರ್ಥಿಗಳ ಮೇಲೆ ಹಾಕಿರುವ ನಿರ್ಬಂಧಗಳನ್ನು ಯಾವ ಕರಾರೂ ಇಲ್ಲದೆ ಈಗಿಂದೀಗ ಹಿಂತೆಗೆದುಕೊಳ್ಳಬೇಕೆಂದು ಅಖಿಲ ಮೈಸೂರು ವಿದ್ಯಾರ್ಥಿಮಹಾಮಂಡಲದ ಕಾರ್ಯದರ್ಶಿಗಳು ಹೇಳಿಕೆ ಕೊಟ್ಟಿದ್ದಾರೆ.

ಮುಂಬಯಿಯ ಮಿಸೆಸ್‌ಜಸ್ಟಿಸ್‌ರವರ ೫ ವರ್ಷದ ಇಂಗ್ಲಿಷ್ "ಷಾಹಿದಾಗ್" ಕುದುರೆಯು ತಾ. ೧೮ ರಲ್ಲಿ ಬೆಂಗಳೂರಿನ ಕುದುರೆ ಪಂದ್ಯದಲ್ಲಿ ಶ್ರೀಮನ್ಮಹಾರಾಜರವರ ಭಂಗಾರದ ಕಪ್ಪನ್ನು ಪಡೆಯಿತು.

ಘಟನಾಸಮಿತಿಗೆ ಮೈಸೂರಿಂದ ಹೋಗುವ ೭ ಜನ ಸದಸ್ಯರೂ ಚುನಾಯಿತರಾಗಿ ಹೋಗಬೇಕೆಂದೂ ದಿವಾನರುಕೂಡ ಪ್ರಜೆಗಳ ಅಭಿಪ್ರಾಯ ಪಡೆದು ಚುನಾಯಿತರಾಗಿಬರಲಿಎಂದೂ ಶ್ರೀ ಕೆ. ಟಿ. ಭಾಷ್ಯಂರವರು ಹೇಳಿಕೆ ಕೊಟ್ಟಿದ್ದಾರೆ.

ಸಂಸ್ಥಾನದಲ್ಲಿ ಕೊಗರಿಬೇಳೆಯ ಕೊರತೆ ಹೆಚ್ಚಾಗಿದೆಯೆಂದು ಭಾರತ ಸರಕಾರದ ಆಹಾರ ಖಾತೆಗೆ ಅನೇಕಸಲ ಅರಿಕೆ ಹೋದುದರಿಂದ ಭಾರತಸರಕಾರವು ಸಂಸ್ಥಾನಕ್ಕೆ ಸಂಯುಕ್ತಪ್ರಾಂತದಿಂದ ೨೦೦೦ ಟನ್ ತೊಗರಿಯಬೇಳೆಯನ್ನೊದಗಿಸಲು ನಿರ್ಣಯಿಸಿದೆ.

ಹೊಸದುರ್ಗ ಪೌರಸಭೆಯ ಅಧ್ಯಕ್ಷರಾದ ಶ್ರೀ ನಾಗೇಶ ಸೆಟ್ಟಿಯವರು ಜೂನ ೧೯ ರಂದು ದಿವಾನರನ್ನು ಭೆಟ್ಟಿಮಾಡಿ ಹೊಸದುರ್ಗಕ್ಕೆ ವಿದ್ಯುಚ್ಛಕ್ತಿ, ತಂತಿಮೊದಲಾದ ಸೌಲಭ್ಯ ಕಲ್ಪಿಸಿಕೊಡಬೇಕೆಂದೂ ವೇದಾವತಿಯ ದಡದಲ್ಲಿ ಸಿಮೆಂಟ ಕಾರಖಾನೆಯೊಂದನ್ನು ಸ್ಥಾಪಿಸಬೇಕೆಂದೂ ಒಂದು ಅಹವಾಲುಪಟ್ಟಿಯನ್ನು ಒಪ್ಪಿಸಿದಾಗ ದಿವಾನರು ಅದನ್ನು ಪರಿಶೀಲಿಸುವುದಾಗಿ ಆಶ್ವಾಸನವಿತ್ತರು.

ಘಟನಾಸಮಿತಿಗೆ ಮೈಸೂರು ಸೇರುವುದನ್ನು ಸ್ವಾಗತಿಸುವ ನಿರ್ಣಯವನ್ನು ಮೈಸೂರು ವಾಣಿಜ್ಯ ಸಂಘದ ವ್ಯವಸ್ಥಾಪಕ ಸಮಿತಿಯು ಜೂನ ೧೯ ರಲ್ಲಿ ಪಾಸುಮಾಡಿತು.

ಮೈಸೂರು ನಗರದ ಹೊಟೇಲು ಕೆಲಸಗಾರರ ಸಂಘದ ಅಧ್ಯಕ್ಷರೂ ಕಾರ್ಯದರ್ಶಿಗಳೂ ಇತರ ೧೪೬ ಜನ ಸದಸ್ಯರೂ ದಿವಾನರನ್ನು ಭೆಟ್ಟಿಯಾಗಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಂಡಾಗ ದಿವಾನರು ದಸರಾದೊಳಗೆ "ಶಪ್ ಅಸಿಂಸ್ಟೆಂಟ್" ಕಾಯಿದೆಯನ್ನು ಜಾರಿಗೆ ತಂದು ಕೆಲಸಗಾರರ ಕುಂದು ಕೊರತೆಗಳನ್ನು ನಿವಾರಿಸುವುದಾಗಿ ಹೇಳಿದರು.

ಬೆಂಗಳೂರು ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ತಾ. ೯ ರಿಂದ ೩ ದಿನ ನಗರದ ೩ ಭಾಗಗಳಲ್ಲಿ ಉಪಾಧ್ಯಾಯರ ಶಿಕ್ಷಣಶಿಬಿರವನ್ನೇರ್ಪಡಿಸಲಾಗಿತ್ತು.

ಬೆಂಗಳೂರು ಸಂಸ್ಕೃತ ಕಾಲೇಜಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದ ರಾಜಸೇವಾಸಕ್ತ ಶ್ರೀ. ಡಿ. ವೆಂಕಟರಾಮಯ್ಯನವರ ನಿಧನದಿಂದುಂಟಾದ ಅಪಾರ ದುಃಖವನ್ನು ಪ್ರದರ್ಶಿಸಲು ವಿದ್ಯಾರ್ಥಿಗಳೂ ಅಧ್ಯಾಪಕರೂ ಜೂನ ೧೪ ರಲ್ಲಿ ಸಭೆ ಸೇರಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರುವ ಠರಾವನ್ನು ಪಾಸು ಮಾಡಿದರು.

ಮೈಸೂರು ಸಂಸ್ಥಾನದಲ್ಲಿ ಕೂಡಲೆ ತಾತ್ಕಾಲಿಕ ಸರಕಾರ ಏರ್ಪಡಿಸಬೇಕೆಂದು ತಾ ೧೯ ರಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯ ಸಮಿತಿಯು ನಿರ್ಣಯ ಮಾಡಿತು.

ಅಮೇರಿಕನ್ ಕೃಷಿಖಾತೆಯವರು ಅಗಸ್ಟ ತಿಂಗಳಲ್ಲಿ ಕೊರತೆ ಪ್ರದೇಶಗಳಿಗೆ ಕೊಡಸೂಡಿದ ೧೩,೭೫,೦೦೦ ಟನ್ ಆಹಾರ ಧಾನ್ಯಗಳಲ್ಲಿ ಹಿಂದುಸ್ತಾನಕ್ಕೆ ೯೫,೦೦೦ ಟನ್ ದೊರೆಯಲಿದೆ.

ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನ

ಭಾರತದ ಒಪ್ಪಂದಕ್ಕಾಗಿ ಅಭಿನಂದನೆ. ಜಿಲ್ಲಾ ಬೋರ್ಡ ಚುನಾವಣೆಗಳಲ್ಲಿ ಅಧಿಕಾರಿಗಳ ಕೈವಾಡವಿದ್ದದ್ದಕ್ಕೆ ಆಕ್ಷೇಪ. ಸಂಸ್ಥಾನದಲ್ಲಿಯ ಲಂಚದ ಹಾವಳಿಯನ್ನು ನಿಲ್ಲಿಸದ ಸರಕಾರದ ನೀತಿಯ ಖಂಡನೆ.

ಜನತೆಯ ರಾಜಕೀಯ ಆಕಾಂಕ್ಷೆಗಳ ಸಾಧನೆಯಲ್ಲಿ ಭಾರತದ ೨ ಪ್ರಮುಖ ರಾಜಕೀಯಪಕ್ಷಗಳಿಗೆ ಒಪ್ಪಂದವಾಗುವಂತೆ ವೈಸರಾಯರಾದ ಲಾರ್ಡ ಮೌಂಟ ಬ್ಯಾಟನ್ನರವರು ಮಾಡಿರುವುದಕ್ಕಾಗಿ ಅವರನ್ನು ಅಭಿನಂದಿಸುವ ನಿರ್ಣಯವೊಂದನ್ನು ಜೂನ ೧೮ರಲ್ಲಿ ಆರಂಭವಾದ ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಅನಂತರ ಘಟನಾ ಸಮಿತಿಗೆ ಮೈಸೂರು ಸೇರುವುದೆಂದು ಘೋಷಿಸಿದ್ದಕ್ಕಾಗಿ ಶ್ರೀಮನ್ಮಹಾರಾಜರಿಗೆ ಅಭಿನಂದನೆ ಸಲ್ಲಿಸುವ ನಿರ್ಣಯವು ಸ್ವೀಕೃತವಾಯಿತು.

ಬೆಂಗಳೂರು ವಿಶ್ವವಿದ್ಯಾಲಯ ಸಂಘದ ೫ ಜನರ ಮೇಲೆ ವಿಶ್ವವಿದ್ಯಾಲಯದ ಅಧಿಕಾರಿಗಳು ಕ್ರಮ ಕೈಕೊಂಡಿರುವ ಬಗ್ಗೆ ಬಂದ ಒಂದು ನಿಲುವಳಿ ಸೂಚನೆಯನ್ನು ಸಾರ್ವಜನಿಕ ದೃಷ್ಟಿಯಿಂದ ಮುಖ್ಯವಲ್ಲವೆಂದು ಅಧ್ಯಕ್ಷರು ತಳ್ಳಿಹಾಕಿದರು.

ಸಂಸ್ಥಾನದ ನಾನಾ ಜಿಲ್ಲಾ ಬೋರ್ಡುಗಳ ಅಧ್ಯಕ್ಷರ ಚುನಾವಣೆಯಲ್ಲಿ ಸರಕಾರದ ಅಧಿಕಾರಿಗಳು ಪ್ರತ್ಯಕ್ಷವಾಗಿ ಭಾಗ ವಹಿಸಿದುದರಿಂದ ಚುನಾವಣೆ ಸರಿಯಾಗಿ ನಡೆಯಲವಕಾಶ ಉಂಟಾಗಲಿಲ್ಲವೆಂಬ ಬಗ್ಗೆ ಕಾಂಗ್ರೆಸ್ ಪಕ್ಷದವರು ತಂದಿದ್ದ ನಿಲುವಳಿ ಸೂಚನೆಯು ಚರ್ಚೆಯಲ್ಲಿಯೇ ಮುಕ್ತಾಯವಾಯಿತು.

ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚನೆ ಮಾಡಿದುದನ್ನು ಅಭಿನಂದಿಸಿ ನ್ಯಾಯವಿಧಾಯಕ ಸಭೆಯಲ್ಲಿ ಅಂಗೀಕೃತವಾದ ನಿರ್ಣಯವನ್ನು ಕಳುಹಿಸಿದ್ದಕ್ಕೆ ಪ್ರತಿಯಾಗಿ ಪಂ. ನೆಹರೂರವರಿಂದ ಬಂದ ವಂದನಾರ್ಪಣವನ್ನುಲ್ಲೇಖಿಸುವ ಪತ್ರವೊಂದನ್ನು ಅಧ್ಯಕ್ಷರು ಸಭೆಯಲ್ಲಿ ಓದಿದರು.

ಕಾಂಗ್ರೆಸ್ ಪಕ್ಷದ ವಿಧಿಬಿಂದುವಿಗೆ ಉತ್ತರವಾಗಿ, ದಿವಾಣರು ಹೊರಗೆ ಹೋಗಿರುವಾಗ ಸಭಾನಾಯಕರೇ ದಿವಾಣರ ಅಧಿಕಾರವನ್ನು ಉಪಯೋಗಿಸಬಹುದು ಎಂದು ಅಧ್ಯಕ್ಷರು ಹೇಳಿದರು. ಮತ್ತು ಹಿಂದಿನ ಅಧಿವೇಶನದಲ್ಲಿ ಬಂದ ಕ್ರಿಯಾಲೋಪದ ಪ್ರಶ್ನೆಗೆ ಉತ್ತರವಾಗಿ ಚರ್ಚೆಯ ಕಾಲದಲ್ಲಿ "ಜವಾಬ್ದಾರಿ ಸರ್ಕಾರ" ವೆಂಬ ಪದವನ್ನು ಪ್ರಯೋಗ ಮಾಡಬಹುದೆಂದೂ ಸ್ಪಷ್ಟಪಡಿಸಿದರು.

"ಜನರ ಮೆಚ್ಚುಗೆಯನ್ನು ಪಡೆಯಲು ಯಾವ ಉಪಯುಕ್ತ ಕೆಲಸವನ್ನೂ ಸರಕಾರ ಕೈಕೊಂಡಿಲ್ಲ. ರಾಜ್ಯದಲ್ಲಿ ಲಂಚಕೋರತನ ಹೆಚ್ಚಿದೆ. ಹೊಣೆಗಾರ ಸರಕಾರ ಸ್ಥಾಪನೆ ಮಾಡಲು ಇದು ಸಂದರ್ಭ: ನ್ಯೂಸ್‌ಪ್ರಿಂಟ್ ಮೇಲಿರುವ ನಿಯಂತ್ರಣವನ್ನು ತೆಗೆದುಹಾಕಿ ಪತ್ರಿಕೆಗಳು ನಿರ್ಭಯವಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕು"— ಎಂದು ಮುಂತಾಗಿ ಜೂನ ೨೦ ರ ಸಭೆಯಲ್ಲಿ ಹಲವು ಸದಸ್ಯರು ಅಭಿಪ್ರಾಯ ಪಟ್ಟರು.

ಅನಂತರ ಸರಕಾರವು ಒಕ್ಕಲತನದತ್ತ ಸಾಕಷ್ಟು ಗಮನ ಕೊಟ್ಟಿಲ್ಲೆಂದೂ ಲಂಚ ತಿನ್ನುವ ಅಧಿಕಾರಿಗಳ ದೆಸೆಯಿಂದ ರೈತರ ಕಷ್ಟ ಹೆಚ್ಚಾಗಿದೆಯೆಂದೂ ಬಟ್ಟೆಯ ಹಂಚಿಕೆ ಅಸಮರ್ಪಕವಾಗಿದೆಯೆಂದೂ ಕೆಲವು ಸದಸ್ಯರು ಹೇಳಿದರು.

ಘಟನಾ ಸಮಿತಿಗೆ ಹೋಗುವ ನಿಯೋಗದಲ್ಲಿ ಎಲ್ಲ ಅಭಿಪ್ರಾಯಗಳಿಗೂ ಹಿತಗಳಿಗೂ ಪ್ರಾತಿನಿಧ್ಯವಿರಬೇಕೆಂದು ಶ್ರೀ ಡಬ್ಲ್ಯೂ. ಎಚ್. ಥಿಯೋಬಾಲ್ಡರು ಅಭಿಪ್ರಾಯ ಪಟ್ಟರು.

ಮನೆ ಕಟ್ಟುವುದಕ್ಕೆ ಮತ್ತು ಬೇಸಾಯಕ್ಕೆ ಬೇಕಾದ ಕಬ್ಬಿಣವನ್ನು ಬಡವರಿಗೆ ಒದಗಿಸುವ ಅಂಶವನ್ನು ಪರಿಶೀಲಿಸಲಾಗುವುದೆಂದು ಸಾರ್ವಜನಿಕ ಕಾಮಗಾರ ಸಚಿವರು ಪ್ರಶ್ನೆಗಳಿಗೆ ಉತ್ತರವಾಗಿ ತಿಳಿಸಿದರು.

ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಜುಲೈ ೭ ರಲ್ಲಿ ಆರಿಸಬಹುದೆಂದೂ ಆಯ್ಕೆಯಲ್ಲಿ ಅಧಿಕಾರಿ ಸದಸ್ಯರು ಭಾಗವಹಿಸುವ ಸಂಭವವಿಲ್ಲೆಂದೂ ಜುಲೈ ೫ ರ ದಿನ ಸಂಬಂಧಪಟ್ಟ ಎಲ್ಲ ವಿಷಯಗಳೂ ತಿಳಿಯಬರುವವೆಂದೂ ಚೀಫ್ ಸೆಕ್ರೆಟರಿಯವರು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ತಾ॥ ೨೧ ರಲ್ಲಿ ಶ್ರೀ. ಬೇಲೂರು ಶ್ರೀನಿವಾಸಯ್ಯಂಗಾರರು ಒಳ್ಳೆಯ ಆರ್ಥಿಕ ತತ್ವಗಳ ಮೇಲೆ ಸಂಸ್ಥಾನದ ಆಯವ್ಯಯವು ನಿಷ್ಪನ್ನವಾಗಿಲ್ಲವೆಂದು ಹೇಳಿ ಮೈಸೂರಿನ ಪ್ರಗತಿ, ಸಂತಮೊದಲಾದ ಹಳೆಯ ಸಮಸ್ಯೆಗಳನ್ನು ಸರಕಾರ ಇನ್ನೂ ಪರಿಹರಿಸದಿರುವುದರಿಂದ ಪ್ರಸ್ತುತ ಮುಂಗಡ ಪತ್ರಿಕೆಯು ನಿರಾಶಾದಾಯಕವಾಗಿದೆಯೆಂದರು.

ಅದಾದ ಬಳಿಕ ಧರ್ಮಪ್ರಕಾಶ ಎಲ, ಎಸ್. ವೆಂಕಾಜಿರಾಯರು ಮೈಸೂರಿನ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೂ ಶ್ರೀ. ಜೆ. ಎಂ. ಇಮಾಮರು ಲಂಚ ನಿರ್ಮೂಲನ, ಕಾಲುವೆ ಅಣೆಕಟ್ಟುಗಳ ನಿರ್ಮಾಣ ಮತ್ತು ವಾಹನಗಳ ರಾಷ್ಟ್ರೀಕರಣ ಇವುಗಳ ಬಗ್ಗೂ ಮಾತನಾಡಿದರು.

ಸಾರ್ವಜನಿಕ ವೆಚ್ಚವು ವಿಶೇಷವಾಗಿ ಏರಿರುವದನ್ನು ಪರಿಶೀಲಿಸಲು ಒಂದು ಆರ್ಥಿಕಸಮಿತಿಯನ್ನು ರಚಿಸುವುದು ಅವಶ್ಯವೆಂದು ಶ್ರೀ. ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರರು ಸಲಹೆ ಮಾಡಿದರು.

ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಕೂಡಲೆ ಗಮನ ಕೊಡಬೇಕೆಂದು ಶ್ರೀ ಎ. ಸಿ. ಮಲ್ಲೇಗೌಡರು ಒತ್ತಾಯ ಮಾಡಿ ಮಲೆನಾಡಿನ ಬಗ್ಗೆ ಒಬ್ಬ ಪ್ರತ್ಯೇಕ ಸಚಿವರನ್ನು ನೇಮಿಸಬೇಕೆಂದರು.

ದಕ್ಷಿಣ ಕನ್ನಡ

ಪಶ್ಚಿಮ ಕರಾವಳಿಯಲ್ಲಿ ದೊಡ್ಡ ಬಂದರಿನ ಅಭಿವೃದ್ಧಿಯ ಸಲುವಾಗಿ ಸಂಬಂಧಪಟ್ಟ ಸಮಿತಿಯಲ್ಲಿ ಶ್ರೀ ಕಾರಂತರಲ್ಲದೆ ಜಿಲ್ಲಾಧಿಪರು, ಬಂದರಿನ ಅಧಿಕಾರಿಗಳು ಇವರನ್ನೂ ಮಂಗಳೂರಿನ ಪ್ರತಿನಿಧಿಗಳಾಗಿ ಇರಿಸಬೇಕೆಂದು ಕೆನರಾ ವಾಣಿಜ್ಯ ಸಂಘದವರು ಡಾ. ಜಾನ್‌ಮಥಾಯರಿಗೂ ಇತರ ಅಧಿಕಾರಿಗಳಿಗೂ ತಂತಿ ಬಿಟ್ಟಿದ್ದಾರೆ.

ಕಾಸರಗೋಡಿನ ಶ್ರೀರಿಯ ಗ್ರಾಮದಲ್ಲಿ ಶ್ರೀ ಎಸ್. ರಾಮ ಕಾರಂತರು ಕಟ್ಟಿಸಿದ ಶಾಲೆಯ ಪ್ರವೇಶೋತ್ಸವವು ಜೂನ ೯ ನೆಯ ದಿನ ಕಾಸರಗೋಡು ವಿಭಾಗದ ಉಪ ಪರೀಕ್ಷಕರ ನೇತೃತ್ವದಲ್ಲಿ ಸಾಂಗವಾಗಿ ನೆರವೇರಿತು.

ತಾ. ೧೮ ರ ಸಂಜೆ ಮಂಗಳೂರಿನ ವಣಿಕ ಸಂಘದಲ್ಲಿ ಹೊಸದಾಗಿ ಆರಿಸಲ್ಪಟ್ಟ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವ ಹಾಗೂ ನಿವೃತ್ತರಾಗಲಿದ್ದ ಅಧ್ಯಕ್ಷ ಶ್ರೀ ಎ, ದಾಮೋದರ ಪೈಗಳನ್ನು ಸತ್ಕರಿಸುವ ಬಗ್ಗೆ ಸೇರಿತ್ತು.

ತಾ. ೧೨ ರಲ್ಲಿ ಜಿಲ್ಲಾ ಕಾಂಗ್ರೆಸ ಕಮಿಟಿಯ ಮಹಾಸಭೆ ಮಂಗಳೂರಲ್ಲಿ ಸೇರಿದಾಗ ವರದಿ ವಾಚನ, ಸ್ಥಳೀಯ ಚುನಾವಣೆಯಲ್ಲಿ ಕಾಂಗ್ರೆಸ ಭಾಗ ವಹಿಸಬೇಕೆಂಬ ಠರಾವಿನ ನಿರಾಸ, ಘಟನೆಯ ತಿದ್ದುಪಡಿಯ ಸ್ವೀಕಾರ- ಇವು ನಡೆದವು.

ಕುಂಬಳೆಯ ನಾರಾಯಣ ಮಂಗಲದಲ್ಲಿ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಲು ಶಾಸನ ಸಭೆಯ ಕಡೆಯಿಂದ ಬಂದ ಶ್ರೀ ಎಸ್. ಎಸ್. ವರದಾಚಾರಿಯವರು ಕಣ್ಣಾಶ್ರಮದ ಭಜನ ಕೂಟ, ಹಿಂದೀ ಪ್ರೇಮಿಮಂಡಲಿ ಮುಂತಾದವನ್ನು ಸಂದರ್ಶಿಸಿ ಸಂತೋಷ ವ್ಯಕ್ತಪಡಿಸಿದರು.

(೪ ನೇ ಪುಟದಿಂದ)

ವಾರ ನುಡಿದ ಭವಿಷ್ಯವನ್ನು ಸತ್ಯವಾಗಿ ಮಾಡಲೆಂಬಂತೆ ಪಾಲು ಮಾಡಿಕೊಳ್ಳುವ ವಿಚಾರದಲ್ಲಿ ಹಲವು ತೊಡಕುಗಳುತ್ಪನ್ನವಾಗಿವೆಯೆಂದು ಸುದ್ದಿ ಹಬ್ಬಿದೆ. ಪಾಕಿಸ್ತಾನದ ದುರ್ಬಲತೆಯನ್ನರಿತ ಮುಸ್ಲಿಂ ಪ್ರತಿನಿಧಿಗಳು ಕೆಲವು ಸೊತ್ತುಗಳನ್ನು ಅರ್ಧಕ್ಕರ್ಧದಷ್ಟು ಕೊಡಬೇಕೆಂದು ಬೇಡಿದ್ದಾರಂತೆ. ಇದನ್ನು ಕಾಂಗ್ರೆಸ್ಸು ಪ್ರಬಲವಾಗಿ ವಿರೋಧಿಸಿದೆ. ಇದಲ್ಲದೆ ಕೇಂದ್ರ ಸರಕಾರದ ಹಿರಿ ನೌಕರರ ಅಭಿಪ್ರಾಯ ಕೇಳಲಾಗಿ ಅವರಲ್ಲಿ ಬಹಳ ಜನರು ಪಾಕಿಸ್ತಾನದಲ್ಲಿ ನೌಕರಿ ಮಾಡಲು ಅಸ್ಥೆ ತೋರದೆ ಇದ್ದುದರಿಂದ ಹಿಂದೂ ನೌಕರರನ್ನು—ಮುಖ್ಯವಾಗಿ ತಜ್ಞರನ್ನು —ಪಾಕಿಸ್ತಾನಕ್ಕೆ ಇಂತಿಷ್ಟು ಜನರನ್ನೊದಗಿಸಲೇಬೇಕೆಂದೂ ಅವರು ಹೇಳತೊಡಗಿದ್ದಾರೆಂದು ತಿಳಿಯುತ್ತದೆ ಸೈನ್ಯ ಖಾತೆಯಲ್ಲಿಯೂ ಪ್ರತಿಯೊಬ್ಬನಿಗೆ ತನಗೆ ಬೇಕಾದ "ಸ್ಥಾನ"ದಲ್ಲಿ ಸೇರಲು ಅವಕಾಶ ಕೊಡಲಾಗಿದೆ. ಅದರ ಪರಿಣಾಮವೆಂತಾಗುವದೋ ಹೇಳಬರುವದಿಲ್ಲ. ಮುಸ್ಲಿಂ ನೌಕರರಲ್ಲೇ ಬಹಳ ಜನ ಪಾಕಿಸ್ತಾನದ ಸೇವೆಗೆ ಅಷ್ಟು ಆತುರರಾಗಿಲ್ಲವಂತೆ. ಹೀಗಾದರೆ ಲೀಗಿನವರ ಹಟ ಬಿಗಿಯಾಗುತ್ತ ಹೋಗಿ ಬಿಕ್ಕಟ್ಟುಂಟಾಗಬಹುದು. ಈಗಾಗಲೆ ಹಿಂದೀ ಘಟನಾ ಸಮಿತಿಯ ಕೈಗೆ ಅಧಿಕಾರ ಬರಲು ಅಕ್ಟೋಬರ ೧೫ ರಷ್ಟು ತಡವಾಗಬಹುದೆಂದು ಹೇಳಲಾಗಿದೆ. ಈ ಬಿಕ್ಕಟ್ಟೊಂದು ಬೇಳೆ ಬಂದರೆ ಅದು ಇನ್ನಷ್ಟು ದೂರ ಹೋಗಿ ಸದ್ಯದ ನಿಷ್ಪ್ರಯೋಜಕ ಕೇಂದ್ರ ಸರಕಾರವೆ ಉಳಿಯಬೇಕಾದೀತು.

ಸಣ್ಣ ಕತೆ

ಸೆಳೆತ!

ಕತೆಗಾರರು: ಶ್ರೀ ಸೇವ ನಮಿರಾಜ ಮಲ್ಲ

ಗಂಟೆ ಒಂಭತ್ತು ಮುಕ್ಕಾಲು. ಲೀಲಳ ತಲೆ ಬಾಚಿ ಆಗುತಿತ್ತಷ್ಟೆ. ಮತ್ತೆ ಐದು ನಿಮಿಷ ಶಾಲೆಗೆ ಹೊತ್ತಾಯಿತು ಗಂಟೆ ಕೇಳಿತು. ಲೀಲ ಪುಸ್ತಕಗಳನ್ನು ಹಿಡಿದುಕೊಂಡು ಹೊರಗೆ ಬಂದಳು.

ಚಟ್ ಚಟ್ ಎನ್ನುವ ಚಪ್ಪಲಿನೊಡನೆ ಡಾಮರ ಹಾಕಿದ ಮಾರ್ಗದಲ್ಲಿ ಕೊಡೆ ಹಿಡಿದು ಕೊಂಡು ಬೇಗ ಬೇಗನೆ ಹೆಜ್ಜೆ ಇಡುತಿದ್ದಾಳೆ. ವಾಹನಗಳು, ಜನರು—ಎಲ್ಲ ಹಿಂದಿನಿಂದ ಮುಂದೆ ಮುಂದಿನಿಂದ ಹಿಂದೆ ಹಾದು ಹೋಗು ತ್ತಿದ್ದಾರೆ. ಗಡಿಬಿಡಿ.

ಮತ್ತೊಂದು ಚಪ್ಪಲಿನ ಶಬ್ದ.

ಲೀಲಳ ಕಣ್ಣು ಫಕ್ಕನೆ ಆ ವ್ಯಕ್ತಿಯೆಡೆಗೆ ತಿರುಗಿತು. ಹೌದು ಅವನೇ, ಅದೇ ನೀಳವಾದ ಶರೀರ, ದೀರ್ಘವಾದ ಬಾಹುಗಳು, ಮುಖಕ್ಕೊಪ್ಪುವಂತೆ ಬಾಚಿದ ತಲೆಗೂದಲು, ಕುಡಿ ಮೀಸೆಯ ಮುಖ ಹೇಟ್, ಬೂಟ್ಸುಗಳು, ಕೈಯಲ್ಲಿ ಸಿಗರೇಟಿನ ಹೊಗೆ ಹೋಗುತ್ತಿದೆ. ಇನ್ನೊಂದು ಕೈಯ್ಯಲ್ಲಿ ಪುಸ್ತಕದ ಕಟ್ಟು, ಅವನೂ ಹೋಗುತ್ತಿದ್ದಾನೆ.

ತುಸು ದೂರ ಹೋಗಿ ಅವನು ಫಕ್ಕನೆ ಹಿಂದಿರುಗಿ ನೋಡಿ ಓಡಿ ಬರುತ್ತಿದ್ದ ಕುದುರೆ ಗಾಡಿಗೆ ದಾರಿ ಬಿಟ್ಟ. ಹಿಂದಿನಿಂದ ಲೀಲ ನಡೆದುಕೊಂಡು ಬರುತ್ತಿದ್ದಾಳೆ ಕಣ್ಣುಗಳು ಒಂದಾದುವು. ಲೀಲಳ ಮೈ ಮುಂಚೆಯೇ ಬಿಸಿಲಿಗೆ—ಸೆಕೆಗೆ ಬೆವರಿತ್ತು. ಈಗ ಹೆಚ್ಚು ಬೆವರತೊಡಗಿತು ಏನೋ ಆಯಿತು. ಲೀಲಳ ಮನಸ್ಸು ಅವಳ ಕೈಯ್ಯಲ್ಲಿರಲಿಲ್ಲ ಅದೆಲ್ಲೋ ಓಡಿತು. ಅದರ ಸ್ವಭಾವವೇ ಹಾಗೆ ಶಾಲೆಯ ಗಂಟೆ ಆಗ ಕೇಳಿತು. ಅವನು ವೇಗದಲ್ಲಿ ಹೋಗುತ್ತಲೇ ಇದ್ದ ಲೀಲ ಅವನನ್ನು ಹಿಂಬಾಲಿಸಿ—ಅಲ್ಲಿ ಹಿಂನಿಂದ, ವೇಗ ಚಲ್ಲೀ ಹೋಗುತಿದ್ದಳು. ಎದುರಿನಿಂದ ಒಂದು ಸೈಕಲ್ ಸವಾರ ಅವಳ ಮೇಲೆ ಅದನ್ನು ಹಾಕುವನೋ ಎಂದು ತೋರುತಿತ್ತು. ಒಳಗೊಳಗೇ ಅವನನ್ನು ಶಪಿಸಿದಳು. ಮುಂಬರಿದವ ಹೋಗುತ್ತಲೇ ಇದ್ದಾನೆ! ಬಹುಶಃ ಬೇಗನೇ ಕಣ್ಮರೆಯಾದಾನು. ಛಿ ಅಪಸ್ಮಾರ!

ಸೈಕಲ್ ಅವಳ ಮೇಲೆ ಬಿತ್ತು ಬಿತ್ತು ಎಂದಾಯಿತು. ಫಕ್ಕನೆ ಅವಳು ಬದಿಗೆ ಓಡಿದಳು ಸವಾರ 'ಕ್ಷಮಿಸಿ' ಎಂದ.

ಮತ್ತೊಂದು ತಂತಿ ಕಂಭ; ಲೀಲ ಅದಕ್ಕೆ ಢಿಕ್ಕಿ ಹೊಡೆದೇ ಹೊಡೆದಳು. ಪುಸ್ತಕಗಳು ಕೆಳಗೆ ಬಿದ್ದುವು. ಕೊಡೆ ಧೂಳಿನೊಡನೆ ಬೆರೆಯಿತು.

ಅವನು ಹೋದ. ಬಹುಶಃ ಕಣ್ಮರೆಯಾದ. ಅವನ ಕೆಂಪು ಕೆಂಪು ಮುಖ ಇನ್ನೂ ಅವಳ ಮುಂದೆಯೇ ಮನೆ ಮಾಡಿದೆ, ಈ ಘಟನೆಯಲ್ಲಿರುತ್ತಿದ್ದರೆ ಇಷ್ಟರೊಳಗೆ ಅವನ ಬೆನ್ನು ಹಿಡಿಯುತಿದ್ದಳು; ವಿಘ್ನಮಾಲೆಗಳು!

ಪುಸ್ತಕ ಹೆಕ್ಕಿಕೊಂಡಳು. ಹಿಂದಿನಿಂದ ಬರುತ್ತಿದ್ದವರು ಜೋರಾಗಿ ನಗುತ್ತಿದ್ದರು ಮುಖ ಕೆಂಪಾಯಿತು.

"ಪುಸ್ತಕಕೆಳಗೆ ಬಿದ್ದವೆ ಲೀಲ? ಓದಿದ್ದು ಅಷ್ಟು ವಿಪರೀತವಾಯಿತೆಂದು ನಿನಗೆ ಈಗಲಾದರೂ ತಿಳಿಯಿತಲ್ಲ!" ಸಹಪಾಠಿಣಿ ನಿರುಪಮ ನಕ್ಕಳು.

ಲೀಲಳಿಗೆ ನಿಜವಾಗಿ ನಾಚಿಕೆಯಾದುದು ಈಗ. ಮಾತಾಡಲಿಲ್ಲ.

ಅವನು ಶಾಲೆಯ ಮೆಟ್ಟಲು ಹತ್ತುತಿದ್ದಾನೆ ಇನ್ನೊಂದೆರಡು ಮೆಟ್ಟಲುಗಳು ಉಳಿದಿವೆ; ಅಷ್ಟೆ; ಲೀಲ ಹಿಂದೆ ಬಿದ್ದಂತೆಯೇ.........

ಅವನು ಕಣ್ಮರೆಯಾಗಿಯೇ ಆದ.

ಲೀಲಳಿಗೆ ನಿರಾಶೆ; ನಿರಾಶೆ? ಯಾಕೆ? ಏನು? ಅವನ ಗುರುತು ಅವಳಿಗಿಲ್ಲ ಅವಳ ಗುರುತು ಅವನಿಗಿಲ್ಲ. ಆಶೆ ಹುಟ್ಟಿದ ನಂತರ ತಾನೇ ನಿರಾಶೆ ಹುಟ್ಟಬೇಕಷ್ಟೆ; ಅಂತಹ ಆಶೆ ಈ ವರೆಗೆ ಹುಟ್ಟಲಿಲ್ಲ ಬಹುಶಃ:

ಆದರೂ ಒಂದು ತರಹದ ಭಾವೋದ್ರೇಕ ಯೌವ್ವನದಲ್ಲಿ ಸಹಜವಾದ ಮನೋವೃತ್ತಿ; ಆಸೆಯೂ ಅಲ್ಲ ನಿರಾಶೆಯೂ ಅಲ್ಲ ಒಂದು ತಂಪಾದ ಕೋಮಲ ಗಾಳಿಯು ಎಬ್ಬಿಸಿದ ಅಲೆಯದು.

ನನಗೇಕೆ ಇಂಥ ಕ್ಲಿಷ್ಟ ವಿಚಾರ ಎಂದು ಹುಬ್ಬು ಹಾರಿಸಬೇಡಿ ಅರ್ಥಾತ್ ಸಂಬಂಧ ಅದರೊಡನೆ ನನಗಿಲ್ಲ.

ಆದರೆ ನಾನೂ ಒಬ್ಬ ಪ್ರಾಣಿ—ಮನುಷ್ಯ ಪ್ರಾಣಿ ಹುಂ ಕಾಲೇಜು ಹುಡುಗಿ. ಆ ಹೆಸರಿನ ನಾಟಕ ಚಲಚ್ಚಿತ್ರಗಳು ಕೂಡ ಆಗಿವೆ! ಅಂಥ ವಿಶಿಷ್ಟ ಕಥಾವಸ್ತು ಅದು. ಮನೆಯ ಹಿರಿಯರ ಹೆಚ್ಚಾಗಿ ವೃದ್ಧ ನಾರಿಯರ—ಬಾಯಲ್ಲಿ ಅದು ಬೇಯುತ್ತಿರುವ ವಿಚಾರ. ಎಷ್ಟೋ ತರುಣರಿಗೆ ಸತತ ತಲೆನೋವು—ಹುಚ್ಚು ಕೂಡಾ ಹಿಡಿಸಿದ ಸಂಗತಿ. ನನ್ನ ಲೆಕ್ಕಣಿಯಂತಹ ಅನೇಕ ಲೆಕ್ಕಣಿಗಳಿಗೆ ಹಲವು ವರುಷಗಳಿಂದ ಕೆಲಸ ಕೊಡುತ್ತಿರುವ, ಓದುಗರ ಬಾಯಿಯಲ್ಲಿ ನೀರೂರಿಸುವ ಅನುಪಮ ಕಲಾಕೃತಿ ಆ ಕಾಲೇಜು ಹುಡುಗಿ!

ಇರುಪಮ ಸಿಗಬಾರದಿತ್ತೆಂದು ಲೀಲ ಮನಸಿನಲ್ಲಿ ಬಗೆಯುತ್ತಿದ್ದಳು. ಉಪಾಯವಿಲ್ಲ, ಇಬ್ಬರೂ ಹೆಜ್ಜೆ ಹಾಕಿ ಕಾಲೇಜು ಸೇರಿದರು.

ಪಾಠಗಳು ಸುರುವಾಗತೊಡಗಿದ್ದುವು. ಲೀಲ ಯಾವುದೋ ಒಂದು ಪುಸ್ತಕ ಬಿಡಿಸಿದಳು ಉಪನ್ಯಾಸಕರ ಉಪನ್ಯಾಸ ಅವಳಿಗೆ ಕೇಳಲಿಲ್ಲ. ಬದಿಯಲ್ಲಿದ್ದ ಗೆಳತಿಯರ ಗೊಡವೆ ಅವಳು ತೆಗೆದುಕೊಳ್ಳಲಿಲ್ಲ.

ಅವಳ ಪ್ರಪಂಚ ಬೇರೆ ಯಾಗುತ್ತಿತ್ತು.

ಗಂಟೆ ಬಾರಿಸಿತು ಒಂದು ಪಾಠ ಮುಗಿಯಿತು ಮತ್ತೊಂದು ಕೋಣೆಗೆ ಹೋಗಬೇಕು. ಲೀಲ ಎದ್ದು ಸೆರಗು ಸರಿಮಾಡುತ್ತ ಹೋದಳು. ಅಧ್ಯಾಪಕರು ಬಂದರು; ಪುನಃ ಉಪನ್ಯಾಸ ಸುರುವಾಯಿತು. ಲೀಲಳೊಡನೆ ಪುಸ್ತಕವಿಲ್ಲ! ಅವಳಿಗೆ ಆ ಸಂಗತಿಗೊತ್ತಾದುದು ಆಗ ತಾನೇ ಮನೆಯಿಂದ ಪುಸ್ತಕ ಅವಳು ತಂದಿದ್ದಳು. ಹೌದು—ಮತ್ತೆ?

ಅಧ್ಯಾಪಕರ ಸಿಂಹಾವಲೋಕನ ಅವಳ ಮೇಜಿನ ಮೇಲಾಯಿತು. ಏನೋ ತುಸು ತನಿಖೆ ಮಾಡಿದರು—ಪುಸ್ತಕವಿಲ್ಲ!

ಎಲ್ಲರಿಗೂ ಆಶ್ಚರ್ಯ; ಅವಳೊಡನೆ ಒಂದೂ ಪುಸ್ತಕವಿಲ್ಲ!

ಲೀಲಳಿಗೆ ಜುಗುಪ್ಸೆಯಾಯಿತು. ಗೆಳತಿಯರು ಕಿಲಕಿಲನೆ ನಗತೊಡಗಿದರು. ಅವಳು ಅತ್ತಿತ್ತ ನೋಡತೊಡಗಿದಳು ಮತ್ತೆ ಗಂಡು ಸಹಪಾಠಿಗಳ ವಿಚಾರ ಹೇಳುವುದೇ ಬೇಡ ಇಡಿ ತರಗತಿ ನಗೆಗಡಲಲ್ಲಿ ತೇಲಿತು.

ಲೀಲ ಮತ್ತೆ ಅಧ್ಯಾಪಕರ ಕ್ಷಮೆ ಬೇಡಿ ತನ್ನ ಹಿಂದಿನ ಪಾಠದ ಕೋಣೆಗೆ ಹೋದಳು. ಅಲ್ಲಿ ಆಗ ಪಾಠವಿರಲಿಲ್ಲ. ಪುಸ್ತಕವನ್ನು ಮೇಜಿನಿಂದ ತೆಗೆಯುತ್ತೇನೆಂದು ಅವಳು ಕೈಹಾಕುವಾಗ ಜುಂ!

ಒಬ್ಬ ಓದುತಿದ್ದಾನೆ. ಲೀಲಳನ್ನು ನೋಡಿದೊಡನೆ ತಲೆಕೆಳಗೆ ಹಾಕಿದ. ಬಹುಶಃ ಒಳ್ಳೆಯ ಹುಡುಗ.

ಪುಸ್ತಕಗಳನ್ನು ಲೀಲ ಅಮುಕಿದಳು ಕಣ್ಣುಗಳು ಅತ್ತಿತ್ತ ಚಲಿಸಿದುವು. ಮೈ ಕಂಪಿಸಿತು ಬೆವರು ಸುರಿಯ ತೊಡಗಿತು. ಒಬ್ಬ ಹುಡುಗ ಒಬ್ಬ ಹುಡುಗಿ ಇಬ್ಬರೇ—ಒಂದೆಡೆಯಲ್ಲಿ! ಎಂಥ ಸಂದರ್ಭ ಜೋಡಣೆ! ಪುಸ್ತಕಗಳನ್ನು ಕೈಗೆ ತೆಗೆದುಕೊಂಡು ಹಿಂದೆ ತಿರುಗಲು ಲೀಲಳಿಗೆ ತುಸು ತಡವಾಗಿರಬಹುದು. ಹುಡುಗ ಪುಸ್ತಕವನ್ನು ತನ್ನ ಮುಖದ ಅಡ್ಡ ಹಿಡಿದುಕೊಂಡು ಓದುತ್ತಿದ್ದ ಹಾಗೆ ಕಾಣುತಿತ್ತು.

ಲೀಲ ಹೊರಗೆ ಬರುವಾಗ ನಾಲ್ಕೈದು ಹುಡುಗರ ತಂಡ ಒಂದು ಬಂತು, ಅವರ ನಗು ಮಿತಿ ಮೀರಲು ಹವಣಿಸುತಿತ್ತು. ಅದೂ ಒಳಗಿದ್ದವನನ್ನು ಕಂಡು ಅದು ಮಿತಿ ಮೀರಿಯೇ ಮೀರಿತು.

ಲೀಲ ತಲೆ ಕೆಳಗೆ ಹಾಕಿ ಬೇಗ ಬೇಗನೆ ತನ್ನ ತರಗತಿಯ ಕೋಣೆಗೆ ಹೋದಳು ಅವಳ ಹಣೆಯಲ್ಲಿ ಸುರಿಯುತಿದ್ದ ಬೆವರನ್ನು ಕಂಡು ಎಲ್ಲರೂ ಬಹಳ ಆಯಾಸದ ಸವಾರಿ ಎಂದು ನಗತೊಡಗಿದರು. ಅಧ್ಯಾಪಕರಿಗೂ ನಗು 'ಶಿಸ್ತು' ಮೀರಿ ಬರುತಿತ್ತು ಲೀಲಳಂತೂ ಏಕಾಕಿಯಾದಳು, ಅವಳನ್ನು ಸಂತೈಸಲು—ಸಹಾನುಭೂತಿಯನ್ನೀಯಲು ಯಾರೂ ಇಲ್ಲ.

ಲೀಲಳ ಮನಸ್ಸಾಗ ಇಷ್ಟೇ ಕದರಿತ್ತೆಂಬದನ್ನು ಊಹಿಸುವುದು ಸಹ ಅಸಾಧ್ಯ. ಮನಸ್ಸಿನಲ್ಲಿದ್ದಷ್ಟು ಎಲ್ಲವನ್ನು ಅವಳು ಬಯ್ಯುತಿದ್ದರೆ ಕೂಡಲೇ ತರಗತಿ ಸಹ ಬಹುಶಃ ಬರಿದಾಗುತಿತ್ತು.

ಆದರೆ ಯಾಕೆ ಅವಳು ಬಯ್ಯಬೇಕು? ಯಾರಿಗೆ ಬಯ್ಯಬೇಕು? ಮತ್ತೆ ಅವಳಿಗೆ ಹಾಗೆ ಹೊಳೆಯಿತು.

ಪುಸ್ತಕದಲ್ಲಿದ್ದ ಅಕ್ಷರಗಳು ಅವಳಿಗಾಗ ಕಾಣುತ್ತಿದ್ದಿಲ್ಲ—ಕಣ್ಣಿನಲ್ಲಿ ಕಣ್ಣೀರು ತುಂಬಿ ಅದನ್ನು ಕರವಸ್ತ್ರದಲ್ಲಿ ಒರೆಸುವ ಧೈರ್ಯವೂ ಅವಳಲ್ಲಿಲ್ಲ. ಹಾಗೆ ಮಾಡಿದರೆ ಅವಳು ಶುದ್ಧ ಹೇಡಿಯೆಂದು ಪ್ರೇಕ್ಷಕರಿಗೆ ವ್ಯಕ್ತವಾಗುವದು. ಸ್ವಾಭಿಮಾನ ಅವಳದು ಅಷ್ಟು ಹೆಚ್ಚು. ತಾನು ಸೋಗುವದಿಲ್ಲ ಎಂದು ಅವಳು ಬಹಳವಾಗಿ ನೆನೆದುಕೊಂಡಳು.

ಈ ಬೇಗುದಿ ಸ್ವಲ್ಪ ಶಾಂತವಾಗುತ್ತ ಬರಲು ಅವಳಿಗೆ ನೆನೆಗುದಿ ಮೊದಲಾಯಿತು: ಆ ಕೋಣೆಯಲ್ಲಿ ಕುಳಿತ ಹುಡುಗ. ಅವನನ್ನೇ ಅವಳು ಮನೆಯಿಂದ ಬರುವಾಗ ಕಂಡುದು. ಅವನನ್ನೇ ಅವಳು ಹಿಂಬಾಲಿಸಲು ಹವಣಿಸಿದುದು. ಅವನದೇ ಮಾಯಾಚಿತ್ರ ಅವಳ ಮುಂದಿರುವುದು. ಅವನ ಆ ಕುಡಿಮೀಸೆಯ ಮುಖ, ಅಂದವಾದ ತಲೆಗೂದಲು, ವರ್ಣರಂಜಿತ ಪೋಷಾಕು, ಉಲಿಯುವ ಕಣ್ಣುಗಳು—ಇವೆಲ್ಲ ಅವಳ ಭಾವನಾ ಪ್ರಪಂಚದಲ್ಲಿ ಶೋಭಿಸುತ್ತಿವೆ. ಅವನ ಚೆಲುವಿನ ಮುಂದೆ ಅವಳು ಮೂಕಳಾಗಿದ್ದಾಳೆ! —ನಿಶ್ಚೇತನಳಾಗಿದ್ದಾಳೆ!

ಪುನಃ ಗಂಟೆ ಬಾರಿಸಿತು.

ಹುಡುಗರ ಗಜಿಬಿಜಿ ಒಬ್ಬರನ್ನೊಬ್ಬರು ದೂಡಿಕೊಂಡು, ನೆಗೆದುಕೊಂಡು, ಜಿಗಿದು ಹೋಗುತಿದ್ದಾರೆ. ಪಕ್ಕದಲ್ಲಿ ಹೋಗುತ್ತಿದ್ದ ಹುಡುಗಿಯರ ಪೇಚಾಟ ಹೇಳತೀರದು.

ಲೀಲ ಒಬ್ಬನಿಗೆ ಢಿಕ್ಕಿ ಹೊಡೆದಳು ಹುಡುಗ ಬದಿಯಲ್ಲಿ ಹೋಗುತಿದ್ದ ಅವಳು ಎಚ್ಚರ ತಪ್ಪಿ ಅವನಿಗೆ ಹಾಗೆ ತಾಗಿದುದು. ಕೆಲ ಹುಡುಗರು ಮಾತ್ರ ಅಲ್ಲಿದ್ದರು. ಅದುದರಿಂದ ಹೆಚ್ಚು ಗಲಾಟೆ ಆಗಲಿಲ್ಲ. ನಿಜವಾಗಿಯೂ ಇಬ್ಬರೂ ನಿರ್ದೋಷಿಗಳೆಂಬುದು ಎಲ್ಲರಿಗೂ ವ್ಯಕ್ತವಾಗಿತ್ತು.

ತಾಗಿದ ಹುಡುಗ ಬೇರೆ ಯಾರೂ ಅಲ್ಲ. ಅವನೇ ಲೀಲಳಿಗೆ ಈ ಸಂಗತಿ ಗೋಚರವಾದೊಡನೆ ರೋಮಾಂಚನವಾಯಿತು. ಬಹಳ ಬಿರುಸಿನ ಏಟು. ಅವನ ಭುಜ ಅವಳಿಗೆ ತಾಗಿ ಅವಳಿಗೆ ತುಸು ನೋವಾಗುತ್ತಿತ್ತು. ಏನು ಲೋಕ!

ಆದರೂ ತಾಗಿದುದು ಅವನು—ಅವಳು ಎಣಿಸಿದವನು.

ಅನಂತರದ ಪಾಠವಲ್ಲಿ ಬರೆಯುವ ಅಭ್ಯಾಸ. ಲೀಲ ಏನು ಬರೆದಳೋ ಅವಳಿಗೆ ತಿಳಿಯದು. ಅವಳ ನಿನ್ನೆಯ ದಿನಗಳೆಲ್ಲ ಕನಸಿನಂತೆ ಕಾಣುತ್ತಿದ್ದುವು. ಇಂದಿನ ದಿನದಿಂದ ಅವಳಿಗೆ ಅವಳ ಬಾಳಿನ ಭವ್ಯ ಚಿತ್ರ ಗೋಚರವಾದುದು: ನಿರ್ಜೀವ ಕಾಗದದ ಚಿತ್ರ ಅಕ್ಷರಗಳಿಂದ ಸಜೀವ ಪ್ರಕೃತಿ ಚಿತ್ತ ಮೂರ್ತಿಗಳೆಡೆಗೆ ಅವಳ ಭಾವನೆ ವಿಕಾಸ ಗೊಂಡುದು.

ಬರೆಯಲು ಅಕ್ಷರಗಳೇ ಬಾರವು. ಅವಳ ಭಾವನೆಯನ್ನು ಹೊರಪಡಿಸುವ ಅಕ್ಷರಗಳು ಅಕ್ಷರಮಾಲೆಯಲ್ಲೇ ಇಲ್ಲ. ಆ ಭಾವನೆ ಜೀವಂತ ಕೃತಿಯಾಗಿ ಮೂರ್ತಗೊಳ್ಳಬೇಕಷ್ಟೆ. ಅಧ್ಯಾಪಕರ ತೃಪ್ತಿಗೆ ಏನೇನ್ನೋ ಗೀಚಿದಳು. ಪಾಠಕ್ಕೂ ಅವಳ ಬರಹಕ್ಕೂ ಸಂಬಂಧ ಅಷ್ಟಕ್ಕಷ್ಟೆ.

ಶಾಲೆ ಬಿಟ್ಟಿತು. ಅವರವರ ಮನೆಗೆ ಅವರವರು ಹೋದರು. ಲೀಲಳೂ ಸುಡುವ ಬಿಸಿಲಿನಲ್ಲಿ ನಡೆದಳು. ಕೊಡೆಯಿತ್ತು ಕೈಯಲ್ಲಿ. ಆದರೆ ಅದನ್ನು ಬಿಸಿಲಿಗೆ ಅಡ್ಡವಾಗಿ ಉಪಯೋಗಿಸಬೇಕೆಂಬ ಗೊಡವೆ ಅವಳಿಗಿಲ್ಲ. ಒಂದೇ ಸವನೆ ಹೋಗುತ್ತಿದ್ದಾಳೆ.

ಅವನೂ ಬದಿಯಿಂದ ಹಾಯ್ದು ಹೋದ.

ಅವನ ಮನೆ ಬೇರೆ ರಸ್ತೆಯಲ್ಲಿ. ಅವಳ ಮನೆ ಅಲ್ಲಿಯೇ. ಅತ್ತಿತ್ತ ನೋಡದೆ ಅವನು ಸಾಗುತ್ತಿದ್ದ ಸ್ವಲ್ಪ ದೂರದಲ್ಲಿ ಅವನು ತಿರುಗಿ ನೋಡಿದ. ಲೀಲ ಅವನು ತನ್ನನ್ನೆ ನೋಡಿದ್ದು ಎಂದು ಎಣಿಸಿದಳು.

ಊಟವಾಯಿತು ಮನೆಯ ಮುಂದೆ ಜಗಲಿಯಲ್ಲಿ ಕುಳಿತು ಪತ್ರಿಕೆ ಓದತೊಡಗಿದಳು. ಪತ್ರಿಕೆಗಳ ಸುದ್ದಿ ಅವಳಿಗೆ ರುಚಿಸಲಿಲ್ಲ. ಅವಳ ಕಣ್ಣು ರಸ್ತೆಯ ಮೇಲೆಯೇ ಇತ್ತು. ಒಂದೂವರೆ ಹೊಡೆಯಿತು.

ಟಕ್ ಟಕ್, ಗಂಟೆ ಒಂದೇ ಸವನೆ ಮುಂದರಿಯುತ್ತಿದೆ: ಒಂದು ಮೂವತ್ತೈದು, ನಲ್ವತ್ತು, ನಲ್ವತ್ತೈದು, ನಲ್ವತ್ತಾರು, ನಲ್ವತ್ತೇಳು......

ಲೀಲ ಚಪ್ಪಲ್ ಹಾಕಿದಳು. ಅವನು ಹೋಗುತ್ತಿದ್ದ.

ಮನೆಯ ಗೇಟಿನ ಬಳಿಗೆ ಹೋಗುವಾಗ ಅವಳ ತಂದೆಯ ಕಾರು ಎದುರಿಂದ ಬಂತು. ಅದರಿಂದ ತಪ್ಪಿಸಿಕೊಳ್ಳಲು ಬಹಳ ಯತ್ನನಡಿಸಬೇಕಾಯಿತು. ಕಾರು ಬಿಡುವವನ ಜೀವ ಒಮ್ಮೆ ಹಾರಿಹೋದಂತಾಗಿತ್ತು. ಇದರಿಂದ ನಾಲ್ಕು ನಿಮಿಷ ವ್ಯರ್ಥವಾಯಿತು.

ರಸ್ತೆಗೆ ಹೋಗುವಾಗ ಅವನು ಕಾಣುತ್ತಿದ್ದಿಲ್ಲ. ಬಹಳ ಮುಂದೆ ಹೋಗಿರಬೇಕು. ಪುನಃ ನಿರಾಶೆ—ಹತಾಶೆ.

ಸಂಜೆ ಕಾಲೇಜು ಸಂಘದಲ್ಲಿ ಭಾಷಣಗಳಿದ್ದುವು. ಅವನೂ ಭಾಗವಹಿಸಿದ್ದ. ಅವನ ವಾಗ್ಮಿತ್ವ ಪ್ರಚಂಡವಾಗಿತ್ತು. ಲೀಲಳೂ ಕೇಳುತಿದ್ದಳು. ಏನು ವೈಖರಿ ಅವನದು! ಎದೆಯಕ್ಕದೆ ಲೀಲ ಅವನನ್ನೇ ನೋಡುತ್ತಿದ್ದಳು. ಆಗ ಬದಿಯಲ್ಲಿದ್ದ ಗೆಳತಿಯೊಬ್ಬಳು ಏನೋ ಪಕ್ಕೆಯಿಂದು ಬೆರಳಿನಿಂದ ಚಿವುಟಿದಳು. ಲೀಲಳಿಗೆ ಬಹಳ ಕೋಪ ಬಂತು. ಆದರೆ ಮುಕ್ತಿ ಏನೂ ಆಗಲಿಲ್ಲ.

ಮನೆಗೆ ಬಂದು ರಾತ್ರೆ ಕೋಣೆಯಲ್ಲಿ ಓದತೊಡಗಿದಳು. ಬೆಳಕು ಅವಳ ಕಣ್ಣಿಗೆ ಚುಚ್ಚತೊಡಗಿತು. ಕಣ್ಣನ್ನೊಮ್ಮೆ ಮುಚ್ಚಿಕೊಂಡಳು; ಕೂಡಲೇ ಅವನ ಪ್ರತಿಬಿಂಬ!

ಮತ್ತೆ ಕಣ್ಣು ತೆರದು ಪುಸ್ತಕ ನೋಡಿದಳು. ನಂಬಲಾಗಲಿಲ್ಲ. ಅವನದೇ ಚಿತ್ರ ಪಟ ಪುಟದಲ್ಲಿ ಗೋಡೆಯಲ್ಲಿ, ನೆಲದಲ್ಲಿ, ತನ್ನ ಮೈಮೇಲೆ—ಎಲ್ಲೆಲ್ಲೂ ಅವನದೇ ಚಿತ್ರ! ತನ್ನ ಕೋಣೆಯಲ್ಲಿ ಹೀಗೆ ಯಾರಾದರೂ ಹಚ್ಚಿ ಹೋದರೋ ಎಂದು ಅತ್ತಿತ್ತ ನೋಡಿದಳು. ಇಲ್ಲ, ಯಾರೂ ಇಲ್ಲ. ಅವನು ತನ್ನ ಉಲಿಯುವ ಕಣ್ಣುಗಳಿಂದ ಅವಳನ್ನು ಎಲ್ಲೆಲ್ಲಿಂದಲೂ ನೋಡುತ್ತಿದ್ದಾನೆ—ನಗುತ್ತಿದ್ದಾನೆ!

ಏನು ವಿಚಿತ್ರ! ಅವಳಿಗೆ ಕಂಡಿತು ಹಾಗೆ—ನಿಜವಾಗಿಯೂ ಅವಳು ಈ ವರೆಗೆ ಕೇಳದ, ತಿಳಿಯದ, ನೋಡದ ವಿಚಿತ್ರ!

ಇಷ್ಟಾಗುವಾಗ ಉಳಿದವರಿಗೂ ಹೀಗೆಯೇ ಕಂಡೀತೇ? ಎಂದು ಅವಳಿಗೆ ಸಂಶಯವಾಗದಿರಲಿಲ್ಲ. ಹಾಗೆ ಕಂಡರೆ ದೊಡ್ಡ ಅಪವಾದ ತನ್ನ ಮೇಲೆ ಬರದಿರಲಾರದೆಂದೂ ಅವಳಿಗೆ ಹೆದರಿಕೆಯಾಯಿತು. ಆ ಚಿತ್ರಗಳನ್ನು ಹರಿದು ಹಾಕಲು ಕೈ ಎತ್ತಿದಳು. ಚಿತ್ರ ನಗತೊಡಗಿತು. ಗಟ್ಟಿಯಾದ ನಗು. ಈಗ ನಿಜವಾಗಿಯೂ ಅವಳ ಕೌತುಕ—ಕುತೂಹಲ ಪರಮಾವಧಿಗೇರಿತು.

ಬಾಗಿಲನ್ನು ಭದ್ರ ಪಡಿಸಿದಳು.

ಒಮ್ಮೆಯೆ ಚಿತ್ರಗಳೆಲ್ಲ ಮಾಯವಾದುವು. "ಲೀಲ" ಎಂದು ಯಾರೋ ಅವಳ ತಲೆಕೂದಲುಗಳನ್ನು ಮುಟ್ಟಿದಂತಾಯಿತು. ತಿರುಗಿ ನೋಡಿದಳು. ಯಾರದೂ ಸ್ಪಷ್ಟ ರೂಪ ಕಾಣುವುದಿಲ್ಲ. ಏನೋ ಅಲೆಯುತ್ತಿರುವಂತೆ ಅವಳಿಗೆ ಭಾಸವಾಯಿತು.

ಅದಕ್ಕಾಗಲಿ ಎನ್ನುತ್ತ ಮಂಚದಲ್ಲಿ ಹಾಸಿಗೆ ಬಿಡಿಸಿ ಸೊಳ್ಳೆ ಪರದೆಯನ್ನು ಇಳಿ ಬಿಟ್ಟು ದೀಪ ನಂದಿಸಿದಳು.

ನಿದ್ದೆ ಬರಲಿಲ್ಲ. ಅವನ ನೆನಪು ಪುಟಿಯುತ್ತಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ ಅವನೇನೋ ತನ್ನ ಬಳಿಯಲ್ಲೇ ಇರುವನೆಂಬ ಸಂಶಯ. ಬಹಳ ಹೆದರಿಕೆ ಅದರೊಡನೆ. ಸೊಳ್ಳೆಗಳ ಗಾನ ಪರದೆಯ ಹೊರಗಿಂದ ಕೇಳುತ್ತಿತ್ತು.

ಫಕ್ಕನೆ ಯಾರೋ ಪರದೆಯನ್ನೆತ್ತಿದಂತಾಯಿತು. ದಿಗಿಲುಗೊಂಡು ಎದ್ದಳು. ಯಾರೋ ಅಪ್ಪಿ ಹಿಡಿದರು, ಚುಂಬಿಸಿದರು.

ಒಂದು ಮಿಂಚು ಹೊರಗಿಂದ.

ಮುಖ ಕಂಡಿತು ಲೀಲಳಿಗೆ. ಅವನೇ!

ಅವಳ ಮುಖವನ್ನೆಲ್ಲ ಅವನು ಚುಂಬಿಸಿಯಾಗಿದೆ. ಅದೇ ದುಂಡಗಾದ ಮಾಂಸವುಳ್ಳ ಮುಖ ಅವಳ ಮುಖವನ್ನೊತ್ತುತ್ತಿದೆ!

ಅವನೇ ಬೆಳಗ್ಗೆ ತನಗೆ ರಸ್ತೆಯಲ್ಲಿ ಕಾಣಸಿಕ್ಕಿದವ. ಮತ್ತೆ ಶಾಲೆಯ ಕೋಣೆಯಲ್ಲಿ ಕುಳಿತುಕೊಂಡಿದ್ದವ. ಸಂಜೆ ಭಾಷಣವಿತ್ತವ. ಹೌದು. ಅವನೇ. ಅವನನ್ನೇ ತಾನು ಬಯಸಿದುದು.

ಇಬ್ಬರೂ ಏನೇನೋ ಮಾತನಾಡಿದರು. ಲೀಲಳನ್ನೇ ಅವನು ಮದುವೆಯಾಗುವನೆಂದು ಭಾಷೆಯಿತ್ತ. ಲೀಲ ಉಬ್ಬಿದಳು. ಅವನ ಕೈಗಳೆಡೆಯಲ್ಲಿ ನಲಿದಳು. ಕೋಣೆಯಲ್ಲಿ ಅವನೊಡನೆ ನಾಟ್ಯವಾಡಿದಳು. ಮಧುರಮಯ ಪ್ರೇಮ ಗೀತಗಳನ್ನು ಹಾಡಿದಳು. ಸಂತೋಷದಲ್ಲಿ ಮೈಮರೆತಳು.

ಲೀಲ ಬೆಳಗ್ಗೆ ಎದ್ದಿರಲಿಲ್ಲ. ಅವಳ ತಾಯಿ ಬಂದು ಎಚ್ಚರಿಸಿದರು. ತುಂಬ ತಡವಾಗಿತ್ತು. ಲೀಲಳಿಗೆ ಮೈಯ್ಯಲ್ಲಿ ತುಂಬ ಆಯಾಸ-ಜಡ ಆಕಳಿಸುತ್ತ ಆಕಳಿಸುತ್ತ ಕಣ್ಣುಜ್ಜಿಕೊಂಡು ಹೊರಗೆ ಹೋಗಿ ಮುಖ ತೊಳೆದುಕೊಂಡು ಒಂದು ಮೇಜಿನ ಹತ್ತಿರ ಓದಲು ಕೂತಳು.

ದಿನ ಪತ್ರಿಕೆ ಬಂತು. ಹುಡುಗನ ಕೈಯಿಂದ ಅದನ್ನು ತೆಗೆದುಕೊಂಡು ಬಿಡಿಸಿದಳು.

ಫಕ್ಕನೆ ಒಂದು ಜಾಹೀರಾತು ಅವಳ ಲಕ್ಷ್ಯ ಸೆಳೆಯಿತು.

"ನಿಶ್ಚಯಗಳು. ಶ್ರೀಯುತ ಜನಾರ್ದನ ಮತ್ತು ಶ್ರೀಮತಿ ನಿರುಪಮ. ಮದುವೆ ಸದ್ಯದಲ್ಲೇ ನೆರವೇರುವುದು."

ಕೆಳಗೊಂದು ಭಾವ ಚಿತ್ರವೂ ಇತ್ತು.

ಜನಾರ್ದನನೆಂದರೆ ಯಾರೆಂದು ಅವಳಿಗೆ ತಿಳಿಯುವ ಅವಶ್ಯ ಬೀಳಲಿಲ್ಲ. ಭಾವ ಚಿತ್ರದ ಗುರುತೂ ಸಿಕ್ಕಿತು.

ಮತ್ತೆ ನಿರುಪಮ: ಗೆಳತಿ—ಮತ್ತು ಸಹಪಾಠಿ ಪತ್ರಿಕೆಯನ್ನತ್ತ ಬಿಸುಟಳು.

—೧೩ನೇ ಪುಟಕ್ಕೆ



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ೩೦ ರಿಂದ ಜುಲೈ ೬ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಲಕ್ಷ್ಯವಿತ್ತದಿಂದ ಸ್ವಲ್ಪ ಕೆಡುವದು. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲವಾಗುವದು. ಪ್ರಿಯ ಜನರ ಸಹವಾಸ. ಪ್ರತಿಯೊಂದು ವಿಷಯದಲ್ಲಿ ಮೊದಲು ಸ್ವಲ್ಪ ಮನೋಭಂಗ, ಆದರೆ ಕೊನೆಯಲ್ಲಿ ಒಳ್ಳೆ ಫಲಸಿದ್ಧಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅಪಘಾತ ಲಾಭದ ಸಂಭವ. ಅತ್ಯಂತ ಸಾಹಸದ ಕೆಲಸಗಳನ್ನು ಮಾಡುವದರಿಂದ ಸನ್ಮಾನ ಕೀರ್ತಿ ಗೌರವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಆದರೆ ಕೊನೆಯಲ್ಲಿ ನಿಮ್ಮದೇ ಮೇಲುಗೈ. ಪ್ರವಾಸಾದಿ ಕೆಲಸ ಹಿತದ್ದು. ಆದರೆ ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೆ ಚರಣಕ್ಕೆ ಹೊಂದಿದರೆಯುಂಡಲೆ ಯಶಸ್ಸು. ತಾ. ೨, ೩, ೪, ೫ ಅನುಕೂಲ.

ವೃಷಭ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಉಳಿದ ಪ್ರಾಪಂಚಿಕ ವಿಷಯಗಳಲ್ಲಿ ಸ್ವಲ್ಪ ಕಲಹ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲವೇ. ಆದರೆ ಲಾಭ ಬಹಳ ಕಡಿಮೆ. ಮಿತ್ರ ಸುಖ ವಿಪರೀತ. ಮಿತ್ರತ್ವದಲ್ಲಿ ವಿರೋಧ. ಮಿತ್ರರಿಗಿಂತ ಶತ್ರುಗಳೇ ಉತ್ತಮ ಎಂದು ಅನಿಸುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಆದರೆ ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೇ ಚರಣಕ್ಕೆ ಹೊಂದರೆ ಕಡಿಮೆ. ತಾ. ೩೦, ೧, ೫ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೂ ಪತ್ನಿಯ ಸೌಂದರ್ಯದ ಛಾಯೆ ಮನಸಿನ ಮೇಲೆ ಬಿದ್ದದರಿಂದ ಮನಸ್ಸು ಕ್ಷಣಕ್ಷಣಕ್ಕೆ ಚಲವಿಚಲ ಗೊಳ್ಳುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಒಟ್ಟಿನಲ್ಲಿ ಅನುಕೂಲವೆಂದು ಹೇಳಬಹುದು. ಬಹಳ ಹಳೆಯ ಮಿತ್ರರ ಭೆಟ್ಟಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಆದರೆ ಲಾಭ ಬಹಳ ಕಡಿಮೆ. ಮತ್ತು ಪೆಚ್ಚುಮಾತ್ರ ವಿಪರೀತ. ಪ್ರತಿಯೊಂದು ಕೆಲಸದಲ್ಲಿ ತೊಂದರೆ ಮತ್ತು ವಿಕಂಡವಾದದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಮಿತ್ರತ್ವದಲ್ಲಿ ವಿರೋಧವಾಗುವಂಥ ಕೆಲ ಮಾತುಗಳು. ಮಕ್ಕಳಿಂದ ಅಪ್ರಿಯ ಕೃತ್ಯಗಳು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೨, ೩, ೪ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಸ್ತ್ರೀ ಸುಖ ಬಹಳ ಉತ್ತಮ. ಉಳಿದ ಪ್ರಾಪಂಚಿಕ ವಿಷಯಗಳಲ್ಲಿ ಮಾತ್ರ ಬಹಳ ತೊಂದರೆ. ಸಮೀಪದ ಆಪ್ತರಲ್ಲಿ ಕೆಲ ಕ್ಷುಲ್ಲಕ ಸಂಗತಿ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅಂದಾಜಿಗಿಂತ ಹೆಚ್ಚು. ಪ್ರತಿಯೊಂದು ಕೆಲಸದಲ್ಲಿ ಸ್ವಕೀಯರಿಗಿಂತ ಪರಕೀಯರ ಸಹಾಯ ಹೆಚ್ಚು. ಸಹಾಯ ಪ್ರಾಶಿಯೂ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಎನಿಸಿದರೂ ಶತ್ರುಗಳ ಜೋರೂ ಹೆಚ್ಚು. ಮಿತ್ರ ಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೩೦, ೧, ೫, ೬ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ. ಲಾಭವು ಅನುಕೂಲ. ಆದರೆ ಪಚ್ಚ ವಿಪರೀತ. ಮಿತ್ರರಿಂದ ಮೋಸದ ಭಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಸ್ಪರ್ಧಿ ಒಳ್ಳೆ. ಹಿಂದೆಗಿಂತ ಪೋಷಕವಾದರೂ ಹೆಚ್ಚು ಅನುಕೂಲ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೨, ೩, ೪ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಹೆಂಡತಿ ಸ್ವಲ್ಪ ಕ್ಷೇಶದ ಸಂಭವ. ಸಂಘಟನೆಯ ಪರಿವಾರದಲ್ಲಿ ಕೆಲ ಸಂಗತಿಗಳು ಬಹಳ ಅನುಕೂಲವೆನಿಸಿದರೆ ಕೆಲವು ಅಷ್ಟೇ ಪ್ರತಿಕೂಲ ಸಂಧಿಸುವವು. ಉದ್ಯೋಗದಲ್ಲಿ ಪ್ರತಿಷ್ಠೆ ಬಹಳ ಹೆಚ್ಚು. ಮತ್ತು ಲಾಭ ಹಾಗು ಪ್ರಗತಿಯೂ ಒಟ್ಟಿನಲ್ಲಿ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಮಕ್ಕಳಲ್ಲಿ ಒಂದು ವಿಶೇಷ ಉತ್ಕಂಠೆಯ ಸಂಗತಿ ಸಂಭವಿಸುವದು, ಹೊಸ್ಪ ಜನರ ಸಹವಾಸ. ಪ್ರವಾಸಾದಿ ಕೆಲಸ ಬಹಳ ಹಿತದ್ದು. ಹಸ್ತಾದ ಕೊನೆಯ ೩ ಮತ್ತು ಚಿತ್ತಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೩೦, ೧, ೫, ೬ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕಸುಖ ತೊಂದರೆಯದು. ಆದರೆ ಮಕ್ಕಳಲ್ಲಿ ಕೆಲ ಸಮಾಧಾನದ ಸಂಗತಿಗಳು. ಹೆಚ್ಚು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅಪಘಾತ ಲಾಭದ ಸಂಭವವೂ ಇದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಹೊಸ್ಪ ಜನರ ದರ್ಶನ ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತಕರ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧, ೨, ೩ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಭಯತರಲ್ಲಿ ಯಾವಾಗಾದರೊಮ್ಮೆ ಬಹಳ ರಸಿಕತೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಬಹಳ ಚಳಮಳಿಸುವದು. ಮಿತ್ರರಿಂದ ಅಪ್ರಿಯ ಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ೧ನೇ ಚರಣಕ್ಕೆ ತೊಂದರೆಯುಂಡಲೆ ಯಶಸ್ಸು. ತಾ. ೨, ೩, ೪, ೫ ಅನುಕೂಲ.

ಧನು

ಪ್ರಕೃತಿ ನಿಮ್ಮದು ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳದು ಬಹಳ ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ ಆದರೆ ಲಾಭ ಬಹಳ ಕಡಿಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಅನುಕೂಲ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ೧ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೨, ೩, ೪, ೫ ಅನುಕೂಲ.

ಮಕರ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಗೆ ಅಲ್ಪ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಸಮಾಧಾನದ್ದು. ಪ್ರಿಯಜನರ ಸಹವಾಸ. ಮಕ್ಕಳಲ್ಲಿ ಒಬ್ಬರ ಅಭಿನವ ಉನ್ನತಿ. ಉದ್ಯೋಗದಲ್ಲಿ ಬಹಳ ಜೋರಾದ ಪ್ರಗತಿ. ದೊಡ್ಡ ಪ್ರತಿಷ್ಠೆ ಮತ್ತು ತುಂಬ ಲಾಭ. ದೈವೀಕ್ಷೆಯ ಕೆಲ ಸಾಕ್ಷಾತ್ಕಾರ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಆದರೂ ಅದು ಸ್ಥಿರವಾಗಿ ನಿಲ್ಲುವ ಬಗ್ಗೆ ಮನಸ್ಸಿನಲ್ಲಿ ಸಂಶಯ. ಪ್ರವಾಸಾದಿ ಕೆಲಸ ಹಿತದ್ದು. ಶ್ರವಣದ ಕೊನೆಯ ೩ ಮತ್ತು ಧನಿಷ್ಠಾದ ೧ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೩೦, ೧, ೫, ೬ ಅನುಕೂಲ.

ಕುಂಭ

ನಿಮ್ಮದು ಮತ್ತು ಮಕ್ಕಳಲ್ಲಿ ಒಬ್ಬರದು ಪ್ರಕೃತಿ ಸ್ವಲ್ಪ ಕೆಡುವದು. ಆದರೆ ಹೆಂಡತಿಯದು ಮಾತ್ರ ಅನುಕೂಲ. ಪ್ರಾಪಂಚಿಕ ಸುಖ ಮನಸ್ಸಿನಂತೆ. ಸಂಗ್ರಹದಲ್ಲಿ ಸ್ವಲ್ಪ ಕೆಚ್ಚ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ನೆರೆಹೊರೆಯ ಪ್ರೀಯರಿಂದ ಸ್ವಲ್ಪ ಉಪದ್ರವ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಶತತಾರಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೩೦, ೧, ೨, ೩ ಅನುಕೂಲ.

ಮೀನ

ಪ್ರಕೃತಿ ಅನುಕೂಲ ಆದರೆ ಮನಸ್ಸಿನಲ್ಲಿ ಒಂದು ಬಗೆಯ ಹುರಹುರಿಯದ್ದು. ಹೆಂಡತಿ ಮತ್ತು ಇತರ ಪ್ರಾಪಂಚಿಕ ಸುಖ ಉತ್ತಮ. ಆದರೆ ಕಡುಗೆಳೆಗೆ ಅತ್ಯಂತ ಕೊಡುವಂಥ ಚಮತ್ಕಾರಿಕ ಪ್ರಸಂಗಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವು ಉತ್ತಮ. ಆದರೆ ಉದ್ಯೋಗದಲ್ಲಿಗಿಂತ ಇತರ ಪ್ರತಿಷ್ಠೆ ಕಡಿಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಅದಕ್ಕಾಗಿ ದ್ರವ್ಯದ ಹೆಚ್ಚ. ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತಕರ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ನೇ ಚರಣಕ್ಕೆ ತೊಂದರೆಯುಂಡಲೆ ಯಶಸ್ಸು. ತಾ. ೩೦, ೧, ೫, ೬ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ ' ಲೋಕ ಶಿಕ್ಷಣ ಟ್ರಸ್ಟದ' ಪರವಾಗಿ ಹ. ರಾ. ಪೋಹರೆ ಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ವರ್‍ಹಾಡನನ್ನು ಹೈದರಾಬಾದಕ್ಕೆ ಸೇರಿಸಲು ನಿಜಾಮರ ಪ್ರಯತ್ನ

(ಮೊದಲನೆಯ ಪುಟದಿಂದ)

ಪ್ರೊ. ಕೂಪಲ್ಯಾಂಡರೆಂಬಂತೆ ಇಂದು ಬ್ರಿಟನ್ನಿನಲ್ಲಿ ಮತ್ತು ಭಾರತೀಯ ಪ್ರಾಂತಗಳಲ್ಲಿ ಪ್ರಚಲಿತವಾಗಿರುವ ಪ್ರಜಾ ಸತ್ತೆಯ ಪದ್ಧತಿಯ ಕಲ್ಪನೆಯು ೧೯ನೆಯ ಶತಮಾನದಲ್ಲಿದ್ದ ಬ್ರಿಟಿಶ ಅಧಿಕಾರಿ ವರ್ಗಕ್ಕಾಗಲಿ ಭಾರತದ ಸಂಸ್ಥಾನಾಧಿಕಾರಿಗಾಗಲಿ ಕಿಂಚಿತ್ತಾದರೂ ಇರಲಿಲ್ಲ. ಇಂದಿನದು ಪ್ರಬುದ್ಧ ಭಾರತ. ಕೇವಲ ಸಂಸ್ಥಾನಾಧೀಶ್ವರರ ಕಾಲು ಹಿಡಿದು ಅವರ ಕೃಪಾಕಟಾಕ್ಷವನ್ನೆದುರು ನೋಡುತ್ತ ಅಂಜಲಿಹಸ್ತರಾಗಿ ನಿಲ್ಲುವ ಪ್ರಜಾವರ್ಗವು ಇಂದು ಭಾರತದಲ್ಲಿ ನೋಡಸಿಗದು. "ರಾಜಾ ಪ್ರತ್ಯಕ್ಷ ದೇವತಾ" ಎಂಬುದು ಹಳೆಯ ಮಾತಾಗಿ ಹೋಯಿತು. ಇಂದಿನ ದ್ರಷ್ಟಾರರು ಅದನ್ನು "ಪ್ರಜಾಃ ಪ್ರತ್ಯಕ್ಷ ದೇವತಾಃ" ಎಂದು ತಿದ್ದಿ ಬಿಟ್ಟಿದ್ದಾರೆ! ಹೀಗೆ ಹೈದರಾಬಾದಕ್ಕಿಂತ ಎಷ್ಟೋ ಪಟ್ಟು ರಾಜಕೀಯ, ಆರ್ಥಿಕ, ನೈತಿಕ ಮತ್ತು ವ್ಯಾವಸಾಯಿಕ ಕ್ಷೇತ್ರಗಳಲ್ಲಿ ಮುಂದೆ ನಡೆದ ವರ್‍ಹಾಡದ ಜನತೆಯು ಯಾವ ಕಾರಣದಿಂದಲೂ ಮೇಲೆ ಹೇಳಿದ ಎಲ್ಲ ದೃಷ್ಟಿಗಳಿಂದ ಹಿಂದುಳಿದ ನಿಜಾಮಸತ್ತೆಯನ್ನು ಮಹಾಪ್ರಸಾದವೆಂದು ಸ್ವೀಕರಿಸಬೇಕೆಂದು ಆಗ್ರಹ ಮಾಡುವುದು ಸರ್ವಥಾ ನ್ಯಾಯ್ಯವಲ್ಲ. ಇದೇ ಕಾರಣದಿಂದ ಮೇಲೆ ಹೇಳಿದ ವರ್‍ಹಾಡದ ಸರ್ವಪಕ್ಷೀಯ ಸಮ್ಮೇಲನದಲ್ಲಿ ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಲಾಯಿತು:—

"ಬ್ರಿಟಿಶರ ಕೊನೆಯ ತೀರ್ಪಿನ ಪ್ರಕಾರ ವರ್‍ಹಾಡವು ನಿಜಾಮರಿಗೆ ಸೇರತಕ್ಕದ್ದಲ್ಲವೆಂದಾಗಿರುವುದರಿಂದ, ವರ್‍ಹಾಡವನ್ನು ನಿಜಾಮರಿಗೆ ಪುನ್ಹ ಕೊಡ ಹೋದರೆ ಬ್ರಿಟಿಶ ಸರಕಾರವು ಅನೇಕ ಸಲ ವರ್‍ಹಾಡದ ಜನತೆಗೆ ಕೊಟ್ಟ ಅಶ್ವಾಸನಗಳನ್ನು ಮುರಿದಂತಾಗುವುದರಿಂದ, ಬ್ರಿಟಶರ ನಿರ್ಗಮನದಿಂದ ಹಿಂದಿನ ಒಪ್ಪಂದಗಳಿಗೆ ಯಾವ ಧಕ್ಕೆಯೂ ಉಂಟಾಗದಿರುವುದರಿಂದ, ಬ್ರಿಟನ್ನು ವರ್‍ಹಾಡವನ್ನು ಪುನಃ ನಿಜಾಮರಿಗೆ ಕೊಡಕೂಡದು. ಐತಿಹಾಸಿಕ, ಶಾಸಕೀಯ ಮತ್ತು ನೈತಿಕ ಕಾರಣಗಳಿಂದ ಮತ್ತು ಸಾರ್ವಭೌಮಾಧಿಕಾರವು ಪ್ರಜೆಗಳದ್ದಲ್ಲದೆ ರಾಜರದ್ದಲ್ಲವೆಂದು ಇಂದಿನ ರಾಜಕೀಯ ಸಿದ್ಧಾಂತವಿರುವುದರಿಂದ ವರ್‍ಹಾಡದ ಮೇಲಿನ ನಿಜಾಮರ ಸಾರ್ವಭೌಮಾಧಿಕಾರ ಕೊನೆಗೊಳ್ಳಬೇಕೆಂಬ ವರಾಡಸ್ಥರ ಕೇಳಿಕೆ ನ್ಯಾಯೋಚಿತವಾದದ್ದು."

ಮೇಲೆ ಹೇಳಿದ ಸಂಗತಿಗಳಿಂದ ನಿಜಾಮರ ಆಕ್ರಮಣಶೀಲತೆ, ಅಧಿಕಾರಲೋಭ ಮತ್ತು ಪ್ರಗತಿವಿರುದ್ಧವಾದ ಆಚಾರ—ಇವು ಸ್ಪಷ್ಟವಾಗುತ್ತವೆ. ಪ್ರಜಾಸತ್ತೆಯ ಈ ಯುಗದಲ್ಲಿ ಯಾವ ಸಂಸ್ಥಾನಾಧೀಶನೂ "ಕರ್ತುಮಕರ್ತುಮನ್ಯಥಾಕರ್ತುಂ" ಶಕ್ತನೆಂಬ ನಿರಂಕುಶಾಧಿಕಾರವನ್ನು ಪ್ರಜೆಗಳ ಮೇಲೆ ನಡೆಯಿಸಲಾರ. "ಯಾವ ಸಂಸ್ಥಾನವೂ ಇಂದು ಸ್ವತಂತ್ರವಾಗಲಾರದು, ಅದರ ಸ್ವಾತಂತ್ರ್ಯವನ್ನು ಹಿಂದುಸ್ತಾದ ಸರಕಾರ ಮನ್ನಿಸದು, ಅದನ್ನು ಮನ್ನಿಸಿದ ಪರ ಸರಕಾರಗಳು ಶತ್ರುಗಳೇ ಸರಿ" ಎಂದು ಕಿವಿಗಡಚಿಕ್ಕುವಂತೆ ಗರ್ಜಿಸಿದ ನೆಹರೂರವರ ವೀರ ಘೋಷಣವು ನಿಜಾಮರ ಕಿವಿಗೆ ಇನ್ನೂ ಬೀಳದಿರಬಹುದೇ? 'ಶಾಪಾದಪಿ ಶರಾದಪಿ' ವರ್‍ಹಾಡವನ್ನು ಪಡೆದೇ ಬಿಡುತ್ತೇನೆಂದು ಭಗೀರಥ ಯತ್ನ ಮಾಡಲು ಸಿದ್ಧತೆ ನಡೆಸಿರುವ ನಿಜಾಮ ಸಾಹೇಬರು ತಮ್ಮ ಆ ಮಹತ್ವಾಕಾಂಕ್ಷೆಯನ್ನು ಬಿಟ್ಟುಕೊಡುವದೆ ಸದ್ಯದ ಪರಿಸ್ಥಿತಿಯಲ್ಲಿ ಸೂಕ್ತವೆನಿಸುವದು.

ಸೆಳೆತ

(೧೫ನೇ ಪುಟದಿಂದ)

ಮತ್ತೆ ಕೋಣೆ, ರಾತ್ರಿ, ನಲಿದುದು, ಮಾತನಾಡಿದುದು, ಭಾಷೆ ತೆಗೆದುಕೊಂಡುದು! ಅವಳ ತಾಯಿ ಒಳಗಿಂದ ಕಾಫಿಗೆ ಕರೆಯುವಾಗ ಅವಳ ತಲೆ ಪೂರ್ಣ ಬರಿದಾಗಿತ್ತು.

ಪುನಃ ಒಂಭತ್ತು ಮುಕ್ಕಾಲು. ಅವನು ಸಾಲೆಗೆ ಎಂದಿನಂತೆ ಹೋಗುತಿದ್ದ. ನಿರುಪಮ ಅವನಿಗೆ ತುಸು ದೂರವಾಗಿ ಹೋಗುತ್ತಿದ್ದಳು. ಲೀಲ? ಸಾಲೆಗೆ ಹೋದಳೆನ್ನುವ: ಹಿಂದಿನ ದಿನದಂತೆ ಬಿರುಸಿನಿಂದಲ್ಲ, ವೇಗದಿಂದಲ್ಲ—ಅವರಿಬ್ಬರ ನೋಟವನ್ನು ತಪ್ಪಿಸಿಕೊಳ್ಳಲು, ಬಹಳ ಮೆಲ್ಲಗೆ.

ಅವನ ಸೆಳೆತ ಅವಳನ್ನು ಈಗ ಬಿಟ್ಟಿತು.